ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 । ಸಂಚಿಕೆ 45 । ನವೆಂಬರ್ 2–8, 2020 । ಪುಟ 16 । ರೂ. 10

https://janashakthi.wordpress.com e-mail : js_weekly@yahoo.com



ವಿಜ್ಞಾನ ಮತ್ತು ಎಡಪಂಥ



ಜಮ್ಮು-ಕಾಶ್ಮೀರದಲ್ಲಿ ಜನತಾ ಮೈತ್ರಿಕೂಟದ ಸವಾಲು

ಬೊಲಿವಿಯಾ: ಐತಿಹಾಸಿಕ ಗೆಲುವು





ಕಾರ್ಪೊರೇಟ್ Vs ಜನತಾ ಮಾಧ್ಯಮ

ಕೋವಿಡ್ ಮತ್ತು ವಿಜ್ಞಾನ





ಮಿತಿಮೀರಿದ ಮೀನುಗಾರಿಕೆ

ಅಮೆರಿಕಾದೊಂದಿಗೆ ಮಿಲಿಟರಿ ಸಖ್ಯತೆ ನಮ್ಮ ರಾಷ್ಟ್ರೀಯ ಹಿತದಲ್ಲಿಲ್ಲ

ದೇಶದ ಭದ್ರತೆಗೆ ಅಮೆರಿಕಾದ ಅಡಿಯಾಳು ಸಖ್ಯತೆಯ ಅಗತ್ಯವೇನಿಲ್ಲ



ಅಕ್ಟೋಬರ್ 27 ರಂದು ದಿಲ್ಲಿಯಲ್ಲಿ ಭಾರತೀಯ ಮತ್ತು ಅಮೆರಿಕನ್ ರಕ್ಷಣಾ ಹಾಗೂ ವಿದೇಶಾಂಗ ವ್ಯವಹಾರಗಳ ಮಂತ್ರಿಗಳ ನಡುವಿನ 2+2 ಸಭೆಯ ಫಲಿತಾಂಶವಾಗಿ 'ಮೂಲ ವಿನಿಮಯ ಮತ್ತು ಸಹಕಾರ ಒಪ್ಪಂದ' (Basic Exchange and Cooperation Agreement -BECA)ಕ್ಕೆ ಸಹಿ ಹಾಕಲಾಗಿದೆ. ಇದು ಭೌಗೋಳಿಕ-ಅವಕಾಶದ ಸಹಕಾರದ ಒಪ್ಪಂದ.

ಭಾರತದ ಸ್ವತಂತ್ರ ವಿದೇಶಾಂಗ ಧೋರಣೆಯ ಮೇಲೆ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯ ಮೇಲೆ ದೀರ್ಘಾವಧಿಯ ಪರಿಣಾಮಗಳನ್ನು ಬೀರಲಿರುವ ಇದು ನಮ್ಮ ರಾಷ್ಟ್ರೀಯ ಹಿತಗಳಿಗೆ ಅನುಗುಣವಾಗಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಅವರ ಜಂಟಿ ಹೇಳಿಕೆ ಆತಂಕ ವ್ಯಕ್ತಪಡಿಸಿದೆ.

ಈ ಒಪ್ಪಂದದೊಂದಿಗೆ ಅಮೆರಿಕಾದ ಜತೆಗೆ ಒಂದು ಮಿಲಿಟರಿ ಸಖ್ಯತೆಯ ಬುನಾದಿಪ್ರಾಯ ಎನ್ನಲಾದ ಎಲ್ಲ ಒಪ್ಪಂದಗಳೂ ಪೂರ್ಣಗೊಂಡಂತಾಗಿದೆ. ಅಲ್ಲದೆ ಇದು 'ಕ್ವಾಡ್'(ಚತುರ್ರಾಷ್ಟ್ರ) ಕೂಟದ ನಾಲ್ಕು ಭಾಗೀದಾರರ ನಡುವೆ 'ಮಲಬಾರ್ ಸಮರಾಭ್ಯಾಸ' ಎಂದು ಹೆಸರಿಸಿರುವ ಜಂಟಿ ನಾವಿಕ ಸಮರಾಭ್ಯಾಸ ನವಂಬರ್ ತಿಂಗಳಲ್ಲಿ ನಡೆಯಲಿದೆ ಎಂಬ ಪ್ರಕಟಣೆಯ ಹಿನ್ನೆಲೆಯಲ್ಲಿ ಬಂದಿದೆ.

ಈ ಕ್ರಮಗಳನ್ನು ಇತ್ತೀಚೆಗೆ ಲಡಾಖ್‌ನಲ್ಲಿ ಚೀನಾದೊಂದಿಗೆ ಉಂಟಾದ ಉದ್ವಿಗ್ನ ಪರಿಸ್ಥಿತಿಯ ಹೆಸರಲ್ಲಿ ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ ಈ ಒಪ್ಪಂದಗಳಿಗೆ ಇತ್ತೀಚಿನ ಈ ವಿವಾದಕ್ಕಿಂತ ಎಷ್ಟೋ ಮೊದಲಿಂದಲೇ ಸಿದ್ಧತೆ ನಡೆಯುತ್ತ ಬಂದಿದೆ ಎಂಬ ಸಂಗತಿಯತ್ತ ಈ ಜಂಟಿ ಹೇಳಿಕೆ ಗಮನ ಸೆಳೆದಿದೆ. "ಸಮರ ಸಾಗಾಣಿಕೆ ವಿನಿಮಯ ಒಪ್ಪಂದ'(Logistics Exchange Agreement), 'ಸಂವಹನ ಭದ್ರತಾ ಒಪ್ಪಂದ'(Communications Security Agreement) ಮತ್ತು ಚತುರ್ರಾಷ್ಟ್ರ ವೇದಿಕೆಯನ್ನು ಮೇಲ್ದರ್ಜೆಗೆ ಏರಿಸುವುದು ಇವೆಲ್ಲ ಕಳೆದ ಎರಡು ವರ್ಷಗಳಲ್ಲಿ, ಲಡಾಖ್ ಗಡಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗುವ ಎಷ್ಟೋ ಮೊದಲಿಗೆ ನಡೆದಿವೆ ಎಂಬುದನ್ನು ಗಮನಿಸಬೇಕಾಗಿದೆ.

ಈ ಒಪ್ಪಂದಗಳು ಭಾರತೀಯ ಸಶಸ್ತ್ರ ಪಡೆಗಳನ್ನು ಅಮೆರಿಕನ್ ಮಿಲಿಟರಿ ಮತ್ತು ಸಾಮರಿಕ ವ್ಯೂಹದೊಂದಿಗೆ ಬಿಗಿದಿವೆ ಸಂವಹನ ಮತ್ತು ಇಲೆಕ್ಟ್ರಾನಿಕ್ ವ್ಯವಸ್ಥೆಗಳನ್ನು ಒಂದಕ್ಕೊಂದು ಕೂಡಿಸುವುದು ಭಾರತೀಯ ರಕ್ಷಣಾ ಸಂರಚನೆಯ ಸಮಗ್ರತೆಯನ್ನು ಮತ್ತು ಸ್ವತಂತ್ರವಾಗಿ ನಿರ್ಣಯ ಕೈಗೊಳ್ಳುವ ಅವಕಾಶದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ಈ ಒಪ್ಪಂದಗಳು ನಮ್ಮನ್ನು ಅಮೆರಿಕ??? ಶಸ್ತ್ರಾಸ್ತ್ರಗಳ ಮೇಲೆ ಅವಲಂಬಿಸುವಂತೆ ಮಾಡಲಿದೆ, ಇವುಗಳ ತಂತ್ರಜ್ಞಾನ ಮತ್ತು ವ್ಯವಸ್ಥೆ ಅಮೆರಿಕ ಸಂಯುಕ್ತ ಸಂಸ್ಥಾನಗಳ ಹತೋಟಿಯಲ್ಲಿರುತ್ತವೆ ಎಂದು ಜಂಟಿ ಹೇಳಿಕೆ ಎಚ್ಚರಿಸಿದೆ.

ಆ ದೇಶದೊಂದಿಗೆ ಮೂಡಿ ಬರುತ್ತಿರುವ ಮಿಲಿಟರಿ ಸಖ್ಯತೆ ಭಾರತದ ಸ್ವತಂತ್ರ ವಿದೇಶಾಂಗ ಧೋರಣೆಯ ಮೇಲೆ ಮತ್ತು ವ್ಯೂಹಾತ್ಮಕ ಸ್ವಾಯತ್ತತೆಯ ಮೇಲೆ ದೀರ್ಘಾವಧಿಯ ದುಷ್ಪರಿಣಾಮಗಳನ್ನು ಬೀರಲಿದೆ. ಇದು ನಮ್ಮ ರಾಷ್ಟ್ರೀಯ ಹಿತಗಳಿಗೆ ಅನುಗುಣವಾಗಿಲ್ಲ. ಕೇಂದ್ರ ಸರಕಾರ ಚೀನಾದೊಂದಿಗೆ ಗಡಿ ಪ್ರಶ್ನೆಯನ್ನು ಬಗೆಹರಿಸಿಕೊಳ್ಳಲು ಅತ್ಯುನ್ನತ ರಾಜಕೀಯ ಮತ್ತು ರಾಜತಾಂತ್ರಿಕ ಮಟ್ಟಗಳಲ್ಲಿ ಮಾತುಕತೆಗಳನ್ನು ಮುಂದುವರೆಸಬೇಕು. ಇದಕ್ಕಾಗಿ ಭಾರತಕ್ಕೆ ಏಷ್ಯಾದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಭೌಗೋಳಿಕ-ರಾಜಕೀಯ ಕಾರ್ಯವ್ಯೂಹದ ಅಡಿಯಾಳು ಸಖ್ಯತೆಯ ಅಗತ್ಯವೇನೂ ಇಲ್ಲ ಎಂದು ಸಿಪಿಐ(ಎಂ) ಮತ್ತು ಸಿಪಿಐ ಹೇಳಿವೆ.

ಬೆಲೆ ಸೂಚ್ಯಂಕದ ಆಧಾರ ವರ್ಷ ಬದಲಾವಣೆಯಲ್ಲೂ ಕಾರ್ಮಿಕ-ವಿರೋಧಿ ನಿಲುವು

ನಿಜ ಬೆಲೆಯೇರಿಕೆಗಳನ್ನು ಮರೆ ಮಾಚುವ ಹುನ್ನಾರ-ಸಿಐಟಿಯು ಖಂಡನೆ

ಬಿಜೆಪಿ ಸರಕಾರದ ಕಾರ್ಮಿಕ ಮಂತ್ರಿಗಳು ಮತ್ತೊಂದು ಕಾರ್ಮಿಕ-ವಿರೋಧಿ ಕ್ರಮವನ್ನು ಪ್ರಕಟಿಸಿದ್ದಾರೆ. 'ಕೈಗಾರಿಕಾ ಕಾರ್ಮಿಕರ ಬಳಕೆದಾರ ಬೆಲೆ ಸೂಚ್ಯಂಕ' (Consumer Price Iindex-Industrial Workers)ದ ಆಧಾರ ವರ್ಷವನ್ನು 2001ರಿಂದ 2016ಕ್ಕೆ ಬದಲಾಯಿಸುವ ವಿಷಯದಲ್ಲಿ ಎಲ್ಲ ಕಾರ್ಮಿಕ ಸಂಘಟನೆಗಳು ಆಗಸ್ಟ್ 25, 2020ರಂದು ಸಲ್ಲಿಸಿದ ಜಂಟಿ ಪತ್ರದಲ್ಲಿ ಎತ್ತಿದ ಪ್ರಶ್ನೆಗಳು ಮತ್ತು ನೀಡಿದ ಸಲಹೆಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಈ ಪ್ರಕಟಣೆ ಹೊರಡಿಸಲಾಗಿದೆ. ಇದನ್ನು ಸಿಐಟಿಯು ಬಲವಾಗಿ ಖಂಡಿಸಿದೆ.

ಕಾರ್ಮಿಕ ಇಲಾಖೆಯ ಅಡಿಯಲ್ಲಿ ಲೇಬರ್ ಬ್ಯುರೊ ಕೈಗೊಂಡಿರುವ ಕ್ರಮಗಳೆಲ್ಲವೂ ಸಂಪೂರ್ಣವಾಗಿ ಸ್ವೇಚ್ಛಾಚಾರದಿಂದ ಕೂಡಿದೆ, ಆವಶ್ಯಕ ವಸ್ತುಗಳ ಬೆಲೆಯೇರಿಕೆಯ ನಿಜವಾದ ಪ್ರಭಾವ ಬಿಂಬಿತವಾಗದಂತೆ ಅದನ್ನು ಇಳಿಸುವ ಮತ್ತು ಕಾರ್ಮಿಕರನ್ನು ಅವರಿಗೆ ನ್ಯಾಯಬದ್ಧವಾಗಿ ಬೆಲೆಯೇರಿಕೆಗಳಿಗೆ ಅನುಗುಣವಾಗಿ ತುಟ್ಟಿಭತ್ಯೆಯ ಮೂಲಕ ಸಿಗಬೇಕಾದ ಪರಿಹಾರವನ್ನು ಕಡಿತಗೊಳಿಸುವ ದುರುದ್ದೇಶದಿಂದ ಕೂಡಿದವುಗಳು.

* ಬಳಕೆ ಸಾಮಗ್ರಿಗಳಲ್ಲಿ ಆಹಾರ ಸಾಮಗ್ರಿಗಳ ಭಾಗ ಇದುವರೆಗೆ 46.2ಶೇ. ಇತ್ತು. ಅದನ್ನು 39ಶೇ.ಕ್ಕೆ ತೀವ್ರವಾಗಿ ಇಳಿಸಲಾಗಿದೆ. ಕಾರ್ಮಿಕರ ಬಳಕೆ ಮಾದರಿ ಬದಲಾಗಿದೆ, ಆದ್ದರಿಂದ ಇದನ್ನು ಇಳಿಸಲಾಗಿದೆ ಎಂಬ ಕಾರ್ಮಿಕ ಮಂತ್ರಿಗಳ ಸಮರ್ಥನೆ, ಆರ್ಥಿಕ ನಿಧಾನಗತಿಯ ಸಮಯದಲ್ಲೂ ನಿರ್ಧಿಷ್ಟವಾಗಿ ಆಹಾರ ಸಾಮಗ್ರಿಗಳ ಬೆಲೆ ಏರುತ್ತಲೇ ಇರುವ ಸಮಯದಲ್ಲಿ, ಹಾಸ್ಯಾಸ್ಪದ ಮಾತ್ರವೇ ಅಲ್ಲ; ಮೋದಿ ಸರಕಾರದ ಅಡಗಿಸಿಟ್ಟ ಸಿಎಸ್‌ಒ ಅಂದಾಜು ಪ್ರಕಾರ, ದುಡಿಯುವ ಜನಗಳ ಸರಾಸರಿ ಬಳಕೆ ಖರ್ಚಿನ ಪ್ರಮಾಣ ತೀವ್ರವಾಗಿ ಇಳಿಮುಖಗೊಂಡಿದೆ ಎಂದಿರುವಾಗ, ಇತ್ತೀಚೆಗೆ ಪ್ರಕಟವಾದ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ 107 ದೇಶಗಳಲ್ಲಿ 94ನೆಯದಾಗಿದ್ದು, ನಮ್ಮ ನೆರೆಯ ಬಾಂಗ್ಲಾದೇಶ ಮತ್ತು ಪಾಕಿಸ್ತಾನಕ್ಕಿಂತಲೂ ಕೆಳಗಿರುವಾಗ ದೇಶದ ಕಾರ್ಮಿಕ ಮೇಲೆ ಮಾಡಿರುವ ಒಂದು ಕ್ರೂರ ಜೋಕ್ ಕೂಡ ಆಗಿದೆ ಎಂದು ಸಿಐಟಿಯು ಆಕ್ರೋಶ ವ್ಯಕ್ತಪಡಿಸಿದೆ.

* ಇನ್ನೊಂದು ವಂಚನೆ ಮಾಡಿರುವುದು, 2016 ಆಧಾರ ವರ್ಷದ ಸೂಚ್ಯಂಕಗಳನ್ನು 2001ರ ಸೂಚ್ಯಂಕಗಳಿಗೆ ಪರಿವರ್ತಿಸುವ ಗುಣಕದಲ್ಲಿ. ಈ ಹಿಂದೆ ಆಧಾರವರ್ಷವನ್ನು 1960ರಿಂದ 1982ಕ್ಕೆ ಬದಲಾಯಿಸುವಾಗ 22 ವರ್ಷಗಳ ಅಂತರಕ್ಕೆ 4.93 ಗುಣಕವನ್ನು ನಿಗದಿ ಮಾಡಲಾಗಿತ್ತು; 1982ರಿಂದ 2001ಕ್ಕೆ ಬದಲಿಸುವಾಗ 19 ವರ್ಷಗಳ ಅಂತರಕ್ಕೆ ಗುಣಕ 4.63 ಎಂದು ನಿಗದಿ ಪಡಿಸಲಾಯಿತು. ಆದರೆ ಈ ಬಾರಿ ಅಂತರ 16 ವರ್ಷಗಳಾಗಿದ್ದು ಕೇವಲ 3 ವರ್ಷ ಕಡಿಮೆಯಾಗಿದ್ದರೂ, ಗುಣಕದಲ್ಲಿ ಭಾರೀ ಇಳಿಕೆ ಮಾಡಲಾಗಿದೆ, 2..88 ಕ್ಕೆ ಇಳಿಸಲಾಗಿದೆ, ಅಂದರೆ 62ಶೇ. ಇಳಿಕೆ. ಇದಕ್ಕಿಂತ ದೊಡ್ಡ ಮೋಸ ಸಾಧ್ಯವೇ ಎಂದು ಸಿಐಟಿಯು ಪ್ರಶ್ನಿಸಿದೆ.

* ಯಾವುದೇ ಸೂಚ್ಯಂಕದಲ್ಲಿ ಆಧಾರವರ್ಷ ಆ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸಾಮಾನ್ಯ (normal) ವರ್ಷವಾಗಿರಬೇಕು. ಆದ್ದರಿಂದ 2016ನ್ನು ಆಧಾರವರ್ಷವಾಗಿ ಆಯ್ಕೆ ಮಾಡಿರುವಲ್ಲಿಯೂ ಮೋಸವಿದೆ. ಇದನ್ನು ಕೂಡ ಬೆಲೆಯೇರಿಕೆಗಳ ಪ್ರಭಾವವನ್ನು ಸೂಚ್ಯಂಕದಲ್ಲಿ ಕುಗ್ಗಿಸಲಿಕ್ಕಾಗಿಯೇ ಮಾಡಲಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಜುಲೈ 2020ರ ವರೆಗೂ 2013-14ನ್ನು ಆಧಾರ ವರ್ಷವಾಗಿ ಮಾಡಬೇಕು ಎಂದು ಲೆಕ್ಕಾಚಾರ ನಡೆಯುತ್ತಿತ್ತು. ಅದನ್ನು 2016ಕ್ಕೆ ಬದಲಾಯಿಸಬೇಕು ಎಂದು ಮೋದಿ ಸರಕಾರಕ್ಕೆ ಆಮೇಲೆ ಹೊಳೆದಿರುವಂತೆ ಕಾಣುತ್ತದೆ. ಏಕೆಂದರೆ, ಅದು ಕುಖ್ಯಾತ ನೋಟುರದ್ಧತಿಯ ವರ್ಷ-ಅದರಿಂದಾಗಿ 2016 ಕೊನೆಯ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆಗಳು ನಿಂತುಹೋಗಿದ್ದು, ಅದು ಕೈಗಾರಿಕಾ ಕಾರ್ಮಿಕರ ಬಳಕೆ ವಸ್ತುಗಳ ಬೆಲೆಗಳ ಮೇಲೆ ನಕಾರಾತ್ಮಕ ಪ್ರಭಾವ ಬೀರಿದ್ದ ಅವಧಿ.

ಬಹಳ ಸಮಯದಿಂದ ಮಾಲಕರ ಸಂಘಟನೆಗಳು ಆರ್ಥಿಕ ನಿಧಾನಗತಿಯ ಸಮಯದಲ್ಲಿ ಚರ ತುಟ್ಟಿಭತ್ಯೆಗಳನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿಕೊಂಡು ಬಂದಿವೆ. ತನ್ನ ಬಂಡವಾಳಶಾಹಿ ಬಾ???ಗಳ ಆಗ್ರಹಕ್ಕೆ ಮೋದಿ ಸರಕಾರ ಹಿಂಭಾಗಿಲಿನಿಂದ ಸ್ಪಂದಿಸಿದೆ ಎಂದು ಸಿಐಟಿಯು ಹೇಳಿದೆ.

ಇದು ಬಿಜೆಪಿ ಸರಕಾರದ ಇನ್ನೊಂದು ಕಾರ್ಪೊರೇಟ್-ಪರ, ಕಾರ್ಮಿಕ-ವಿರೋಧಿ ಕ್ರಮ ಎಂದು ಖಂಡಿಸಿರುವ ಸಿಐಟಿಯು, ಕಾರ್ಮಿಕರನ್ನು ಲೂಟಿ ಮಾಡಿ ಕಾರ್ಪೊರೇಟ್‌ವರ್ಗಕ್ಕೆ ಪ್ರಯೋಜನ ಕಲ್ಪಿಸುವ ಈ ಕ್ರಮವನ್ನು ಪ್ರತಿಭಟಿಸಬೇಕು, ನವಂಬರ್ 26 ರ ಸಾರ್ವತ್ರಿಕ ಮುಷ್ಕರವನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಬೇಕು ಎಂಧು ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳಿಗೆ ಕರೆ ನೀಡಿದೆ.

ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಡುತ್ತಿರುವ ಇಬ್ಬರು ಧೀರ ಮಹಿಳೆಯರ ಮೇಲೆ ಹಲ್ಲೆಗಳು: ಎಐಡಿಡಬ್ಲ್ಯುಎ ಖಂಡನೆ

ಭಾರತ ಸರಕಾರ ಕಳೆದ ವರ್ಷ ಆಗಸ್ಟ್ 5 ರಿಂದ ಜಮ್ಮು ಮತ್ತು ಕಾಶ್ಮೀರದ ಜನತೆಯ ಹಕ್ಕುಗಳ ಮೇಲೆ ಮಾಡುತ್ತಿರುವ ದಾಳಿಗಳನ್ನು ಖಂಡತುಂಡವಾಗಿ ವಿರೋಧಿಸುತ್ತಿರುವ 'ಕಾಶ್ಮೀ??? ಟೈಮ್ಸ್'ನ ಸಂಪಾದಕಿ ಅನುರಾಧಾ ಭಾಸಿನ್ ಮೇಲೆ ಇತ್ತೀಚೆಗೆ ಜಮ್ಮುವಿನಲ್ಲಿ ಹಲ್ಲೆ ನಡೆಸಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ.

ಅನುರಾಧಾ ಭಾಸಿನ್ ಸಂಪರ್ಕ ವ್ಯವಸ್ಥೆಯ ಮೇಲೆ ಸಂಪೂರ್ಣ ನಿಷೇಧ ಹೇರಿದ ಸರಕಾರದ



ಕ್ರಮದ ವಿರುದ್ಧ ಸುಪ್ರಿಂ ಕೋರ್ಟಿಗೆ ಹೋಗಿದ್ದರು. ಕಳೆದ ಮೂರು ವಾರಗಳಲ್ಲಿ ಅವರನ್ನು ಸರಕಾರದಿಂದ ಮಂಜೂರಾಗಿದ್ದ ನಿವಾಸದಿಂದ ಬಲವಂತದಿಂದ ಹೊರಹಾಕಲಾಗಿದೆ ಮತ್ತು ಆಕೆಯ ಪತ್ರಿಕೆಯ ಕಚೇರಿಗೆ ಬೀಗ ಹಾಕಲಾಗಿದೆ. ಆದರೂ ಆಕೆ ತಾನು ಸತ್ಯ ಹೇಳುವುದನ್ನು ಮುಂದುವರೆಸುವುದಾಗಿ ಪ್ರಕಟಿಸಿದ್ದಾರೆ.

ಇನ್ನೊಂದು ಆಘಾತಕಾರೀ ಘಟನೆಯಲ್ಲಿ , ಅಡ್ವೊಕೇಟ್ ದೀಪಿಕಾ ರಾಜಾವತ್ ಜನಜಂಗುಳಿಯ ಹಲ್ಲೆಯನ್ನು ಎದುರಿಸಬೇಕಾಗಿ ಬಂತು. ಜನಜಂಗುಳಿಯನ್ನೇನೋ ಚದುರಿಸಲಾಯಿತು. ಆದರೆ ಆಕೆಯ ಮೇಲೆಯೇ 'ಹಿಂದೂ ಭಾವನೆಗಳನ್ನು ಘಾಸಿಗೊಳಿಸಿದ್ದಾರೆ' ಎಂದು ಎಫ್‌ಐಆರ್ ಹಾಕಲಾಗಿದೆ. ವರ್ಷವಿಡೀ ಮಹಿಳೆಯರಿಗೆ ಕಿರುಕುಳ ಕೊಟ್ಟು, ಹಿಂಸಿಸಿ ನವರಾತ್ರಿಯ ದಿನಗಳಲ್ಲಿ ಮಾತ್ರ 'ಪೂಜಿಸುವ' ಗೋಸುಂಬೆತನವನ್ನು ಗೇಲಿ ಮಾಡುವ ಒಂದು ಕಾರ್ಟೂನನ್ನು ಆಕೆ ಫಾರ್ವರ್ಡ್ ಮಾಡಿದ್ದೇ 'ಹಿಂದೂ ಭಾವನೆಗಳನ್ನು ಘಾಸಿಗೊಳಿಸಿದ' ಆ ಕೃತ್ಯ. ಗಮನಾರ್ಹವೆಂದರೆ ಎಫ್‌ಐಆರ್ ಹಾಕಿದ ದಿನ ಅವರೂ ನವರಾತ್ರಿ ವ್ರತದಲ್ಲಿದ್ದರು.

ಈಕೆ ಜಮ್ಮು ಮತ್ತು ಕಾಶ್ಮೀರದಲ್ಲಿ ಒಂದು



ದೇವಸ್ಥಾನದ ಪೂಜಾರಿ ಮತ್ತು ಇತರರು ಬಕರವಾಲ್ ಅಲೆಮಾರಿ ಸಮುದಾಯದ 8 ವರ್ಷದ ಹೆಣ್ಣುಮಗುವಿನ ಮೇಲೆ ಅತ್ಯಾಚಾರ ನಡೆಸಿ, ಚಿತ್ರಹಿಂಸೆ ಕೊಟ್ಟು ಸಾಯಿಸಿದ ಕೇಸಿನಲ್ಲಿ ಧೈರ್ಯದಿಂದ ಹೋರಾಡಿದ ವಕೀಲೆ. ವಾಸ್ತವವಾಗಿ ಇದೇ ಸಂಘ ಪರಿವಾರದ ದ್ವೇಷಕ್ಕೆ ಇದೇ ಕಾರಣ

ಹೇಡಿತನದ ಬೆದರಿಕೆಗಳಿಗೆ ತಲೆಬಾಗಲು ನಿರಾಕರಿಸಿರುವ ಈ ಇಬ್ಬರು ಧೀರಮಹಿಳೆಯರ ಬೆಂಬಲಕ್ಕೆ ನಿಲ್ಲುವುದಾಗಿ ಹೇಳಿರುವ ಎಐಡಿಡಬ್ಲ್ಯುಎ, ಅವರ ಹೋರಾಟಗಳಿಗೆ ಸೌಹಾರ್ದ ವ್ಯಕ್ತಪಡಿಸುತ್ತ ಸರಕಾರ ಅವರ ಸುರಕ್ಷತೆಯನ್ನು ಖಾತ್ರಿಪಡಿಸಬೇಕು, ಅವರಿಗೆ ನ್ಯಾಯ ಸಿಗಬೇಕು ಎಂದು ಆಗ್ರಹಿಸಿದೆ.

ಸಂಪಾದಕೀಯ

ಕರ್ನಾಟಕ ಕರಾವಳಿಯಲ್ಲಿ ಮಿತಿಮೀರಿದ ಮೀನುಗಾರಿಕೆ

ಕರ್ನಾಟಕದ ಕಡಲಲ್ಲಿ ಮೀನುಗಾರಿಕೆ ಮಿತಿಮೀರಿದೆ. ಕಡಲ ಮೀನುಗಾರಿಕೆಯಲ್ಲಿ ಬಂಗಡೆ, ಭೂತಾಯ್ ಮುಂತಾದ ಮೀನುಗಳ ಲಭ್ಯತೆ ಗಣನೀಯವಾಗಿ ಕುಸಿದಿದೆ. ಒಂದು ವರದಿಯ ಪ್ರಕಾರ ಈ ಎರಡು ವಿಧಗಳ ಮೀನುಗಳ ಲಭ್ಯತೆ 2017 ಮತ್ತು 2018 ರ ನಡುವೆ ಅನುಕ್ರಮವಾಗಿ ಶೇಕಡಾ 59 ರಿಂದ ಶೇಕಡ 22 ಕ್ಕೆ ಕುಸಿದಿದೆ. ಇದು ಜನಜೀವನದ ಮೇಲೆ ಮಾತ್ರವಲ್ಲ ಕಡಲ ತೀರದ ಜನರ ಆಹಾರ ಭದ್ರತೆಯ ಮೇಲೂ ಪರಿಣಾಮ ಬೀರುತ್ತದೆ.

ಸಮಸ್ಯೆಯ ಒಂದು ಕಾರಣ ಏನೆಂದರೆ ಈ ಮೀನುಗಳು ಆಹಾರವಾಗಿಯೂ ಮೀನಿನೆಣ್ಣೆ ತಯಾರಿಸುವ ಕಾರ್ಖಾನೆಗೆ ಅವಶ್ಯ ಕಚ್ಚಾ ಪದಾರ್ಥಗಳಾಗಿ ಬಳಕೆಯಾಗುತ್ತಿರುವುದು. ಇಂತಹ ಕಾರ್ಖಾನೆಗಳು ಕರಾವಳಿ ಕರ್ನಾಟಕದಲ್ಲಿ ಕೇಂದ್ರೀಕರಿಸಿವೆ. ಕರ್ನಾಟಕದಲ್ಲಿ ಇಂತಹ 34 ಬೃಹತ್ ಕಾರ್ಖಾನೆಗಳು ಇವೆ. 15 ಅತಿ ದೊಡ್ಡ ಮೀನಿನೆಣ್ಣೆ ರಫ್ತು ಮಾಡುವ ಕಾರ್ಖಾನೆಗಳು ಸಹ ಕರ್ನಾಟಕದಲ್ಲಿವೆ.

ಈ ಕಾರ್ಖಾನೆಗಳು ಅಧಿಕ ಪೌಷ್ಠಿಕಾಂಶಗಳಿರುವ ಮೀನುಗಳನ್ನು ಮೀನು ಸಾಕಾಣಿಕೆಗೆಬೇಕಾಗುವ ಮೀನು ಆಹಾರವನ್ನು ತಯಾರಿಸಲು ಬಳಸುತ್ತವೆ. ಕೃಷಿ ಹಾಗೂ ಕೋಳಿ ಸಾಕಾಣಿಗೂ ಮೀನುಗಳ ಬಳಕೆಯಾಗುತ್ತದೆ.

ಮಿತಿಮೀರಿದ ಮೀನುಗಾರಿಕೆ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ದೊಡ್ಡ ದೊಡ್ಡ ವರ್ತಕರು ದೊಡ್ಡ ಪ್ರಮಾಣದಲ್ಲಿ ಮೀನು ಖರೀದಿ ಮಾಡಿ ಶೀತಲೀಕೃತ ಉಗ್ರಾಣಗಳಲ್ಲಿ ದಾಸ್ತಾನು ಮಾಡಿ ಇಟ್ಟು ಬೆಲೆಗಳು ಏರಿದಾಗ ಮಾರಾಟ ಮಾಡುತ್ತಾರೆ.

ಕರ್ನಾಟಕದ ಕಡಲಲ್ಲಿ ಯಾಂತ್ರೀಕೃತ ದೋಣಿಗಳ ಮೂಲಕ ಬಲೆ ಬೀಸಿ ಮೀನು ಹಿಡಿಯುವಾಗ ದೊಡ್ಡ ಪ್ರಮಾಣದ ಮರಿ ಮೀನುಗಳು ನೀರಿನಿಂದ ಹೊರಬಿದ್ದು ನಾಶವಾಗುತ್ತವೆ. ಇದು ಸಹ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ಕಡಲಿನಲ್ಲಿ ಇಂತಹ ಮೀನುಗಳ ಪ್ರಮಾಣ ಗಣನೀಯವಾಗಿ ಕುಸಿಯಲು ಇದು ಒಂದು ಕಾರಣವಾಗಿದೆ. ಬಂಗಡೆ ಮೀನು ದೊಡ್ಡ ಪ್ರಮಾಣದಲ್ಲಿ ದೊರೆಯುತ್ತಿತ್ತು. 2017 ಮತ್ತು 2018 ರಲ್ಲಿ ವಾಣಿಜ್ಯ ದೃಷ್ಟಿಯಿಂದ ಪ್ರಥಮ ಸ್ಥಾನದಲ್ಲಿದ್ದ ಈ ಮೀನು 2019ಕ್ಕೆ 5ನೇ ಸ್ಥಾನಕ್ಕೆ ಕುಸಿಯಿತು. 2018 ಭೂತಾಯ್ ಮೀನು ಕೇವಲ 40,000 ಟನ್ ಲಭ್ಯವಾಗಿತ್ತು. 2014ಕ್ಕೆ ಹೋಲಿಸಿದರೆ ಶೇಕಡ 72 ಕುಸಿತ ಉಂಟಾಯಿತು. ಈ ಪ್ರಮಾಣದ ಕುಸಿತದಿಂದಾಗಿ ಮೀನಿನೆಣ್ಣೆ ರಫ್ತು ವಾಣಿಜ್ಯವು ಅಷ್ಟೇ ಪ್ರಮಾಣದಲ್ಲಿ ಕುಸಿಯಿತು.

ತಜ್ಞರ ಅಭಿಪ್ರಾಯ ಪ್ರಕಾರ ಮರಿ ಮೀನುಗಳ ಅನಿಯಂತ್ರಿತ ಮೀನುಗಾರಿಕೆಯಿಂದಾಗಿ ಮತ್ಸ್ಯ ಸಂಪತ್ತು ಲೂಟಿಯಾಗುತ್ತದೆ. ಕಡಲ ಉದರ ಬರಿದಾಗುತ್ತಿದೆ. ಮೀನಿನ ಬೆಲೆ ಗಗನಕ್ಕೇರುತ್ತದೆ. ಕಡಿಮೆ ಆದಾಯದ ಕುಟುಂಬಗಳು ಸುಲಭವಾಗಿ ಸಿಗುತ್ತಿದ್ದ ಪೌಷ್ಠಿಕ ಆಹಾರದಿಂದ ವಂಚಿತರಾಗುತ್ತಿದ್ದಾರೆ. ಮರಿ ಮೀನುಗಳು ಬಲೆಯಲ್ಲಿ ಸಿಕ್ಕಿಹಾಕಿಕೊಂಡು ನಾಶವಾಗುವುದನ್ನು ತಡೆಯಲು 35 mm ನ ಚೌಕಾಕಾರದ ಬಲೆಗಳನ್ನೇ ಬಳಕೆ ಮಾಡಬೇಕೆಂದು ನಿರ್ದೇಶನವಿದ್ದರೂ ಬಹುತೇಕ ದೋಣಿಗಳು ಚಿಕ್ಕ ಗಾತ್ರದ ವಜ್ರ ಆಕಾರದ ಬಲೆಗಳನ್ನೇ ಉಪಯೋಗಿಸಿ ಮರಿ ಮೀನುಗಳ ಮಾರಣ ಹೋಮಕ್ಕೆ ಕಾರಣ ಆಗುತ್ತವೆ.

ಮೀನುಗಾರಿಕೆಯಲ್ಲಿ ಹಿಡಿಯ ಬಹುದಾದ ಮೀನುಗಳ ಕನಿಷ್ಠ ಗಾತ್ರವನ್ನು ಕಾನೂನಾತ್ಮಕವಾಗಿ ನಿಗದಿಪಡಿಸಿದ್ದು ಕೇರಳ ಸರ್ಕಾರ. ಈಗ ಅದು ಆಂತರಿಕ ಮೀನುಗಾರಿಕೆಗೂ ಸಮಾನವಾದ ನಿಯಮಗಳನ್ನು ರಚಿಸಲು ಮುಂದಾಗಿದೆ. ಈ ನಿಯಮಗಳು ವ್ಯಾಪಕ ಜನಮನ್ನಣೆಗೆ ಪಾತ್ರವಾಗಿದೆ ಮಾತ್ರವಲ್ಲ ಮತ್ಸ್ಯ ಸಂಪನ್ಮೂಲದ ಲೂಟಿಯನ್ನು ತಡೆಗಟ್ಟಲಿದೆ. 2017–18 ರಲ್ಲಿ ಕೇರಳ ಸರ್ಕಾರ 58 ವಿಭಿನ್ನ ಮೀನುಗಳ ಮೀನುಗಾರಿಕೆಗೆ ನಿಯಮಗಳನ್ನು ರೂಪಿಸಿತು. ಮರಿಮೀನುಗಳು ನೀರಿನಿಂದ ಹೊರಬಿದ್ದು ನಾಶವಾಗುವುದನ್ನು ತಡೆಯಲು ಸಾಧ್ಯವಾದರೆ ಮಾತ್ರ ಕಡಲಿನಲ್ಲಿ ಮೀನುಗಳ ಸಂತತಿ ಬೆಳೆದು ಮನುಷ್ಯನಿಗೆ ಆಹಾರವಾಗಿ ಹಾಗೂ ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥವಾಗಿ ಲಭ್ಯವಾಗುವುದು. ಮೀನುಗಳು ಸಂತಾನಾಭಿವೃದ್ಧಿಯನ್ನು ಕೇವಲ ಮಳೆಗಾಲದಲ್ಲಿ ಮಾಡುತ್ತವೆ ಎಂಬ ನಂಬಿಕೆಯಿದೆ ಇದೆ. ಆದರೆ ತಜ್ಞರ ಪ್ರಕಾರ ಇದು ನಿಜವಲ್ಲ. ಆದ್ದರಿಂದ ಎಲ್ಲಾ ಕಾಲದಲ್ಲೂ ಸೂಕ್ತ ವೈಜ್ಞಾನಿಕ ಕ್ರಮಗಳ ಮೂಲಕ ಅನಿಯಂತ್ರಿತ ಮರಿ ಮೀನುಗಳ ಮೀನುಗಾರಿಕೆಯನ್ನು ತಡೆಗಟ್ಟಬೇಕು.

ಸದಾನಂದಗೌಡರ, ದಾರಿ ತಪ್ಪಿಸಿ ವಂಚಿಸುವ ಹೇಳಿಕೆ– KPRS ಖಂಡನೆ

ಕರೋನಾ ಹರಡಲು ರೈತ– ಕಾರ್ಮಿಕರ ಚಳುವಳಿಗಳು ಕಾರಣವಾಗಿವೆ ಎಂದಿರುವ ಕೇಂದ್ರ ಸಚಿವ ಸದಾನಂದ ಗೌಡರ ಬೇಜವಾಬ್ದಾರಿಯುತ ಹಾಗೂ ಜನರನ್ನು ದಾರಿತಪ್ಪಿಸುವ ಹೇಳಿಕೆಯನ್ನು ಕರ್ನಾಟಕ ಪ್ರಾಂತ ರೈತ ಸಂಘ (AIKS) ಬಲವಾಗಿ ಖಂಡಿಸುತ್ತದೆ.

ಇಂತಹ ಹೇಳಿಕೆಗಳ ಮೂಲಕ ಜನರನ್ನು, ಚಳುವಳಿಕಾರರನ್ನು ಮತ್ತು ರೈತ – ಕಾರ್ಮಿಕರನ್ನು ಎಂದೂ ದಾರಿ ತಪ್ಪಿಸಲಾಗದು ಎಂದು ರೈತ ಸಂಘ ಎಚ್ಚರಿಸಿದೆ. ಇದು ಈಚೆಗೆ ಕಳೆದ ಒಂದೆರಡು ತಿಂಗಳಿಂದ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನ ವಿರೋಧಿ ನೀತಿಗಳ ವಿರುದ್ದ ನಡೆಯುತ್ತಿರುವ ಚಳುವಳಿಗಳಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮತ್ತು ಸಂಘ ಪರಿವಾರ ಬೆದರಿರುವುದನ್ನು ಮತ್ತು ಕಂಗೆಟ್ಟಿರುವುದನ್ನು ಸಚಿವರ ಈ ಹತಾಸೆಯ ಹೇಳಿಕೆಯು ಮತ್ತೊಮ್ಮೆ ಸ್ಪಷ್ಟ ಪಡಿಸುತ್ತದೆ.

ಇಂತಹ ಹೇಳಿಕೆಗಳು, ಖಂಡಿತಾ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕಾರ್ಪೋರೇಟ್ ಕಂಪನಿಗಳ ಪರವಾದ ಮತ್ತು ರೈತ– ಕಾರ್ಮಿಕರ ಹಾಗೂ ದೇಶ ವಿರೋಧಿಯಾದ ನೀತಿಗಳನ್ನು ಎಂದಿಗೂ ಮುಚ್ಚಿಡಲಾರವು.

ಇಂತಹ ಕುತಂತ್ರದ ಹೇಳಿಕೆಗಳ ಮೂಲಕ ಒಂದೆಡೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನ ವಿರೋಧಿ ನೀತಿಗಳನ್ನು ಹಾಗೂ ಕರೋನಾ ನಿಯಂತ್ರಣ ಮಾಡಲಾಗದ ಅವುಗಳ ವೈಫಲ್ಯತೆಯನ್ನು ಮತ್ತು ನೀಚತನವನ್ನು ಮುಚ್ಚಿಕೊಳ್ಳಲು ಸಚಿವರು ಯತ್ನಿಸಿದ್ದಾರೆ.

ದೂರದ ಚೀನಾ ದೇಶದ ಹುವಾನ್ ನಲ್ಲಿನ ಕರೋನಾ ಸಾಂಕ್ರಾಮಿಕ ದೇಶದಲ್ಲಿ ಒಂದು ಕೋಟಿಯಷ್ಟು ಜನರಿಗೆ ಹರಡಿದ್ದು ಹೇಗೆಂದು ಜನತೆಗೆ ಗೊತ್ತಿದೆ. ವಿದೇಶದಿಂದ ಬಂದವರನ್ನು ವಿಮಾನ ನಿಲ್ದಾಣಗಳಲ್ಲಿಯೇ ಸಮಗ್ರವಾಗಿ ತಪಾಸಣೆ ನಡೆಸಿ ಚಿಕಿತ್ಸೆ ನೀಡಿದ್ದರೇ ಹೇಗೆ ದೇಶವನ್ನು ಪ್ರವೇಶಿಸಲು ಸಾಧ್ಯವಾಗುತ್ತಿತ್ತೆಂದು ಸಚಿವರು ಉತ್ತರಿಸಬೇಕು. ದೇಶದಾದ್ಯಂತ ಕೋಟ್ಯಾಂತರ ಸಂಖ್ಯೆಯ ವಲಸಿಗ ಕಾರ್ಮಿಕರಿಗೆ ಅಗತ್ಯ ನೆರವು ನೀಡಿ ಲಾಕ್ ಡೌನ್ ಘೋಷಿಸಿದ್ದರೇ ಅದು ಹೇಗೆ ದೇಶದಾದ್ಯಂತ ಹರಡಲು ಸಾಧ್ಯವಾಗುತ್ತಿತ್ತೆಂದು ಅವರು ಹೇಳಬೇಕು?

ಜನರನ್ನು ಸಾಂಕ್ರಾಮಿಕದ ದಾಳಿಗೆ ಬಿಟ್ಟು ಖಾಸಗೀ ಆಸ್ಪತ್ರೆಗಳ ಲೂಟಿಗೆ ಜನತೆಯನ್ನು ಬಿಟ್ಟವರಾರು?

ಜನತೆ ಒಂದೆಡೆ ಕರೋನಾ ಭಯದಿಂದ ಇನ್ನೊಂದೆಡೆ ಪರಿಹಾರ ನೀಡದಾ ಲಾಕ್ ಡೌನ್ ನಿಂದ ಸಂಕಷ್ಟದಲ್ಲಿರುವಾಗಲೇ, ದೇಶದ ಸಾರ್ವಜನಿಕ ಆಸ್ತಿಗಳಾದ ಬ್ಯಾಂಕ್, ವಿಮಾನ ನಿಲ್ದಾಣಗಳು, ರೈಲ್ವೇ, ವಿದ್ಯುತ್ ಮುಂತಾದ ಲಾಭದಾಯಕ ಸಾರ್ವಜನಿಕ ಉದ್ಯಮಗಳನ್ನು ಲೂಟಿಕೋರ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮಾರಾಟ ಮಾಡುವ ಮತ್ತು ಕೃಷಿ ರಂಗವನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸಿಕೊಡುವ, ಕಾರ್ಮಿಕರನ್ನು ಎಥೇಚ್ಛ ಲೂಟಿಗೊಳಪಡಿಸುವ ನೀಚತನವನ್ನು ಪಾರ್ಲಿಮೆಂಟ್ ನಲ್ಲು ಕಾಯ್ದೆಗಳನ್ನು ಮಾಡುವ ಮೂಲಕ ಮೆರೆದವರಾರು? ಇದು ದೇಶ ಸೇವೆಯೇ ಅಥವಾ ದೇಶದ್ರೋಹವೇ? ಉತ್ತರ ಕೊಡಿ ಸಚಿವರೇ?

ಪ್ರತಿಭಟನೆ ಮಾಡುವ ದೇಶ ಪ್ರೇಮಿ ರೈತ – ಕಾರ್ಮಿಕರನ್ನು ಬಾಡಿಗೆ ಜನರೆಂದು ಮತ್ತು ಅವರನ್ನೆಲ್ಲಾ ಮತ್ಯಾರೋ ಖರೀದಿಸಿದ್ದಾರೆಂದು ಅನ್ನದಾತರನ್ನು ಅಪಮಾನಿಸಲು ಹಾಗೂ ದೇಶದಾದ್ಯಂತ ಭಾರೀ ಪ್ರತಿರೋಧವನ್ನು ಎದುರಿಸಿಯೂ ತಮ್ಮ ದೇಶ ದ್ರೋಹಕ್ಕೆ ಜನರ ಬೆಂಬಲವಿದೆಯೆಂದು ಹೇಳಿಕೊಳ್ಳಲು ನಾಚಿಕೆಯಾದರೂ ಅಗ ಬೇಕಿತ್ತಲ್ಲವಾ?

ಮೂರು ಬಿಟ್ಟವನು ಊರಿಗೆ ದೊಡ್ಡವನೆಂಬ ಗಾದೆಯಂತೆ ವರ್ತಿಸುವುದನ್ನು ಬಿಟ್ಟು ಅನ್ನದಾತರಿಗೆ, ಸಂಪತ್ತಿನ ಉತ್ಪಾದಕರಿಗೆ ಇನ್ನಾದರೂ ಬೆಲೆ ನೀಡುವುದನ್ನು ಸಚಿವರು ಕಲಿಯಲಿ ಎಂದಿದ್ದಾರೆ.

(27.10.2020)

ಮಂಗಳೂರು ಹಳೇ ಬಂದರಿನಲ್ಲಿ ಕಾರ್ಮಿಕರ ಮುಷ್ಕರ

ಮಂಗಳೂರು ಹಳೇ ಬಂದರು ಸಗಟು ಮಾರುಕಟ್ಟೆಯ ಸ್ಮಾರ್ಟ್ ಸಿಟಿ ಯೋಜನೆಯ ಒಳಚರಂಡಿ ಕಾಮಗಾರಿಯಿಂದಾಗಿ ರಸ್ತೆಯು ಹದಗೆಟ್ಟಿದೆ. ಇದನ್ನು ದುರಸ್ತಿಗೊಳಿಸುವಂತೆ ಒತ್ತಾಯಿಸಿ ಬಂದರು ಕಾರ್ಮಿಕರ ಕಟ್ಟೆಯ ಬಳಿ ಅಕ್ಟೋಬರ 22 ರಂದು ಬಂದರು ಶ್ರಮಿಕರ ಸಂಘದ ನೇತೃತ್ವದಲ್ಲಿ ಧರಣಿ ನಡೆಯಿತು. ಕಾರ್ಮಿಕರ ಕಟ್ಟೆಯ ಬಳಿ ಜಮಾಯಿಸಿದ ಕಾರ್ಮಿಕರು ಧರಣಿ ನಡೆಸಿದರೆ ವರ್ತಕರು ಸಗಟು ಮಾರುಕಟ್ಟೆ ವಹಿವಾಟು ಸ್ಥಗಿತಗೊಳಿಸಿ ಮುಷ್ಕರದಲ್ಲಿ ಪಾಲ್ಗೊಂಡರು. ಸಂಘದ ಅಧ್ಯಕ್ಷ ವಿಲ್ಲಿ ವಿಲ್ಸನ್ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು.

ಈ ಸಂದರ್ಭ ಮಾತನಾಡಿದ ಕಾರ್ಪೊರೇಟರ್ ಅಬ್ದುಲ್ಲ ಲತೀಫ್ ಸರಕಾರ ಯಾವುದೇ ಇರಲಿ, ಅಧಿಕಾರ ಶಾಶ್ವತವಲ್ಲ. ಅಧಿಕಾರ ಇದ್ದಾಗ ಜನರ ಸೇವೆ ಮಾಡಬೇಕೇ ಹೊರತು ಅಭಿವೃದ್ಧಿಯಲ್ಲಿ ಎಂದಿಗೂ ರಾಜಕೀಯ ಮಾಡುವುದು ಯಾವುದೇ ರಾಜಕರಣಿಗೆ ಶೋಭೆ ತರುವುದಿಲ್ಲ ಎಂದರು.

ಜಿಲ್ಲಾ ಹಮಾಲಿ ಕಾರ್ಮಿಕರ ಫೆಡರೇಶನ್ ಕಾರ್ಯದರ್ಶಿ ರಫೀಕ್ ಹರೇಕಳ, ಬೀದಿ ಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಮಹಮ್ಮದ್ ಮುಸ್ತಾಫ, ಕಾರ್ಯದರ್ಶಿ ಹರೀಶ್ ಪೂಜಾರಿ, ಬಂದರು ಶ್ರಮಿಕರ ಸಂಘದ ಮುಖಂಡರಾದ ಹಸನ್ ಮೋನು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ●



ಮಾರುತಿ ಮಾನ್ಪಡೆ ಸನ್ಯಾಸಿಯಂಥ ರಾಜಕಾರಣಿ: ಡಾ. ಚಂದ್ರ ಪೂಜಾರಿ

ವರದಿ: ವಾ.ಉ.

ಸನ್ಯಾಸಿಗಳೆಂದು ಹೇಳಿಕೊಳ್ಳುವವರು ಜನನಾಯಕರು ಅಂತ ಕರೆಯಲ್ಪಡುವ ಅಧಿಕಾರಸ್ಥ ರಾಜಕಾರಣಿಗಳು ಐಷರಾಮಿ ಜೀವನ ಸಾಗಿಸುತ್ತಿರುವಾಗ, ಯಾವ ಪ್ರದರ್ಶನಗಳೂ ಇಲ್ಲದೆ ಅಧಿಕಾರಕ್ಕಾಗಿ ಹಂಬಲಿಸದೆ ನಿಜ ಸನ್ಯಾಸಿಗಳಂತೆ ಬದುಕಿದ ವಿರಳ ವ್ಯಕ್ತಿ ಮಾರುತಿ ಮಾನ್ಪಡೆ. ಇತ್ತೀಚೆಗೆ ರೈತ ಹೋರಾಟಗಳಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದಾಗಲೇ ಕೋವಿಡ್ ಕಾಯಿಲೆಗೆ ಬಲಿಯಾದ ರಾಜಕಾರಣಿ ಮಾರುತಿ ಮಾನ್ಪಡೆಯವರು ಬಡತನದಲ್ಲೇ ಬದುಕಿ, ಬಡಜನರ ನೋವನ್ನು ಸ್ವತ: ಅನುಭವಿಸಿ, ಸಮಾಜದ ನೋವಿಗೆ ಉತ್ತರ ಕಂಡುಹಿಡಿಯಲು ಅವರು ಯತ್ನಿಸಿದರು ಎಂದು ಹಂಪಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ.ಚಂದ್ರ ಪೂಜಾರಿ ಅವರು ಹೇಳಿದರು.

ಸಿಪಿಐ(ಎಂ) ಹಿರಿಯ ಮುಖಂಡ, ರೈತ ಹೋರಾಟಗಾರ, ಗ್ರಾ.ಪಂ.ನೌಕರರ ಸಂಘದ ರಾಜ್ಯಾಧ್ಯಕ್ಷ ಮಾರುತಿ ಮಾನ್ಪಡೆಯವರಿಗೆ ಕರ್ನಾಟಕ ಪ್ರಾಂತ ರೈತ ಸಂಘ ದ.ಕ. ಜಿಲ್ಲಾ ಸಮಿತಿ ದಿನಾಂಕ 25 ರಂದು ಮಂಗಳೂರಿನಲ್ಲಿ ನುಡಿನಮನ ಸಲ್ಲಿಸಿದ ಕಾರ್ಯಕ್ರಮದಲ್ಲಿ ಡಾ.ಚಂದ್ರ ಪೂಜಾರಿ ಮಾತನಾಡುತ್ತಿದ್ದರು.

ಕಮ್ಯೂನಿಸ್ಟರಾಗಿದ್ದ ಮಾರುತಿ ಮಾನ್ಪಡೆಯವರು, ಪ್ರಜಾಪ್ರಭುತ್ವವನ್ನು ಬಳಸಿ ಜನರಿಗೆ ಅವರ ಹಕ್ಕು ಹಾಗೂ ನ್ಯಾಯ ಲಭಿಸಬೇಕೆಂದು ಜೀವನಪೂರ್ತಿ ದುಡಿದರು. ಅವರು ಎಂದೂ ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿ ಮಾತನಾಡಲಿಲ್ಲ; ಅವರು ಜನರಿಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡಿ ಮಾರ್ಕ್ಸವಾದವನ್ನು ಜನರಿಗೆ ತಲುಪಿಸಲು ಯತ್ನಿಸುತ್ತಿದ್ದರು. ಚಳುವಳಿ ಮತ್ತು ಬದುಕಿಗೆ ನೇರ ಸಂಬಂಧವಿದ್ದು, ದಮನಿತ ಶೋಷಿತ ಜನವರ್ಗಗಳು ಚಳುವಳಿ ಹೋರಾಟಗಳ ಮೂಲಕವೇ ತಮ್ಮ ಬದುಕನ್ನು ರೂಪಿಸಬೇಕೆಂದು ದೃಢವಾಗಿ ನಂಬಿ ಕ್ರಿಯಾಶೀಲರಾದರು. ಈ ದಾರಿಯಲ್ಲಿ ನಮಗೆ ಎಲ್ಲ ಜನರಿಗೆ ನ್ಯಾಯವನ್ನು ಕೊಡಿಸಲು ಸಾಧ್ಯವಾಗದಿದ್ದರೂ, ಅನ್ಯಾಯವನ್ನು ತಡೆಯಲು ಸಾಧ್ಯ ಎಂದು ಮಾಡಿ ತೋರಿಸಿದರು.

ರಾಜ್ಯದ ಗ್ರಾಮ ಪಂಚಾಯತುಗಳಲ್ಲಿ ನೌಕರರಾಗಿರುವ ಸಾವಿರಾರು ಮಂದಿ ಜುಜುಬಿ ಸಂಬಳಕ್ಕೆ ದುಡಿಯುತ್ತಿದ್ದರು. ಅವರನ್ನು ಸಂಘಟಿಸಿ ಹೋರಾಟ ಕೈಗೊಂಡ ಫಲವಾಗಿ ಅವರು ರಾಜ್ಯ ಸರಕಾರೀ ನೌಕರರೆಂದು ಪರಿಗಣಿತರಾಗಿದ್ದು, ಅವರು ಸರ್ಕಾರೀ ಸೇವಾನಿಯಮದ ವ್ಯಾಪ್ತಿಯಲ್ಲಿ ಇವತ್ತು ದುಡಿಯುವಂತಾಗಿದೆ. ಯಾವ ಜನವಿಭಾಗವೇ ಇರಲಿ, ಅವರಿಗೆ ಸರ್ಕಾರದಿಂದ ಸಿಗಬೇಕಾದ ಸವಲತ್ತುಗಳಿಗಾಗಿ ಅಧಿಕಾರಗಳೊಂದಿಗೆ ಆಳುವ ರಾಜಕಾರಣಿಗಳೊಂದಿಗೆ ನಿಷ್ಠುರವಾಗಿ ಸವಾಲೆತ್ತುತ್ತಿದ್ದರು. ಅದೇ ವೇಳೆ ಸರಕಾರೀ ನೌಕರರಲ್ಲಿರುವ ಪ್ರಾಮಾಣಿಕ

ಅಧಿಕಾರಿಗಳ, ಸಜ್ಜನ ಶಾಸಕರು ಮಂತ್ರಿಗಳ ಹಾಗೂ ಮಾಧ್ಯಮದವರ ಸಹಾಯ ಪಡೆದು ಜನಸಾಮಾನ್ಯರ ಕಷ್ಟಕ್ಕೆ ನೆರವಾಗುತ್ತಿದ್ದರು. ಹಾಗಾಗಿ ಅವರು ಎಲ್ಲ ವರ್ಗದ ಸಜ್ಜನರ ಗೌರವಕ್ಕೆ ಪಾತ್ರರಾಗಿದ್ದರು ಎಂದು ಡಾ.ಚಂದ್ರ ಪೂಜಾರಿ ವಿವರಿಸಿದರು.

ತಾನು ವಿಶ್ವವಿದ್ಯಾನಿಲಯದಲ್ಲಿ ಕರ್ನಾಟಕದ ಕೃಷಿಯ ಬಗ್ಗೆ, ದಲಿತ ಅಭಿವೃದ್ಧಿ ಸೂಚ್ಯಂಕದ ಬಗ್ಗೆ ನಡೆಸಿದ ಅಧ್ಯಯನಗಳಲ್ಲಿ ಮಾರುತಿ ಮಾನ್ಪಡೆಯವರಿಂದ ಪಡೆದ ಸಹಾಯವನ್ನು ಡಾ.ಚಂದ್ರ ಪೂಜಾರಿ ನೆನೆದುಕೊಂಡರು. ಮಾನ್ಪಡೆಯವರು ಹೋರಾಟದ ರಿಲೇ ಓಟದ ಬ್ಯಾಟನನ್ನು ನಮಗೆ ಹಸ್ತಾಂತರಿಸಿ ಹೋಗಿದ್ದಾರೆ. ಹೊಸ ತಲೆ ಮಾರಿನವರನ್ನು ಆದಷ್ಟು ಹಿಡಿದು ಗುರಿ ತಲುಪಬೇಕಿದೆ ಎಂದು ಅವರು ಕರೆ ನೀಡಿದರು.

ಶ್ರದ್ಧಾಂಜಲಿ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಕಾರ್ಯದರ್ಶಿ ಯಾದವ ಶೆಟ್ಟಿ, ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆಯ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಹಿರಿಯ ನ್ಯಾಯವಾದಿ ಯಶವಂತ ಮರೋಳಿ, ಪ್ರಗತಿಪರ ಚಿಂತಕ ಡಾ.ಕೃಷ್ಣಪ್ಪ ಕೊಂಚಾಡಿ, ಪ್ರಾಂತ ರೈತ ಸಂಘದ ಮುಖಂಡರಾದ ಸದಾಶಿವದಾಸ್, ವಾಸುದೇವ ಉಚ್ಚಿಲ, ಸಂಜೀವ ಪಿಲಾರ್ ಅಗಲಿದ ನಾಯಕ ಮಾರುತಿ ಮಾನ್ಪಡೆಯವರಿಗೆ ನುಡಿನಮನ ಸಲ್ಲಿಸಿದರು.

ಸಿಪಿಐ(ಎಂ) ಮುಖಂಡ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಹಿರಿಯ ರಂಗಕರ್ಮಿಗಳಾದ ಶ್ಯಾಮಸುಂದರರಾವ್, ಪ್ರಭಾಕರ ಕಾಪಿಕಾಡು, ನ್ಯಾಯವಾದಿ ರಾಮಚಂದ್ರ ಬಬ್ಬುಕಟ್ಟೆ, ಜನವಾದಿ ಮಹಿಳಾ ಸಂಘಟನೆಯ ಪದ್ಮಾವತಿ ಶೆಟ್ಟಿ, ವಿಲಾಸಿನಿ ತೊಕ್ಕೊಟ್ಟು, ರಾಜ್ಯ ರೈತ ಸಂಘ ಹಸಿರುಸೇನೆಯ ದ.ಕ.ಜಿಲ್ಲಾಧ್ಯಕ್ಷ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್, ದಲಿತ ಹಕ್ಕುಗಳ ಸಮಿತಿಯ ಕೃಷ್ಣ ತಣ್ಣೀರುಬಾವಿ ಶ್ರದ್ಧಾಂಜಲಿ ಸಭೆಯಲ್ಲಿ ಉಪಸ್ಥಿತರಿದ್ದರು.

ಅಕ್ಟೋಬರ 21 ರಂದು ಉಡುಪಿ ಸಿಪಿಐ(ಎಂ) ಪಕ್ಷದ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ ನುಡಿನಮನ ಸಲ್ಲಿಸಿದರು. ಪಕ್ಷದ ಉಡುಪಿ ಜಿಲ್ಲಾ ಮುಖಂಡರಾದ ಮಹಾಬಲ ವಡೇರಹೋಬಳಿ, ವೆಂಕಟೇಶ್ ಕೋಣಿ, ಸುರೇಶ್ ಕಲ್ಲಾಗರ, ಶಶಿಧರ ಗೊಲ್ಲ, ಕವಿರಾಜ್ ಎಸ್, ಉಮೇಶ್ ಕುಂದರ್, ನಾಗರತ್ನ, ಪ್ರಗತಿಪರ ಚಿಂತಕ ಸಂಜೀವ ಬಳ್ಕೂರು ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಕಾ।ಮಾರುತಿ ಮಾನ್ಪಡೆಯವರು ಅಕ್ಟೋಬರ 20 ರಂದು ಬೆಳಿಗ್ಗೆ ನಿಧನರಾದ ವಾರ್ತೆ ತಿಳಿದ ಸ್ವಲ್ಪವೇ ಹೊತ್ತಿನಲ್ಲಿ ಮೂಡಬಿದ್ರೆಯಲ್ಲಿ ಸಿಪಿಐ(ಎಂ) ಮುಖ್ಯ ಕಾರ್ಯಕರ್ತರು ಬೇರೊಂದು ಸಭೆ ಮುಗಿದ ಕೂಡಲೇ ಶ್ರದ್ಧಾಂಜಲಿ ಸಭೆ ನಡೆಸಿದರು. ಆ ಸಭೆಯಲ್ಲಿ ಪಕ್ಷದ ಮುಖಂಡರಾದ ಯಾದವ ಶೆಟ್ಟಿ, ರಮಣಿ ಮೂಡಬಿದ್ರಿ, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ ಶ್ರದ್ಧಾಂಜಲಿ ಸಲ್ಲಿಸಿದರು.

ಮಂಗಳೂರು ವಿಕಾಸ ಕಚೇರಿಯಲ್ಲಿ ಅದೇ ದಿನ ಸಂಜೆ ಶ್ರದ್ಧಾಂಜಲಿ ಸಭೆಯೊಂದು ನಡೆದಿದ್ದು ಅದರಲ್ಲಿ ಡಿವೈಎಫ್ಐ ಮುಖಂಡರಾದ ಮುನೀರ್ ಕಾಟಿಪಳ್ಳ, ಸಂತೋಷ್ ಬಜಾಲ್, ಪ್ರಗತಿಪರ ಚಿಂತಕ ಕೃಷ್ಣಪ್ಪ ಕೊಂಚಾಡಿ, ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಅ.ಭಾ.ನ್ಯಾಯವಾದಿಗಳ ಸಂಘದ ಮುಖಂಡ ಯಶವಂತ ಮರೋಳಿ ನುಡಿನಮನ ಸಲ್ಲಿಸಿದರು.

ತೊಕ್ಕೊಟ್ಟಿನ ಸಿಪಿಐ(ಎಂ) ಉಳ್ಳಾಲ ವಲಯ ಕಚೇರಿಯಲ್ಲಿ ಅಕ್ಟೋಬರ 21 ರಂದು ಶ್ರದ್ಧಾಂಜಲಿ ಸಭೆಯನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾ ಮುಖಂಡರಾದ ಯಾದವ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ, ಸಂಜೀವ ಪಿಲಾರ್, ಜಯಂತ ಅಂಬ್ಲಮೊಗರು, ಡಿವೈಎಫ್ಐ ಮುಖಂಡರಾದ ಮಹಾಬಲ ದೆಪ್ಪೆಲಿಮಾರ್ ಮಾತನಾಡಿ ಶ್ರದ್ಧಾಂಜಲಿ ಸಲ್ಲಿಸಿದರು.

ಮೂಡಬಿದ್ರಿಯಲ್ಲಿ ಶ್ರದ್ಧಾಂಜಲಿ:

ಮೂಡಬಿದ್ರಿಯ ಸಿಐಟಿಯು ಕಚೇರಿಯಲ್ಲಿ ಸಿಪಿಐ(ಎಂ) ವಲಯ ಸಮಿತಿ ಅಕ್ಟೋಬರ 23 ರಂದು ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಯಾದವ ಶೆಟ್ಟಿ, ಸಿಪಿಐ(ಎಂ) ಮೂಡಬಿದ್ರಿ ವಲಯ ಕಾರ್ಯದರ್ಶಿ ರಮಣಿ ಮೂಡಬಿದ್ರಿ, ಪಕ್ಷದ ಹಿರಿಯ ಮುಖಂಡ ಸುಂದರ ಶೆಟ್ಟಿ ಮಾತನಾಡಿ ಕಾ। ಮಾರುತಿ ಮಾನ್ಪಡೆಯವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಮಂಗಳೂರಿನಲ್ಲಿ ಸರಕಾರಿ ಮೆಡಿಕಲ್ ಕಾಲೇಜು ತೆರೆಯುವಂತೆ ಆಗ್ರಹಿಸಿ ತೊಕ್ಕೊಟ್ಟಿನಲ್ಲಿ ಧರಣಿ:

ಉಳ್ಳಾಲ ವಲಯ ಸರಕಾರೀ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಆರೋಗ್ಯ ಕ್ಷೇತ್ರದ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಅಕ್ಟೋಬರ್ 28 ರಂದು ತೊಕ್ಕೊಟ್ಟಿನ ➚

ಗ್ರಾಹಕ ಬೆಲೆ ಸೂಚ್ಯಂಕ ಆಧಾರ ವರ್ಷ ಬದಲಾವಣೆ ಕಾರ್ಮಿಕರಿಗೆ ವಂಚನೆ ಸಿಪಿಐ(ಎಂ) ಖಂಡನೆ

ಕೈಗಾರಿಕಾ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ'ದ (Consumer Price Index-Industrial Workers) ಆಧಾರ ವರ್ಷವನ್ನು 2001 ರಿಂದ 2016ಕ್ಕೆ ಬದಲಾಯಿಸುವ ವಿಷಯದಲ್ಲಿ ಕಾರ್ಮಿಕರನ್ನು ಕೇಂದ್ರ ಬಿಜೆಪಿ ಸರ್ಕಾರವು ವಂಚಿಸಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ಕೇಂದ್ರ ಕಾರ್ಮಿಕ ಇಲಾಖೆಯ ಅಡಿಯಲ್ಲಿ ಲೇಬರ್ ಬ್ಯುರೊ ಕೈಗೊಂಡಿರುವ ಆಧಾರ ವರ್ಷ ಬದಲಾವಣೆಯಲ್ಲಿ ಅವಶ್ಯಕ ವಸ್ತುಗಳ ಬೆಲೆ ಏರಿಕೆಯ ನಿಜವಾದ ಪ್ರಭಾವ ಬಿಂಬಿತವಾಗದಂತೆ ಮತ್ತು ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಬೆಲೆ ಏರಿಕೆಗಳಿಗೆ ಅನುಗುಣವಾಗಿ ತುಟ್ಟಿಭತ್ಯೆಯ ಮೂಲಕ ಸಿಗಬೇಕಾದ ವೇತನ ಹೆಚ್ಚಳದ ಪರಿಹಾರವನ್ನು ಕಡಿತಗೊಳಿಸುವ ದುರುದ್ದೇಶದಿಂದ ಕೂಡಿದೆ.

ಗ್ರಾಹಕ ಬೆಲೆ ಸೂಚ್ಯಾಂಕ ನಿರ್ಧಾರಣೆಗೆ ಪರಿಗಣಿಸಲ್ಪಡುವ ಬಳಕೆ ಸಾಮಗ್ರಿಗಳಲ್ಲಿ ಇದುವರೆಗಿದ್ದ 46.2 ಶೇಕಡ ಆಹಾರ ಸಾಮಗ್ರಿಗಳ ಭಾಗವನ್ನು 39 ಶೇಕಡಕ್ಕೆ ತೀವ್ರವಾಗಿ ಇಳಿಸಲಾಗಿದೆ. ಕಾರ್ಮಿಕರ ಬಳಕೆ ಮಾದರಿ ಬದಲಾಗಿದೆ,ಆದ್ದರಿಂದ ಇದನ್ನು ಇಳಿಸಲಾಗಿದೆ ಎಂಬ ಕಾರ್ಮಿಕ ಮಂತ್ರಿಗಳು ಸಮರ್ಥಿಸಿದ್ದಾರೆ, ಆರ್ಥಿಕ ನಿಧಾನಗತಿಯ ಸಮಯದಲ್ಲೂ ನಿರ್ದಿಷ್ಟವಾಗಿ ಆಹಾರ ಸಾಮಗ್ರಿಗಳ ಬೆಲೆ ಏರುತ್ತಲೇ ಇರುವ ಸಮಯದಲ್ಲಿ, ಮೋದಿ ಸರಕಾರದ ಅಡಗಿಸಿಟ್ಟ ಸಿಎಸ್ಒ ಅಂದಾಜು ಪ್ರಕಾರ, ದುಡಿಯುವ ಜನಗಳ ಸರಾಸರಿ ಬಳಕೆ ಖರ್ಚಿನ ಪ್ರಮಾಣ ತೀವ್ರವಾಗಿ ಇಳಿಮುಖಗೊಂಡಿದೆ ಎಂದಿರುವಾಗ, ಇತ್ತೀಚೆಗೆ ಪ್ರಕಟವಾದ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ 107 ದೇಶಗಳಲ್ಲಿ 94ನೆಯ ದಾಗಿದ್ದು ನಮ್ಮ ನೆರೆಯ ಬಾಂಗ್ಲಾದೇಶ ಮತ್ತು ಪಾಕಿಸ್ತಾನಕ್ಕಿಂತಲೂ ಕೆಳಗಿರುವಾಗ ಈ ಕ್ರಮವು ದೇಶದ ಕಾರ್ಮಿಕರಿಗೆ ಬಿಜೆಪಿ ಸರ್ಕಾರವು ಎಸೆಗಿರುವ ದ್ರೋಹವಾಗಿದೆ.

ಈ ಹಿಂದೆ ಆಧಾರ ವರ್ಷವನ್ನು 1960 ರಿಂದ 1982ಕ್ಕೆ ಬದಲಾಯಿಸುವಾಗ 22 ವರ್ಷಗಳ ಅಂತರಕ್ಕೆ 4.93 ಗುಣಕವನ್ನು ನಿಗದಿ ಮಾಡಲಾಗಿತ್ತು; 1982 ರಿಂದ 2001 ಕ್ಕೆ ಬದಲಿಸುವಾಗ 19 ವರ್ಷಗಳ ಅಂತರಕ್ಕೆ ಗುಣಕ 4.63 ಎಂದು ನಿಗದಿ ಪಡಿಸಲಾಗಿತ್ತು. ಆದರೆ ಈ ಬಾರಿ 2001 ರಿಂದ 2016 ರವರೆಗಿನ 16 ವರ್ಷಗಳ ಅಂತರಕ್ಕೆ ಗುಣಕದಲ್ಲಿ ಭಾರೀ ಇಳಿಕೆ ಮಾಡಿ, 2.88 ಕ್ಕೆ ಇಳಿಸಲಾಗಿದೆ, ಅಂದರೆ 62 ಶೇಕಡ ಇಳಿಕೆ ಮಾಡಲಾಗಿದೆ.

ಯಾವುದೇ ಸೂಚ್ಯಂಕದಲ್ಲಿ ಆಧಾರವರ್ಷ ಆ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸಾಮಾನ್ಯ (Normal) ವರ್ಷವಾಗಿರಬೇಕು. ಆದ್ದರಿಂದ 2016 ನ್ನು ಆಧಾರ ವರ್ಷವಾಗಿ ಆಯ್ಕೆ ಮಾಡಿರುವಲ್ಲಿಯೂ ಮೋಸ ಎಸಗಲಾಗಿದೆ. ಇದನ್ನು ಕೂಡ ಬೆಲೆ ಏರಿಕೆಗಳ ಪ್ರಭಾವವನ್ನು ಸೂಚ್ಯಂಕದಲ್ಲಿ ಕುಗ್ಗಿಸಲಿಕ್ಕಾಗಿಯೇ ಮಾಡಲಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಜುಲೈ 2020ರವರೆಗೂ 2013–14ನ್ನು ಆಧಾರ ವರ್ಷವಾಗಿ ಮಾಡಬೇಕು ಎಂದು ಲೆಕ್ಕಾಚಾರ ನಡೆಯುತ್ತಿತ್ತು. ಅದನ್ನು 2016 ಕ್ಕೆ ಬದಲಾಯಿಸಬೇಕು ಎಂದು ಮೋದಿ ಸರಕಾರಕ್ಕೆ ಆಮೇಲೆ ಹೊಳೆದಿರುವಂತೆ ಕಾಣುತ್ತದೆ. ಏಕೆಂದರೆ, ಅದು ಕುಖ್ಯಾತ ನೋಟು ರದ್ದತಿಯ ವರ್ಷ ಅದರಿಂದಾಗಿ 2016 ಕೊನೆಯ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆಗಳು ನಿಂತುಹೋಗಿದ್ದು, ಅದು ಕೈಗಾರಿಕಾ ಕಾರ್ಮಿಕರ ಬಳಕೆ ವಸ್ತುಗಳ ಬೆಲೆಗಳ ಮೇಲೆ ನಕಾರಾತ್ಮಕ ಪ್ರಭಾವ ಬೀರಿದ್ದ ಅವಧಿಯಾಗಿದೆ.

ಬಹಳ ಸಮಯದಿಂದ ಮಾಲೀಕರ ಸಂಘಟನೆಗಳು ಆರ್ಥಿಕ ನಿಧಾನಗತಿಯ ಸಮಯದಲ್ಲಿ ಏರಿಳಿತದ ತುಟ್ಟಿಭತ್ಯೆಗಳನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿಕೊಂಡು ಬಂದಿವೆ. ತನ್ನ ಬಂಡವಾಳಶಾಹಿ ಬಾಸ್ ಗಳ ಆಗ್ರಹಕ್ಕೆ ಮೋದಿ ಸರಕಾರ ಹಿಂಭಾಗಿಲಿನಿಂದ ಸ್ಪಂದಿಸಿದೆ ಎಂದು ಸಿಪಿಐ(ಎಂ) ಹೇಳಿದೆ. ಇದು ಬಿಜೆಪಿ ಸರಕಾರದ ಇನ್ನೊಂದು ಕಾರ್ಪೊರೇಟ್ಪರ, ಕಾರ್ಮಿಕ ವಿರೋಧಿ ಕ್ರಮ ಎಂದು ಸಿಪಿಐ(ಎಂ) ಖಂಡಿಸಿದೆ. ಇದರಿಂದಾಗಿ ಹಾಲಿ ಪ್ರತಿ 100 ರೂಗಳ ಮೌಲ್ಯವರ್ಧನೆಯಲ್ಲಿ 15 ಶೇಕಡವಿರುವ ವೇತನದ ಪಾಲು ಮತ್ತಷ್ಟು ಕುಸಿಯಲಿದೆ. 47 ಶೇಕಡವಿರುವ ಮಾಲೀಕರ ಲಾಭದ ಪಾಲು ಮತ್ತಷ್ಟು ಹೆಚ್ಚಳವಾಗಲಿದೆ. ಇದರಿಂದಾಗಿ ಕೋವಿಡ್ ಲಾಕ್ಡೌನ್ ನಿಂದಾಗಿ ಕುಂಠಿತವಾಗಿರುವ ಆರ್ಥಿಕತೆಯ ಪುನಶ್ಚೇತನಕ್ಕೆ ತೀವ್ರ ಹಿನ್ನೆಡೆಯಾಗಲಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

(29.10.2020)

ದಲಿತರ ವಿರುದ್ಧ ಮನು ಧರ್ಮಶಾಸ್ತ್ರ–ಹಿಂದುತ್ವದ ಹಿಂಸೆ
ಹತ್ರಾಸ್ ಮತ್ತು ಅದರ ಹಿಂದಿರುವ ಒಳ ಸಂಚು

ನಾಗರಾಜ ನಂಜುಂಡಯ್ಯ



ಮನು ಧರ್ಮ ಶಾಸ್ತ್ರದ ಬಳಕೆಯಲ್ಲಿಲ್ಲದ ಆದರ್ಶಗಳನ್ನು ಪ್ರೋತ್ಸಾಹಿಸುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರಾಕರಿಸುವ ಒಂದು ಹಂತದಿಂದ ದಲಿತರನ್ನು ಶೀತಲ ರಕ್ತದ ಹತ್ಯೆ ಮಾಡಿ ಪ್ರಚೋದಿಸುವ ಮತ್ತು ಸರ್ವನಾಶ ಮಾಡುವ ಕರುಣಾಜನಕ ಪರಿಸ್ಥಿತಿಗೆ ಬಿಜೆಪಿ ಭಾರತೀಯ ರಾಜಕಾರಣವನ್ನು ತಂದು ನಿಲ್ಲಿಸುತ್ತಿದೆ. ಇದು ಅನಾಗರಿಕ ಆವೃತ್ತಿಗೆ ಮತ್ತೆ ದಬ್ಬುವ ಪ್ರಯತ್ನವಾಗಿದೆ. ಕೇಂದ್ರ್ರದಲ್ಲಿ ಮತ್ತು ಹಲವಾರು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಇದರ ಲಾಭವನ್ನು ದುರುಪಯೋಗ ಮಾಡಿಕೊಂಡು, ಅವರು ಧರ್ಮ, ಜಾತಿ, ಮತ ಮತ್ತು ಲೈಂಗಿಕತೆಯ ಆಧಾರದ ಮೇಲೆ ಜನರನ್ನು ವಿಭಜಿಸಲು ಮತ್ತು ಪ್ರಜಾಪ್ರಭುತ್ವವನ್ನು ಅಪಹಾಸ್ಯ ಮಾಡುವ ಉದ್ದೇಶವನ್ನು ಉದ್ದೇಶಪೂರ್ವಕವಾಗಿ ಬಿಜೆಪಿ ಯವರು ಸಿದ್ಧಪಡಿಸುತ್ತಿದ್ದಾರೆ. ಇದಕ್ಕೆ ಕನ್ನಡಿ ಹಿಡಿದ ಹಾಗೆ ಉತ್ತರ ಪ್ರದೇಶದಲ್ಲಿ ಇತ್ತೀಚಿನ ದಲಿತರ ಕಗ್ಗೊಲೆಗಳು ಸಾಕ್ಷಿಯಾಗಿವೆ. ಇದರಿಂದ ದಲಿತರನ್ನು ಮಾತ್ರವಲ್ಲದೇ, ಎಲ್ಲಾ ಬಡವರನ್ನು ಸಾಮಾಜಿಕ ಅಭದ್ರತೆ ಮತ್ತು ಯಾತನೆ ಅನುಭವಿಸುವಂತೆ ಮಾಡಲಾಗುತ್ತಿದೆ. ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ದಲಿತ ಮಹಿಳೆಯೊಬ್ಬರ ಕ್ರೂರ ಸಾಮೂಹಿಕ ದೌರ್ಜನ್ಯ ಮತ್ತು ಕೊಲೆ ಇಂತಹ ಅಮಾನವೀಯ, ಪೂರ್ವಾಗ್ರಹ, ರಾಜಕೀಯ ಮತ್ತು ಆಡಳಿತ ಅರಾಜಕತೆಯನ್ನು ಪ್ರತಿಬಿಂಬಿಸುತ್ತದೆ.

ದಲಿತ ಸಮುದಾಯದಲ್ಲಿನ, ಪ್ರಮುಖವಾಗಿ ಮಾದಿಗರು ಮ್ಯಾನ್ಯೂವಲ್ ಸ್ಕ್ಯಾವೆಂಜಿಂಗ್ ಕೆಲಸಗಳಲ್ಲಿ ಅಂದರೆ ಕೊಳಕು ಮತ್ತು ಹೇಸಿಗೆ ಎತ್ತಿ ಹಾಕುವ ಕೆಲಸ–ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಇವರ ವಿರುದ್ಧ ದಬ್ಬಾಳಿಕೆ ಮತ್ತು ಕಿರುಕುಳ ಸಾಮಾನ್ಯವಾಗಿದೆ. ಇಂತಹ, ಯಾವುದೇ ಸುದ್ದಿಗಳನ್ನು ಮಾನವೀಯ ಮೌಲ್ಯವಿಲ್ಲದೆ ಮುಚ್ಚಿ ಹಾಕಲಾಗುತ್ತದೆ.

ಸೆಪ್ಟೆಂಬರ್ 14 ರ ಹತ್ರಾಸ್ ಘಟನೆಯು ದಲಿತರ ವಿರುದ್ಧ ನಿರಂತರ ಸರಣಿಯ ದಾಳಿಯ ಭಾಗವಾಗಿದ್ದು, ಕೇಂದ್ರ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಮತ್ತು ಉತ್ತರಪ್ರದೇಶದಲ್ಲಿ ಯೋಗಿ ಆದಿತ್ಯನಾಥ್ ಸರ್ಕಾರದ ಅನಾಗರಿಕತೆಯ ಅನಾವರಣ ವಾಗಿದೆ. ಜಮೀನುದಾರ ಠಾಕೂರ್ ಸಮುದಾಯಕ್ಕೆ ಸೇರಿದ ಆರೋಪಿಗಳು 19 ವರ್ಷದ ದಲಿತ ಮಹಿಳೆಯನ್ನು ಸಾಮೂಹಿಕವಾಗಿ ಅತ್ಯಾಚಾರ ವೆಸಗಿ, ಘೋರ ಗಾಯಗಳನ್ನು ಉಂಟುಮಾಡಿ ಕೊಟ್ಟ ಚಿತ್ರ ಹಿಂಸೆ, ಆನಂತರ, ಆಕೆಯ ಶವವನ್ನು ಪೊಲೀಸರು ತೆಗೆದುಕೊಂಡು ಹೋಗಿದ್ದು ಮತ್ತು ಕುಟುಂಬದ ಒಪ್ಪಿಗೆಯಿಲ್ಲದೆ ರಾತ್ರಿ ಹೊತ್ತಿನಲ್ಲಿ ಶವಸಂಸ್ಕಾರ ಮಾಡಲಾಗುವುದು ಎಂದರೆ, ಒಬ್ಬ ಸನ್ಯಾಸಿಯಾಗಿದ್ದ, ಯೋಗಿ ಆದಿತ್ಯನಾಥ್ ಆಡಳಿತದ ಲಜ್ಜೆಗೆಟ್ಟ ನೀತಿಯನ್ನು ಅಂದರೆ, ಅವರು ಪ್ರತಿನಿಧಿಸುವ ಹಿಂದುತ್ವದ ಬೀಕರತೆಯನ್ನು ಪ್ರತಿಬಿಂಬಿಸುತ್ತದೆ.

ಈ ಕ್ರೂರ ಮತ್ತು ಅನಾಗರಿಕ ಪ್ರವೃತ್ತಿಯನ್ನು ವಿಶ್ವಸಂಸ್ಥೆಯು ಕೂಡ ಕೇಳರಿಯದ ಒಂದು ಆಘಾತ ಘಟನೆ ಎಂದು, ತನ್ನ ದುಃಖವನ್ನು ವ್ಯಕ್ತಪಡಿಸಿದೆ. ಶವಕ್ಕೆ ಗೌರವ ತೋರಿಸುವ ಸಂಸ್ಕೃತಿಯನ್ನು ಸಹಾ ಮರೆತುಹೋದ ಆದಿತ್ಯನಾಥ್ ರ ನೀತಿಯನ್ನು ಇಲ್ಲಿ ಶೋಚನೀಯವಾಗಿ ಉಲ್ಲಂಘಿಸಲಾಗಿದೆ.

ಹತ್ರಾಸ್ ಪ್ರಕರಣದ ನೆರಳಿನಲ್ಲಿಯೇ, ನಾಲ್ಕು ವರ್ಷದ ಬಾಲಕಿಯ ವಿರುದ್ಧದ ಲೈಂಗಿಕ ದೌರ್ಜನ್ಯದ ಮತ್ತೊಂದು ಅನಾಗರಿಕ ಘಟನೆ ಅಕ್ಟೋಬರ್ 13 ರಂದು ಹಥ್ರಾಸ್‌ನಿಂದ ತುಂಬಾ ಹತ್ತಿರದಲ್ಲೇ ನಡೆದಿದೆ. ಇದು ಅಂತಹ ಅನಾಗರಿಕ ಕ್ರೂರತೆಯ ವಿರುದ್ಧ ಮಾನವ ಸಮುದಾಯದ ಕೋಪ ಮತ್ತು ದುಃಖವನ್ನು ಹೆಚ್ಚಿಸಿದ್ದರೂ ಸಹಾ, ದೌರ್ಜನ್ಯಕ್ಕೆ ತುತ್ತಾದವರೂ, ದಲಿತರಾದ್ದರಿಂದ, ಇವುಗಳು ಸಮಾಜಕ್ಕೆ ಸಂಕೇತಗಳು ಮಾತ್ರ ಆಗಿ ಉಳಿದಿವೆ. ಉತ್ತರಪ್ರದೇಶದ ಆದಿತ್ಯನಾಥ್ ಸರ್ಕಾರದ ತಾರತಮ್ಯದ ನಿಯಮದಡಿ ಯಲ್ಲಿ ದುಷ್ಕರ್ಮಿಗಳು ಇಂತಹ ಅಪರಾಧಗಳನ್ನು ಕೊನೆಗೊಳಿಸಲು ಸಿದ್ಧರಿಲ್ಲ. ಅದು ಕೋವಿಡ್–19 ರ ಲಾಕ್ ಡೌನ್ ಸಮಯದಲ್ಲೂ ಬಿಡುವಿಲ್ಲದೇ ನಡೆದ ಈ ಲೈಂಗಿಕ ದೌರ್ಜನ್ಯದ ಈ ಅಹಿತಕರ ಘಟನೆಗಳು ಉತ್ತರ ಪ್ರದೇಶದ ದೀನ ಮತ್ತು ಅಂಚಿನಲ್ಲಿರುವ ಜನರಲ್ಲಿ ಭಯ, ದುಃಖ ಮತ್ತು ತೀವ್ರ ಅಭದ್ರತೆಯ ಭಾವನೆಯನ್ನು ಉಂಟು ಮಾಡಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ (ಎನ್‌ಸಿಆರ್‌ಬಿ) ಮಾಹಿತಿಯ ಪ್ರಕಾರ, ಭಾರತದಲ್ಲಿ ಪ್ರತಿ 16 ನಿಮಿಷಗಳಲ್ಲಿ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಾಳೆ. 2019 ರ ಅಂಕಿಅಂಶಗಳು ಪ್ರತಿದಿನ 10 ದಲಿತ ಬಾಲಕಿಯರು ಅತ್ಯಾಚಾರಕ್ಕೆ ಒಳಗಾಗುತ್ತಾರೆ. ಇಂತಹ ಮೂರನೇ ಒಂದು ಭಾಗದಷ್ಟು ಘಟನೆಗಳು ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ನಡೆಯುತ್ತವೆ. 2019 ರಲ್ಲಿ 303 ಸ್ಥಾನಗಳೊಂದಿಗೆ ಅಧಿಕಾರಕ್ಕೆ ಬಂದ ನಂತರ ಸಂಘ ಪರಿವಾರದ ಹಿಂದುತ್ವ ದೌರ್ಜನ್ಯ ಕೂಟವು, ದಲಿತರು ಮತ್ತು ಅಲ್ಪಸಂಖ್ಯಾತರ ವಿರುದ್ಧ ಹಿಂಸಾತ್ಮಕ ಮತ್ತು ಕ್ರೂರ ಹಲ್ಲೆಗಳನ್ನು ಹೆಚ್ಚಾಗಿ ಮಾಡಿತು. ಈ ಘಟನೆಗಳು ನರೇಂದ್ರ ಮೋದಿಯವರ "ಸಬ್ಕಾ ಸಾಥ್, ಸಬ್ಕಾ ವಿಕಾಸ್ ಮತ್ತು ಸಬ್ಕಾ ವಿಶ್ವಾಸ್" ಸಂದೇಶವು ಅಪರಾಧಿಗಳಿಗೆ ಮಾತ್ರ ಎಂದು ಸಾಬೀತಾಯಿತು. ಬೇಟಿ ಬಚಾವೋ, ಬೇಟಿ ಪಡಾವೋ' ಮಾತ್ರ ಬರೆ ಘೋಘಣೆಗೆ ಸೀಮಿತವಾಯಿತು.

ಅಸ್ಪೃಶ್ಯತಾ ಆಚರಣೆಗಳ ಹೊಸ ಸ್ವರೂಪಗಳು

ಮುಹಮ್ಮದ್ ಕಾಸಿಮ್‌ಗೆ ಗುಂಡು ಹಾರಿಸುವುದು, ಜನರನ್ನು ಪಾಕಿಸ್ತಾನಕ್ಕೆ ಹೋಗುವಂತೆ ಕೇಕೆ ಹಾಕಿ ಘೋಷಣೆ ಕೂಗುವುದು , ಮುಹಮ್ಮದ್ ಬೇಕರ್ ಆಲಂ ಅವರು 'ಭಾರತ್ ಮಾತಾ ಕಿ ಜೈ' ಎಂಬ ಘೋಷಣೆಯನ್ನು ಎತ್ತುತ್ತಾರೆ, ಪ್ರೊಫೆಸರ್ ಜೀತ್ರೆ ಹಂಜೆ ಅವರನ್ನು ಫೇಸ್‌ಬುಕ್ ಪೋಸ್ಟ್‌ಗಾಗಿ ಬಂಧಿಸುವುದು ಮತ್ತು ಗೋಮಾಂಸ ಹೊಂದಿದ್ದಕ್ಕಾಗಿ ಲಂಚಿಂಗ್ ಮಾಡುವುದು. ಉತ್ತರ ಪ್ರದೇಶದಲ್ಲಿ ಕೋವಿಡ್ –19 ರೋಗಿಗಳು ಕೂಡಾ, ದಲಿತರು–ತಯಾರಿಸಿದ ಆಹಾರವನ್ನು ನಿರಾಕರಿಸುವುದು; ಜಾತಿ ತಾರತಮ್ಯ ಮತ್ತು ವಿಶ್ವ ವಿದ್ಯಾಲಯದಲ್ಲಿ ಕೊಟ್ಟ ಕಿರುಕುಳದಿಂದ, ರೋಹಿತ್ ವೇಮುಲಾ ಆತ್ಮಹತ್ಯಗೆ ಶರಣಾಗಿದ್ದು, ಮುಂಬಯಿಯಲ್ಲಿ, ಆದಿವಾಸಿ ವೈದ್ಯ ಪಾಯಲ್ ಥಡ್ವಿ ಕಿರುಕುಳ ದಿಂದಾಗಿ, ಆತ್ಮಹತ್ಯೆ ಮಾಡಿಕೊಂಡಿದ್ದು, ದೇವಾಲಯಕ್ಕೆ ಪ್ರವೇಶಿಸಲು ಯತ್ನಿಸಿದ ಆರೋಪದ ಮೇಲೆ 17 ವರ್ಷದ ವಿಕಾಸ್ ಕುಮಾರ್ ಜಾದವ್ ಅವರನ್ನು ಗುಂಡಿಕ್ಕಿ ಕೊಂದಿದ್ದಾರೆ; ದೇವಸ್ಥಾನದಲ್ಲಿ ಮೇಲ್ಜಾತಿಯವರ ಪಕ್ಕದಲ್ಲಿ ಸರಿಸಮಾನಾಗಿ ಕುಳಿತ ಎಂಬ ಕಾರಣಕ್ಕೆ ಕರ್ನಾಟಕದಲ್ಲಿ ದಲಿತ ಯುವಕನ್ನು ಕೊಲೆಗೈದಿದ್ದು, ಮರ್ಯಾದೆ ಹತ್ಯೆಗಳು, ಲವ್ ಜಿಹಾದ್, ನೈತಿಕ ಪೋಲಿಸ್ ಗಿರಿ ಮತ್ತು ಉನ್ನಾವೋ ಅತ್ಯಾಚಾರ ಪ್ರಕರಣ ಸಂತ್ರಸ್ತೆ ಮತ್ತು ಆಕೆಯ ಸಂಬಂಧಿಕರ ಹತ್ಯೆಯನ್ನು ಬಿಜೆಪಿ ಶಾಸಕ ಕುಲದೀಪ್ ಸೆಂಗಾರ್ ನಡೆಸಿದ್ದು, ಸಂಘ ಪರಿವಾರ ಭಾರತದಲ್ಲಿ ದಲಿತರ ವಿರುದ್ಧ ಬಿಚ್ಚಿಟ್ಟ ದೌರ್ಜನ್ಯಗಳ ಹೊಸ ಸ್ವರೂಪಗಳನ್ನು ಇವೆಲ್ಲಾ ಪ್ರಕರಣಗಳು ಸಮರ್ಥಿಸುತ್ತವೆ.

ದಲಿತರ ಮೇಲೆ, ವಿಶೇಷವಾಗಿ ಮಹಿಳೆಯರ ವಿರುದ್ಧ ಬಿಚ್ಚಿಟ್ಟ ದೌರ್ಜನ್ಯಗಳು ಅಪರಾಧಗಳನ್ನು ಮೀರಿ ಹೆಚ್ಚು ಪರಿಣಾಮ ಬೀರುತ್ತವೆ. ಬಿಜೆಪಿ ಸರ್ಕಾರದ ಅಡಿಯಲ್ಲಿ ಹಲ್ಲೆಗೊಳಗಾದ ದಲಿತರಿಗೆ ನ್ಯಾಯ ನಿರಾಕರಿಸಲಾಗಿದೆ ಮಾತ್ರವಲ್ಲ, ಅಧಿಕಾರಿಗಳು ಅಪರಾಧಿಗಳ ಪರ ಕೈಜೋಡಿಸುತ್ತಾರೆ ಎಂಬುದು ಗಮನಿಸಬೇಕಾದ ಅಂಶಗಳು. ಆಗಾಗ್ಗೆ ಇಂತಹ ಅಪರಾಧಗಳ ವಿರುದ್ಧ ಯಾವುದೇ ಪೊಲೀಸ್ ಪ್ರಕರಣ ದಾಖಲಾಗುವುದೇ ಇಲ್ಲ. ಇದಕ್ಕೆ ಸಾವಿರಾರು ಉದಾಹರಣೆಗಳನ್ನು ನೀಡಬಹುದು.

ಅದೃಷ್ಟಹೀನ ದಲಿತ ಸಮುದಾಯವು ಕಚೇರಿಗಳಲ್ಲಿ ಅಧಿಕಾರಿಗಳಿಂದ ಬೆದರಿಕೆ ಮತ್ತು ತಾರತಮ್ಯವನ್ನು ಸಹಿಸಿ ಕೊಳ್ಳ ಬೇಕಾಗುತ್ತದೆ. ಆಡಳಿತ ಪರಿಷತ್ತುಗಳು ಹಲವು ಕಡೆ, ಸಂಘ ಪರಿವಾರದ ಪ್ರಚೋದನೆಯ ಮೇರೆಗೆ ದಲಿತರ ವಿರುದ್ಧ ಇಂತಹ ದಾಳಿಗಳನ್ನು ನಡೆಸುತ್ತವೆ. ದಲಿತ ಸಮುದಾಯದ ಆರ್ಥಿಕ ಅಭಿವೃದ್ಧಿಗೆ ಮೀಸಲಿಟ್ಟಿರುವ ಬಜೆಟ್ ನಿಬಂಧನೆಗಳನ್ನು ಬಿಜೆಪಿ ಸರ್ಕಾರ ಕಡಿತಗೊಳಿಸುವ ನೀತಿಯು ದಲಿತರ ವಿರುದ್ಧ ಪ್ರಾರಂಭಿಸಲಾದ ನಿರ್ಭೀತ ಜಾತಿ ಆಧಾರಿತ ಹತ್ಯೆಯಂತಿದೆ. ಮೋದಿ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಯೋಜನಾ ಆಯೋಗವನ್ನು ರದ್ದುಗೊಳಿಸುವುದರೊಂದಿಗೆ, ದಲಿತರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿ ನಿಧಿಯನ್ನು ಎಸ್ ಸಿ ಎಸ್ ಪಿ ಯೋಜನೆಯ ಮೂಲಕ ನಿಗದಿಪಡಿಸುವ ಪ್ರಕ್ರಿಯೆಯನ್ನು ಕೈಬಿಡಲಾಯಿತು.

ಕೇಂದ್ರ್ರ ಸರ್ಕಾರದ ಉದ್ಯೋಗಗಳಲ್ಲಿ ದಲಿತರಿಗೆ ಮೀಸಲಾಗಿರುವ ಹುದ್ದೆಗಳ ಸಂಖ್ಯೆಯನ್ನು ಬಿಜೆಪಿ ಸರ್ಕಾರ ಕಡಿತಗೊಳಿಸಿದೆ. ಇದು 2013 ರಲ್ಲಿ 92,928 ರಿಂದ 2015 ರಲ್ಲಿ 8,436 ಕ್ಕೆ ಇಳಿದಿದೆ. ಕೇಂದ್ರ್ರ ಸರ್ಕಾರಿ ಉದ್ಯೋಗಗಳಲ್ಲಿ ಹುದ್ದೆಗಳನ್ನು ರದ್ದುಪಡಿಸುವುದು, ಸಾರ್ವಜನಿಕ ಸೇವೆಗಳನ್ನು ಹೊರಗುತ್ತಿಗೆ ನೀಡುವುದು, ಗುತ್ತಿಗೆ ನೇಮಕಾತಿಗಳನ್ನು ಉತ್ತೇಜಿಸುವುದು, ಮೀಸಲಾತಿಯನ್ನು ನಿರಾಕರಿಸುವುದು ಮತ್ತು ಖಾಸಗಿ ವಲಯಕ್ಕೆ ಸರ್ಕಾರಿ ಸೇವೆಯನ್ನು ಏಕಸ್ವಾಮ್ಯಗೊಳಿಸುವ ನೀತಿಯನ್ನು ಅಳವಡಿಸಿಕೊಳ್ಳುವುದು, ಬಿಜೆಪಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದಲಿತ–ಆದಿವಾಸಿ ಸಮುದಾಯವನ್ನು ಪುಡಿ ಮಾಡುವ ನೀತಿಯನ್ನು ನೇರವಾಗಿ ಅನುಸರಿಸುತ್ತಾ ಬಂದಿದೆ.

ಅಪರಾಧ ಪ್ರಕರಣಗಳಿಗೆ ತಿದ್ದುಪಡಿಗಳು ಮತ್ತು ದಲಿತ ವಿರೋಧಿ ಕ್ರಮಗಳು, ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ, ಹೋರಾಟದ ಮೂಲಕವೇ ಭಾರತವು ಎಲ್ಲಾ ನಾಗರಿಕರಿಗೆ ಸಮಾನ ಸ್ಥಾನಮಾನವನ್ನು ಖಾತ್ರಿಪಡಿಸುವ ಸಾಮಾಜಿಕ–ರಾಜಕೀಯ ಪ್ರಜಾಪ್ರಭುತ್ವ ಸಿದ್ಧತೆಯೊಂದಿಗೆ ಸ್ವತಂತ್ರ ದೇಶವಾಯಿತು, ಇದು ಸಂಘ ಪರಿವಾರದ ಹಿಂದುತ್ವ ಸಿದ್ಧಾಂತದ ಮೂಲದ ಮೇಲೆ ಪರಿಣಾಮ ಬೀರಿತು. ಆದ್ದರಿಂದ, ಸ್ವಾತಂತ್ರ್ಯ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಳ್ಳಲು ಇವರು ಸಿದ್ಧರಿರಲಿಲ್ಲ.

ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯಲ್ಲಿ ಬ್ರಿಟಿಷ್ ವಸಹಾತು ಶಾಹಿ ಗಳೊಂದಿಗೆ ಶಾಮೀಲಾಗಿದ್ದವರು, ಸ್ವಾತಂತ್ರ್ಯ ಚಳುವಳಿಯಲ್ಲಿ ಯಾವುದೇ ಕೊಡುಗೆ ನೀಡದವರು. ಇದೀಗ ತಮ್ಮ ಮನುಸ್ಮೃತಿಯ ನಿಯಮಗಳ ಆಧಾರದ ಮೇಲೆ ಹಿಂದೂ ರಾಷ್ಟ್ರವನ್ನು ಸ್ಥಾಪಿಸಲು ಬಿಜೆಪಿಯ ಆಡಳಿತದ ಈ ಕಾಲ ಘಟ್ಟದಲ್ಲಿ ಪ್ರಯತ್ನಿಸುತ್ತಿದೆ.

ಮನುಸ್ಮೃತಿಯ ಆಜ್ಞೆಗಳ ಪ್ರಕಾರ ಸಾಮಾಜಿಕ–ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸುವುದು, ದೀನ ದಲಿತರು, ಮತ್ತು ಬಡವರಿಗೆ ಶಿಕ್ಷಣವನ್ನು ನಿರಾಕರಿಸುವುದು ಇವರ ಪ್ರಯತ್ನವಾಗಿದೆ. ಇದಕ್ಕಾಗಿ, ಅವರ ಮುಂದಿನ ನಡೆ ಭಾರತೀಯ ದಂಡ ಸಂಹಿತೆ, ಕ್ರಿಮಿನಲ್ ಪ್ರೊಸೀಜರ್ ಕೋಡ್ ಮತ್ತು ಇಂಡಿಯನ್ ಎವಿಡೆನ್ಸ್ ಆಕ್ಟ್ ಅನ್ನು ತಿದ್ದುಪಡಿ ಮಾಡಲು ಸಹ ಪ್ರಸ್ತಾಪಿಸಿದೆ. ಇದು ಭಾರತೀಯ ನ್ಯಾಯಶಾಸ್ತ್ರ ಮತ್ತು ನ್ಯಾಯಾಂಗ ವ್ಯವಸ್ಥೆಯ ಮೂಲಾಧಾರವಾಗಿದೆ. ಇದಕ್ಕಾಗಿ, ದೇಶವು ಕೋರೋನ–ವೈರಸ್–ಪ್ರೇರಿತ ಲಾಕ್ಡೌನ್ ಅಡಿಯಲ್ಲಿ ಉಳಿದಿರುವಾಗ ಐದು ಸದಸ್ಯರ ಸಮಿತಿಯನ್ನು ರಚಿಸಲಾಗಿದೆ.

ಸಂಘ ಪರಿವಾರದ ರಹಸ್ಯ ಕಾರ್ಯಸೂಚಿಯನ್ನು ಸಮರ್ಥಿಸುವ ಮೂಲಕ ಸುಪ್ರೀಂ ಕೋರ್ಟ್‌ನಲ್ಲಿ ಅಥವಾ ಹೈಕೋರ್ಟ್‌ಗಳಲ್ಲಿ ಸೇವೆ ಸಲ್ಲಿಸಿದ ಯಾವುದೇ ನ್ಯಾಯಾಧೀಶರು ಐದು ಸದಸ್ಯರ ಈ ಸಮಿತಿಯಲ್ಲಿ ಸ್ಥಾನ ಪಡೆದಿಲ್ಲ, ಎಂಬುದು ಆಶ್ಚರ್ಯಕರ ಸಂಗತಿ. ಸಂಘ ಪರಿವಾರದ ಒಳಸಂಚನ್ನು ಇಲ್ಲಿ ಗಮನಿಸಬೇಕಾಗಿದೆ. ಎಲ್ಲಾ ಜಾತಿ ಆಧಾರಿತ ಹತ್ಯೆಗಳನ್ನು ಸಮರ್ಥಿಸುವ ವೇದಿಕೆಯಾಗಿ ಕಾರ್ಯನಿರ್ವಹಿಸಲು ಮೂವರು ಪ್ರಾಧ್ಯಾಪಕರು, ವಕೀಲರು ಮತ್ತು ಜಿಲ್ಲಾ ನ್ಯಾಯಾಧೀಶರನ್ನು ಒಳಗೊಂಡ ಇಂತಹ ಸಮಿತಿಯನ್ನು ರಚಿಸುವುದು ಕ್ರಿಮಿನಲ್ ಸಿದ್ಧತೆಯಾಗಿರಬಹುದು. ಈ ಸಮಿತಿಯ ಜವಾಬ್ದಾರಿಯನ್ನು ಕೇವಲ ಮನುವಾದಿಗಳ ಆಜ್ಞೆಗಳಿಗೆ ಒಪ್ಪಿಗೆ ನೀಡಬಹುದಾಗಿದೆ. ಪಾರದರ್ಶಕ ಇಲ್ಲದ ಈ ಐದು ಸದಸ್ಯರ ಈ ಕೂಟದ ಕಾರ್ಯವೈಖರಿ ಖಂಡಿತ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿವೆ. ಇದನ್ನು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ.

ಜಾತಿ ಕೋಟೆಗಳನ್ನು ಉರುಳಿಸಲು ಮತ್ತು ಮನುಸ್ಮೃತಿಯ ಪ್ರತಿಪಾದಕರನ್ನು ಸೋಲಿಸಲು ಕಾಲಘಟ್ಟ ಮೀರಿಲ್ಲ. ಮತ್ತೇಕೆ ತಡಮಾಡದೆ ಸಜ್ಜುಗೊಳ್ಳೋಣ.

ಈ ನಿಟ್ಟಿನಲ್ಲಿ ನವೆಂಬರ್, 26 ರಂದು ನಡೆಯುವ ಒಂದು ದಿನದ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸೋಣ. ಸಂವಿಧಾನದ ಮೂಲಾಶಯಗಳಾದ ಸ್ವಾವಲಂಭೀ ಆರ್ಥಿಕತ, ಒಕ್ಕೂಟ ಪ್ರಭುತ್ವ ಮತ್ತು ಸಾಮಾಜಿಕ ನ್ಯಾಯ' ವನ್ನು ರಕ್ಷಿಸೋಣ. ಭಾರತವನ್ನು ಮನು ವಾದಿಗಳಿಂದ ಮುಕ್ತಗೊಳಿಸೋಣ. ■

➘ ಬಸ್ ನಿಲ್ದಾಣದ ಬಳಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಕೊರೋನಾ ಸಂದರ್ಭದಲ್ಲಿ ಬಡ ರೋಗಿಗಳನ್ನು ದುಪ್ಪಟ್ಟು ಬಿಲ್ಲುಗಳಿಂದ ಸುಲಿಗೆ ಮಾಡುತ್ತಿರುವ ಖಾಸಗೀ ಆಸ್ಪತ್ರೆಗಳನ್ನು ನಿಯಂತ್ರಿಸಬೇಕು, ಜಿಲ್ಲೆಯಲ್ಲಿ ಪ್ರತೀ ತಾಲೂಕಿನಲ್ಲಿರುವ ಆರೋಗ್ಯ ಕೇಂದ್ರ್ರಗಳನ್ನು ಸಮುದಾಯ ಆಸ್ಪತ್ರೆ ಹಾಗೂ ತಾಲೂಕು ಆಸ್ಪತ್ರೆಗಳಾಗಿ ಉನ್ನತ್ತೀಕರಿಸಬೇಕು, ಮಂಗಳೂರಿನ ವೆನ್‌ಲಾಕ್ ಜಿಲ್ಲಾಸ್ಪತ್ರೆಯನ್ನು ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸಬೇಕು, ಮಂಗಳೂರಿನಲ್ಲಿ ಸರಕಾರೀ ಮೆಡಿಕಲ್ ಕಾಲೇಜನ್ನು ತೆರೆಯಬೇಕು ಎಂದು ಈ ಧರಣಿಯಲ್ಲಿ ಆಗ್ರಹಿಸಲಾಯಿತು. ಡಿವೈಎಫ್‌ಐ ನೇತೃತ್ವದಲ್ಲಿ ವಿವಿಧ ಸಂಘಟನೆಗಳನ್ನೊಳಗೊಂಡು ಉಳ್ಳಾಲ ವಲಯ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯನ್ನು ರಚಿಸಲಾಗಿದ್ದು, ಅದರ ನೇತೃತ್ವದಲ್ಲಿ ಧರಣಿ ನಡೆಯಿತು.

ಸಿಪಿಐ(ಎಂ) ಮಂಗಳೂರು ನಗರ ಉತ್ತರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮಾತನಾಡಿದರು. ಸತ್ಯಾಗ್ರಹಿಗಳನ್ನುದ್ದೇಶಿಸಿ ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್, ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ನ್ಯಾಯವಾದಿ ರಾಮಚಂದ್ರ ಬಬ್ಬುಕಟ್ಟೆ, ಸಮುದಾಯದ ವಾಸುದೇವ ಉಚ್ಚಿಲ ಮಾತನಾಡಿದರು. ಡಿವೈಎಫ್‌ಐ ಜಿಲ್ಲಾ ಮುಖಂಡರಾದ ಸಂತೋಷ್ ಬಜಾಲ್, ಬಿ.ಕೆ.ಇಮ್ತಿಯಾಜ್, ಅಶ್ರಫ್ ಕೆ.ಸಿ.ರೋಡ್, ಸುನಿಲ್ ಕುತ್ತಾರ್, ಸಿಪಿಐ(ಎಂ) ಮುಖಂಡರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯಕ್ ಧರಣಿಯಲ್ಲಿ ಉಪಸ್ಥಿತರಿದ್ದರು. ●


ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆಯು ಬರಹ ಮತ್ತು ವೆಬಿನಾರುಗಳ ಸರಣಿಯ ಮೂಲಕ ಲೋಕಾರ್ಪಣೆಗೊಂಡಿತು. ವೈಜ್ಞಾನಿಕ ಮನೋವೃತ್ತಿ (ಅಥವಾ ಅದರ ಅಭಾವ) ಕೊರೊನಾ ಕಾಲದಲ್ಲಿ ಮುನ್ನೆಲೆಗೆ ಬಂದ ಮುಖ್ಯ ಪ್ರಶ್ನೆಗಳಲ್ಲೊಂದು. ಆದ್ದರಿಂದ "ವೈಜ್ಞಾನಿಕ ಮನೋವೃತ್ತಿ : ಕೊರೊನಾ ಕಾಲದಲ್ಲಿ ಮತ್ತು ನಂತರ" ಈ ಉಪ ಥೀಮ್ ಕುರಿತು ಕೆಳಗೆ ಕಾಣಿಸಿದ 5 ಪ್ರಶ್ನೆಗಳ ಪ್ರಶ್ನಾವಳಿ ಸುತ್ತ ನಾಡಿನ ವಿಜ್ಞಾನಿಗಳು, ವಿಜ್ಞಾನ ಬರಹಗಾರರು, ಸಂಶೋಧಕರು, ಜನವಿಜ್ಞಾನ ಚಳುವಳಿಗಾರರನ್ನು ಈ ಕೆಳಗಿನ ಪ್ರಶ್ನೆಗಳ ಸುತ್ತ ಬರಹಗಳನ್ನು ಕೇಳಲಾಗಿತ್ತು

1. **ವೈರಸ್ ಹುಟ್ಟು ಮತ್ತು ಮೂಲದ ಕುರಿತು ವಿವಾದಗಳ ಕುರಿತು ನಿಮ್ಮ ಅಭಿಪ್ರಾಯ ಏನು?**
2. **ರೋಗ ಹರಡದಂತೆ ಸಾರ್ವಜನಿಕ ವೈಜ್ಞಾನಿಕ ಅರಿವು ಮೂಡಿಸುವುದರಲ್ಲಿ ಸೋಲು–ಗೆಲುವು ಗಳೇನು? ಮುಂದೇನು ಮಾಡಬಹುದು ?**
3. **ಕೊರೊನಾ ಸಂಬಂಧಿ ಮೌಢ್ಯದ ಪ್ರಚಾರ ವ್ಯಾಪಕವಾಗಿ ಆದವು. ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಮಾಡಿದ ಮತ್ತು ಅದನ್ನು ನಿರ್ದಿಷ್ಟ ಉದ್ದೇಶಗಳಿಗೆ ದುರ್ಬಳಕೆ ಮಾಡಿದ ವಿವಿಧ ಶಕ್ತಿ/ಸಂಸ್ಥೆಗಳು ಯಾವುವು? ಅವುಗಳ ಉದ್ದೇಶವೇನು? ಅದನ್ನು ಎದುರಿಸುವುದು ಹೇಗೆ?**
4. **ಕೊರೊನಾ 'ಪ್ರಕೃತಿಯ ಸೇಡು' ಎಂದು ಜನಜನಿತವಾಗಿರುವ ವಾದ ವೈಜ್ಞಾನಿಕವಾಗಿ ಎಷ್ಟು ಸರಿ?**
5. **ಕೊರೊನಾ ವಿರುದ್ಧ ಲಸಿಕೆ ಅಥವಾ ಔಷಧಿಯ ಅಭಿವೃದ್ಧಿ, ಉತ್ಪಾದನೆ, ಪರಿಣಾಮಕಾರಿ ವಿತರಣೆ (ಪೇಟೆಂಟ್ ಸೇರಿದಂತೆ) ಸಮಸ್ಯೆಗಳು ಯಾವುವು?**

ಇವುಗಳಲ್ಲಿ ಕೆಲವು ಪ್ರಶ್ನೆಗಳಿಗೆ ಸ್ವತಃ ವಿಜ್ಞಾನಿ ಮತ್ತು ದೇಶದ ಜನ ವಿಜ್ಞಾನ ಚಳುವಳಿಗಳ ಅಖಿಲ ಭಾರತ ಜಾಲದ (ಎ.ಐ.ಪಿ.ಎಸ್.ಎನ್) ಅಧ್ಯಕ್ಷರಾಗಿರುವ ಡಾ. ಎಸ್. ಚಟರ್ಜಿ ಅವರು ಹೀಗೆ ಉತ್ತರಿಸಿದ್ದಾರೆ:

ಕೋವಿಡ್ ಮೂಲ, ಭವಿಷ್ಯದ ಕುರಿತು ವದಂತಿಗಳು ಮತ್ತು ವಿಜ್ಞಾನ

– ಡಾ. ಸವ್ಯಸಾಚಿ ಚಟರ್ಜಿ



ಲಾಕ್ ಡೌನ್ ಸಮಯದಲ್ಲಿ, ಕಾರ್ಮಿಕ ಸಂಘದಲ್ಲಿನ ನನ್ನ ಮಿತ್ರರು, ಬೆಂಗಾಲಿ ಮತ್ತು ಹಿಂದಿ ಮಾತನಾಡುವ 'ವಲಸೆ ಕಾರ್ಮಿಕ'ರ ಸಹಾಯ ದೂರವಾಣಿಯನ್ನು ನಿರ್ವಹಿಸುವಂತೆ ಹೇಳಿದರು. ಅವರಲ್ಲಿ ಬಹಳಷ್ಟು ಜನರಿಗೆ ಕನ್ನಡ ಬರುವುದಿಲ್ಲ. ಪುಣೆಯಲ್ಲಿರಯವ ನನ್ನ ಮಗಳೂ ಇಂಥದೇ ಕೆಲಸ ಮಾಡಿದಳು. ಅಲ್ಲಿರುವ ಕನ್ನಡ ಮತ್ತು ಬೆಂಗಾಲಿ ಕಾರ್ಮಿಕರಿಗೆ ಊಟ ತಿಂಡಿ ವ್ಯವಸ್ಥೆ ಮಾಡಿ, ಅವರು ತಮ್ಮ 'ಮನೆಗೆ' ಹೋಗಲು ಸಹಾಯ ಮಾಡಿದಳು. ಇಂತಹ ಹಲವು ಪ್ರಯತ್ನಗಳು ದಾಖಲೆಯಾಗಿವೆ. ಆದರೆ ನನ್ನ ಎರಡು ಅಭಿಪ್ರಾಯಗಳನ್ನು ಇಲ್ಲಿ ಹೇಳಲೇಬೇಕು. ಈ ವಲಸೆ ಕಾರ್ಮಿಕರು ಮನೆಗೆ ಹೋಗಬೇಕೆಂಬ ತೀರ್ಮಾನದ ನಂತರ, ಅದಕ್ಕಾಗಿ ತಮ್ಮದೇ ಆದ ದಾರಿ ಕಂಡುಕೊಂಡರು. ಅವರ ಹಳ್ಳಿಯಲ್ಲಿನ ಬದುಕು ಯಾತನೆಯಿಂದ ಕೂಡಿರುವುದೆಂದು ಗೊತ್ತಿದ್ದರೂ, ಮನೆಗೆ ಹೋಗಬೇಕೆಂಬ ನಿರ್ಧಾರ ತೆಗೆದುಕೊಂಡರು. ಇದು, ಒಂದು ರೀತಿಯಲ್ಲಿ ಅವರ ಶಾಂತಿಯುತ ಸತ್ಯಾಗ್ರಹವಾಗಿತ್ತು. ಎರಡನೇಯದಾಗಿ, ಇವರು 'ವಲಸೆ' ಪ್ರಜೆಗಳೆಂದು ಗೊತ್ತಿದ್ದರೂ, ಸ್ಥಳೀಯರಾರೂ ಇವರನ್ನು ಹೊರಗಿನವರೆಂದು ಭಾವಿಸಲಿಲ್ಲ. ಎಂತಹ ಭಾಷಾ ಭೇಧವೂ ಇಲ್ಲದೆ, ಆದಷ್ಟು ಸಹಾಯ ಮಾಡಿದರು.

'ಚೀನಾ ಪಿತೂರಿ' ವದಂತಿ

ಲಾಕ್ ಡೌನ್ ಸಮಯದಲ್ಲಿ, ಎರಡು ತರಹದ ವದಂತಿಗಳು ಕಾಣಿಸಿಕೊಂಡವು. ಮೊದಲನೆಯದು, ವೈರಾಣುಗಳು ಚೀನಾ ಪ್ರಯೋಗಾಲಯಗಳಲ್ಲಿ ತಯಾರಿಸಿ ಅವನ್ನು ಶತ್ರು ದೇಶಗಳಲ್ಲಿ ಅಲ್ಲೋಲ–ಕಲ್ಲೋಲ ಉಂಟು ಮಾಡುವುದಕ್ಕೆ ರವಾನಿಸಿದೆ ಅಂತ. ಇದನ್ನು ಹುಟ್ಟಿಸಿದ್ದು, ರಾಜಕೀಯವಾಗಿ ಚೀನಾಗೆ ವಿರುದ್ಧವಾಗಿರುವ ಸರಕಾರಗಳು. ಆದರೆ ಜಾಗತಿಕ ವಿಜ್ಞಾನಿಗಳ ಸಮುದಾಯ ಇದನ್ನು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷಿಸಿತು. ಇದಕ್ಕೆ ವೈರಾಣುಗಳನ್ನು ಪ್ರಯೋಗಾಲಯಗಳಲ್ಲಿ ತಯಾರಿಸಲಾಗುವುದಿಲ್ಲ ಎಂಬುದು ಕಾರಣವಲ್ಲ. ಇಂತಹ ರಾಜಕೀಯ ಆರೋಪಗಳನ್ನು ವಿಜ್ಞಾನಿಗಳು ಗಂಭೀರವಾಗಿ ಪರಿಗಣಿಸುವುದಿಲ್ಲ. ಪ್ರಸಿದ್ಧ ವೈಜ್ಞಾನಿಕ ಪತ್ರಿಕೆ ಒಂದರಲ್ಲಿ ಕೊವಿದ್ ವೈರಸ್ ಪ್ರಾಕೃತಿಕ ಮೂಲದಿಂದ ಬಂದಿದ್ದು ಕೃತಕ ಅಲ್ಲ ಎಂದು ವೈಜ್ಞಾನಿಕ ವಿಶ್ಲೇಷಣೆಯೊಂದಿಗೆ ಪ್ರಕಟಿಸಿತು. ಕೊವಿದ್ ವೈರಸ್ ಕೃತಕವಾಗಿ ತಯಾರಿಸಿದ್ದು ಎಂಬುದಕ್ಕೆ ವೈಜ್ಞಾನಿಕ ವಿಶ್ಲೇಷಣೆಯನ್ನು ಯಾರೂ ಕೊಡಲಿಲ್ಲ. ತಮ್ಮ ಸಂಶೋಧನೆಯ ಫಲಿತಾಂಶಗಳನ್ನು ಚೀನಾದ ವಿಜ್ಞಾನಿಗಳು ಪ್ರಪಂಚದ ಇತರ ವಿಜ್ಞಾನಿಗಳೊಂದಿಗೆ ಹಂಚಿಕೊಂಡು, ಲಸಿಕೆಯ ತಯಾರಿಕೆ, ಸೊಂಕು ನಿವಾರಣೆ ಮುಂತಾದ ಪ್ರಯತ್ನಗಳಲ್ಲಿ ಸಹಾಯಮಾಡಿದರು. ಆದರೆ ಔಷಧಿ ಕಂಪೆನಿಗಳು ತಮ್ಮ ನಂತರದ ಸಂಶೋಧನೆಗಳನ್ನು 'ವ್ಯವಹಾರಂದ ಗುಟ್ಟು' ಎಂಬ ಕಾರಣವೊಡ್ಡಿ ಬೇರೆ ಯಾರೊಂದಿಗೂ ಅದನ್ನು ಹಂಚಿಕೊಳ್ಳುವುದಿಲ್ಲ. ಇವೆಲ್ಲವನ್ನೂ ಗಮನಿಸಿ 'ಚೀನಾ ಪಿತೂರಿ ಸಿಧ್ಧಾಂತ'ಗಳನ್ನು ಓದುಗರು ಸತ್ಯಾಸತ್ಯತೆಗಳನ್ನು ಪರಾಮರ್ಶಿಸಬಹುದು.

ತಾಬ್ಲಿಗಿ ಜಮಾತ್ ವದಂತಿ

ಇನ್ನೊಂದು ಗಾಳಿಸುದ್ದಿ, ಭಾರತದಲ್ಲಿ ವೈರಾಣುವನ್ನು ಹರಡಲು ತಾಬ್ಲಿಗಿ ಜಮಾತ್ ಮಾಡಿದ ಪಿತೂರಿ ಎಂಬುದು. ಆಗಸ್ಟ್ 22ರ ಮುಂಬಯಿ ಉಚ್ಚ ನ್ಯಾಯಾಲಯ ಈ 'ಪಿತೂರಿ' ಒಪ್ಪದ್ದೆ ತಾಬ್ಲಿಗಿ ಆಪಾದಿತರ ಮೇಲಿನ ಪ್ರಕರಣಗಳನ್ನು ವಜಾ ಮಾಡುವ ತೀರ್ಪಿನ ನಂತರ, ಈ ವಿಷಯ ತಣ್ಣಗಾಯಿತು. ಈ ಸಮಯಕ್ಕೆ, ಸೊಂಕು ಬರೋಡಾ ಪಟ್ಟಣಕ್ಕೂ ತಲುಪಿತೆಂಬ ಸುದ್ದಿ ಇತ್ತು. ನನಗೆ ದೆಹಲ್ಲಿಯಲ್ಲಿಯೂ, ಬರೋಡಾದಲ್ಲಿಯೂ ಬಂಧುಗಳಿದ್ದಾರೆ. ನಾನು ದೆಹಲಿಯಲ್ಲಿರುವ ಬಂಧುವಿನ ಜೊತೆ ಫೋನಿನಲ್ಲಿ ಮಾತನಾಡಿ, ಹಾಗೆಯೇ, ಬರೋಡಾದ ಬಂಧುಗಳ ಕ್ಷೇಮವನ್ನು ವಿಚಾರಿಸಿದೆ. ದೆಹಲಿಯ ಬಂಧು ತಕ್ಷಣ ಉತ್ತರಿಸುತ್ತಾ 'ಇನ್ನು ಹೆಂಗಿರುತ್ತಾರೆ? ಈ ಜನ ಇಡೀ ದೇಶದಲ್ಲಿ ಸೊಂಕನ್ನು ಹರಡಿರಬೇಕಾದರೆ.' ಇದಕ್ಕೆ ನನ್ನಲ್ಲಿ ಒಂದು ಸರಳವಾದ ಪ್ರಶ್ನೆ ಇತ್ತು. 'ಅವರು ಬೇರೆ ಜಾತಿಯವರಿಗೆ ಸೊಂಕನ್ನು ಹರಡಬೇಕಾದರೆ, ಮೊದಲು ಅವರ ಜನರಲ್ಲಿಯೇ ಸೊಂಕು ಹರಡಬೇಕಲ್ಲವೇ?' ಇಂತಹ ಪ್ರಶ್ನೆಯನ್ನು ನಿರೀಕ್ಷಿಸದ ಅವರು ತಬ್ಬಿಬ್ಬಾದರು. ಬರೋಡಾಕ್ಕೆ 'ಅಹಮದಾಬಾದಿನ 'ನಮಸ್ತೆ ಟ್ರಂಪ್'ನ 1 ಲಕ್ಷ ಜನರಿಂದ ಈ ಸೊಂಕು ಹರಡಿರಬಹುದಲ್ಲವೆ' ಎಂದೆ. ನನ್ನ ಬಂಧುವಿಗೆ ಆಘಾತವಾಯಿತು. 'ಅಂದರೆ ಈ ಸೊಂಕು ಅಮೇರಿಕಾದಿಂದ ಹರಡಿದೆಯೇ?' ನನ್ನ ಉತ್ತರ: 'ಇದು ಒಂದು ಸಾಧ್ಯತೆ, ಅಷ್ಟೇ.' ಅಮೇರಿಕಾದಲ್ಲೂ ಬಹಳಷ್ಟು ಸೊಂಕಿದೆ. ಅಲ್ಲೂ ಜನ ಸಾಯುತ್ತಿದ್ದಾರೆ. ಅಲ್ಲಿಂದಲೂ ಸೊಂಕು ಭಾರತಕ್ಕೆ ಬಂದಿರಬಹುದು. ಆದರೆ, ನಾನು ಇದರಲ್ಲಿ ಅಮೇರಿಕನ್ನರ ಪಿತೂರಿ ಇದೆಯೆಂದು ಎಂದಿಗೂ ಹೇಳುವುದಿಲ್ಲ.' ಎಂದೆ.


ನನ್ನ ಬಂಧುವಿನ ಕುತೂಹಲ ಹೆಚ್ಚಾಯಿತು. 'ಈ ತಾಬ್ಲಿಗೀ ಜಮಾತ್ ಸೊಂಕನ್ನು ಎಲ್ಲಿ ಹರಡಿರಬಹುದು?'. 'ನನ್ನಲ್ಲಿ ಅದರ ಉತ್ತರವಿಲ್ಲ. ಈ ಕೂಟವು ನಿಜಾಮುದ್ದಿನ್ ನಲ್ಲಿ ನಡೆದುದರಿಂದ, ಸಮೀಪದ ದೆಹಲಿಯಲ್ಲಿ ಮೊದಲು ಹರಡಬೇಕು. ಸಮೀಪದ ಸ್ಥಳಗಳನ್ನು ಬಿಟ್ಟು, ಅದು ಯಾಕೆ ದೂರದ ಬರೋಡಾವನ್ನು ಆಯ್ದುಕೊಂಡಿತು? ಮೇ ತಿಂಗಳ ಮಧ್ಯೆದಲ್ಲಿಯೂ ದೆಹಲಿ ನಗರದಲ್ಲಿನ ಸೊಂಕು ಕಡಿಮೆ, ಎಂದರೆ, ದಿನಕ್ಕೆ ಸುಮಾರು 500 ಸಂಖ್ಯೆಯಲ್ಲಿತ್ತು.'

ಈ ವಿಷಯಗಳು ನನ್ನ ಬಂಧುವಿಗೆ ಗೊತ್ತೇ ಇರಲಿಲ್ಲ. ಅವರು ಆನಂತರ ಅಂತರ್ಜಾಲದಲ್ಲಿ ಮಾಹಿತಿ ಶೇಖರಿಸಿ ಹೇಳಿದ್ದು: ಏಪ್ರಿಲ್ ತಿಂಗಳಲ್ಲೇ 170 ಹಾಟ್ ಸ್ಪಾಟ್ (ಅಂದರೆ ಕೊವಿದ್ ಸೋಂಕು ಹರಡುವ ಅಪಾಯದ) ಸ್ಥಳಗಳಿವೆಯೆಂದೂ, ಸುಮಾರು 200 ಸ್ಥಳಗಳು ಹಾಟ್ ಸ್ಪಾಟ್ ಆಗುವ ಸಾಧ್ಯತೆ ಇದೆಯೆಂದೂ ತಿಳಿಸಲಾಗಿತ್ತು. ಯಾರಾದರೂ, ಜನರ ಪ್ರಯಾಣ ಹಾದಿಯನ್ನು ತಿಳಿಸದಿದ್ದರೆ, ಈ ಸೊಂಕು ತಬ್ಲಿಗೀ ಜಮಾತ್ ನಿಂದ ಶುರುವಾಯಿತೆಂದು ನಾನು ನಂಬುವುದಿಲ್ಲ.'

ಕೊವಿದ್ ಭವಿಷ್ಯದ ಬಗ್ಗೆ ವಿಜ್ಞಾನ ಹೇಳಲು ಸಾಧ್ಯವೇ?

ಇಲ್ಲಿಗೆ ಈ ಅಧ್ಯಾಯ ಪೂರ್ತಿಯಾಯಿತು. ಜನರ ಗಮನ ಬೇರೆಡೆ ಸೆಳೆಯುವ ಇನ್ನಷ್ಟು ಸಂದರ್ಭಗಳೂ ಇದ್ದವು. 'ಜನತಾ ಕರ್ಫ್ಯೂ' ದಿನದ ಚಪ್ಪಾಳೆ ತಟ್ಟುವುದು, ತಟ್ಟೆ ಬಾರಿಸುವುದು ಮುಂತಾದವು. ಏಪ್ರಿಲ್ 5ನೆಯ ತಾರೀಕಿನ ದೀಪವನ್ನು 9 ಗಂಟೆಗೆ 9 ನಿಮಿಷಗಳ ಕಾಲ ಬೆಳಗುವುದು, ದೊಡ್ಡ ಸುದ್ದಿಯಾಯಿತು. ಸಂಖ್ಯೆ 9 ರ ಮಾಂತ್ರಿಕ ಶಕ್ತಿ ಕುರಿತ ಸಂವಾದ ಬಹಳ ವಿಸ್ತೃತವಾಗಿತ್ತು. ಒಬ್ಬ ಮಹಾನ್ ವ್ಯಕ್ತಿಯ ಈ ಯೋಜನೆಗಳಿಂದ ವೈರಾಣು ನಾಶವಾಗುತ್ತದೆಂದು ಅನೇಕರು ಹೇಳಿದರು. ಒಂದಷ್ಟು 'ಹೆಸರಾಂತ ವಿಜ್ಞಾನಿ'ಗಳನ್ನೂ ಈ ಹೇಳಿಕೆಯಲ್ಲಿ ಸೇರಿಸಲಾಯಿತು. ನಾಸಾ ವಿಜ್ಞಾನಿಗಳು, ಭಾರತದಿಂದ ವೈರಾಣುವಿನ ಪಲಾಯನವನ್ನು ಗಮನಿಸಿದರೆಂದೂ ಜನ ಹೇಳಿದರು. 'ಜನತಾ ಕರ್ಫ್ಯೂ' ದಿನದ ಮಹಿಮೆ ಇದು. ಏಪ್ರಿಲ್ 5 ರ ಬೆಳಕು ನೆರಳಿನ ಆಟ, ಇನ್ನಷ್ಟು ಮಹತ್ವದ ಫಲಿತಾಂಶ ಕೊಡುವುದೆಂದು ಭರವಸೆ ನೀಡಲಾಯಿತು.

ಆದರೆ ನಿಜವಾದ ಫಲಿತಂಶ ಈ ರೀತಿ ಇದೆ: ಮಾರ್ಚ್ 22, ಅಂದರೆ 'ಜನತಾ ಕರ್ಫ್ಯೂ' ದಿನ ಸೊಂಕಿನ ಸಂಖ್ಯೆ 353. ಏಪ್ರಿಲ್ 5ರಂದು 3373. ಜೂನ್ 1, ಅಂದರೆ, ಲಾಕ್ ಡೌನ್ ಮುಕ್ತಾಯವಾಗಿ, ಲಾಕ್ ಡೌನ್ ಸಡಿಲಿಕೆ ಕಾರ್ಯಕ್ರಮ ಶುರುವಾದಾಗ, ಈ ಸಂಖ್ಯೆ 1,90,535. ಇಲ್ಲಿ ಪ್ರಶ್ನೆ ಏನೆಂದರೆ, ಯಾಕೀ ಬೆಳವಣಿಗೆ ಮತ್ತು ಇದು ಯಾವ ದಿಕ್ಕಿನಲ್ಲಿ ಎಷ್ಟು ಕಾಲ ಹೋಗುತ್ತದೆ? ಇದನ್ನು ಉತ್ತರಿಸುವುದು ತುಂಬಾನೇ ಕಷ್ಟ. ವೈರಾಣುವಿನ ಪ್ರಭಾವದ ಮೇಲೆ ಹಿಡಿತವಿರುವ ಅನೇಕ ಅಂಶಗಳ ವಿವರ ತಿಳಿಯದೆ, ಸೊಂಕಿನ ಬೆಳವಣಿಗೆ ಅಥವಾ ಕ್ಷೀಣತೆಯ ಸಾಧ್ಯತೆಗಳ ಬಗ್ಗೆ ಹೇಳುವುದು ಅಸಾಧ್ಯ. ವಿಜ್ಞಾನಿಗಳು ಯಾವುದೇ ನಿರ್ದಿಷ್ಟ ಸಂಖ್ಯೆಯನ್ನು ಕೊಡಲು ಸಾಧ್ಯವಿಲ್ಲ. ಆದರೆ ಬೆಳವಣಿಗೆ ಮತ್ತು ಅದರ ವೇಗದ ಕುರಿತು ಒಂದು ಗರಿಷ್ಠ ಮತ್ತು ಕನಿಷ್ಠ ಮಟದ್ದ ಅಂದಾಜು ಕೊಡಲು ವಿಜ್ಞಾನಕ್ಕೆ ಸಾಧ್ಯ. ವಿಜ್ಞಾನದ ಲಭ್ಯ ಮಾಹಿತಿ ಪ್ರಯೋಗಗಳ ಸಾಧ್ಯತೆಯನ್ನು ಆಧರಿಸಿ ನಿಖರತೆಗೆ ಒಂದು ಮಿತಿ ಇದೆ. ಈ ವಿಷಯವು ಪ್ರತಿ ವಿಜ್ಞಾನಿಗೂ ಚೆನ್ನಾಗಿ ಗೊತ್ತಿದೆ.



ಹಲವು ಜ್ಞಾನಶಿಸ್ತುಗಳ ಮಾಹಿತಿ ಒಳಗೊಂಡ ಗಣಿತದ ಮಾದರಿ ಅಗತ್ಯ

ಇದು ಹಲವು ಜ್ಞಾನಶಿಸ್ತುಗಳನ್ನು ಒಳಗೊಂಡ ವಿಷಯವಾದ್ದರಿಂದ, ಈ ಮಹಾಸಾಂಕ್ರಾಮಿಕದ ಬಗ್ಗೆ ಒಂದು ನಿರ್ಧಿಷ್ಠ ಸಂಖ್ಯೆ ಕೊಡಲು ಅಸಾಧ್ಯವಾದರೂ, ಅದರ ಪ್ರವೃತ್ತಿಯನ್ನು ಖಂಡಿತ ವಿಶ್ಲೇಷಿಸಬಹುದು. ಇದರ ಬಗ್ಗೆ ಮೊದಲು ಅಭ್ಯಾಸಮಾಡಿದ್ದು ಜಾನ್ ಗೌಂಟ್ ಎಂಬ ವಿಜ್ಞಾನಿ. ಇವರು ಮರಣದ ಕಾರಣಗಳನ್ನು ವ್ಯವಸ್ಥಿತವಾಗಿ ಅಭ್ಯಾಸ ಮಾಡಿ 1662 ಇಸವಿಯಲ್ಲಿ, ಸಾಂಕ್ರಾಮಿಕದ 'ಮರಣದ ಕಾರಣಗಳ ಬಗ್ಗೆ ಪ್ರಾಕೃತಿಕ ಮತ್ತು ರಾಜಕೀಯ ಟಿಪ್ಪಣಿಗಳು' ಎಂಬ ಪುಸ್ತಕ ಪ್ರಕಟಿಸಿದರು. ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ಮೊದಲು ವ್ಯವಸ್ಥಿತವಾಗಿ ಅಭ್ಯಾಸ ಮಾಡಿದ್ದು ಡಾನಿಯಲ್ ಬರ್ನೌಲಿ. ಇವರು ಗಣಿತಶಾಸ್ತ್ರಜ್ಞರೂ ಮತ್ತು ತರಬೇತಿ ಪಡೆದ ವೈದ್ಯರೂ ಆಗಿದ್ದರು.

1910 ಇಸವಿಯಲ್ಲಿ, ಸರ್ ರೊನಾಲ್ಡ್ ರಾಸ್ ಅವರು ಗಣಿತದ ಮಾದರಿಯನ್ನು ತಯಾರಿಸಿ ಬಳಸಿ ಭಾರತದಲ್ಲಿ ಮಲೇರಿಯಾ ಹತೋಟಿಗೆ ತರಲು ಪ್ರಯತ್ನಿಸಿದ್ದರು. ಈ ಗಣಿತದ ಮಾದರಿಯ ಪ್ರಯೋಗವು 1926–29 ಸಮಯದಲ್ಲಿ ಮಾಕ್ನೆಡ್ರಿಕ್ ಅವರ ಸಂಶೋಧನೆ ಮೂಲಕ ಗಮನಕ್ಕೆ ಬಂತು. ಪ್ರಪಂಚವು ಆಗತಾನೇ 1919–20 ಯಲ್ಲಿ ಆದ 'ಸ್ಪಾನಿಷ್ ಫ್ಲೂ' ರೋಗದಿಂದ ಚೇತರಿಸಿಕೊಳ್ಳುತ್ತಿತ್ತು. ಇದು 5 ಕೋಟಿ ಜನರನ್ನು ಸಾಯಿಸಿತ್ತು.

ಯಾವುದೇ ಸಾಂಕ್ರಾಮಿಕದ ಬೆಳವಣಿಗೆ, ಕ್ಷೀಣತೆ ಮತ್ತು ಸಂಪೂರ್ಣ ನಾಶ, ಇವೆಲ್ಲವನ್ನೂ ಉತ್ತರಿಸಬೇಕಾದರೆ, ಎಲ್ಲಾ ಪರಿಣಿತರ ಜಂಟಿ ಪ್ರಯತ್ನ ಬೇಕಾಗುತ್ತದೆ. ಅವರ ಎಲ್ಲಾ ಅಂಶಗಳನ್ನು ಸೇರಿಸಿದ ಒಂದು ಒಳ್ಳೆಯ ಗಣಿತದ ಮಾದರಿ ಬೇಕಾಗುತ್ತದೆ. ಇದರಲ್ಲಿ ಗಣಿತಶಾಸ್ತ್ರ, ಜೀವಶಾಸ್ತ್ರ, ಸೊಂಕುರೋಗ ಪರಿಣಿತರು, ಯೋಜಕರು, ಸಂಖ್ಯಾ ಶಾಸ್ತ್ರ ಪರಿಣಿತರು – .ಎಲ್ಲರೂ ಬೇಕಾಗುತ್ತಾರೆ. ಈ ಪರಿಣಿತರು ಎಷ್ಟು ನಿಖರವಾದ ಮಾಹಿತಿ ಕೊಡುತ್ತಾರೋ, ಈ ಮಾದರಿಯ ಫಲಿತಾಂಶ ಅಷ್ಟೇ ನಿಖರವಾಗಿರುತ್ತದೆ.

ದೊಡ್ಡ ಸಮಸ್ಯೆಗೆ ಸಣ್ಣ ಪರಿಹಾರಗಳೂ ಇವೆ

ಇಲ್ಲಿರುವ ಇನ್ನೊಂದು ತಪ್ಪುಕಲ್ಪನೆ ಲಸಿಕೆಯ ವಿಷಯದಲ್ಲಿ. ಜನರಲ್ಲಿ ಲಸಿಕೆಯು ಇನ್ನು ಕೆಲವೇ ತಿಂಗಳುಗಳಲ್ಲಿ ಬರುವುದೆಂಬ ಅನಿಸಿಕೆ ಇತ್ತು. ಇಂತಹ ನಿರೀಕ್ಷೆ ಏನೂ ತಪ್ಪಲ್ಲ. ಆದರೆ, ನಮಗೆ ಬೇಕಾಗುವುದೆಲ್ಲ ಆಗಲೇಬೇಕೆನ್ನುವುದು ಸರಿಯಲ್ಲ. 40 ವರ್ಷಗಳ ಸತತ ಪ್ರಯತ್ನವಾದರೂ ಏಡ್ಸ್ ಲಸಿಕೆ ಇನ್ನೂ ಬಂದಿಲ್ಲ. ಬಂದರೂ, ಆ ಲಸಿಕೆ ಎಲ್ಲರಿಗೂ ಸಿಗುವುದೆಂದಾಗಲೀ, ಬೆಲೆ ಸಾಮಾನ್ಯರಿಗೆ ಎಟುಕುವಂತೆ ಇರುವುದೆಂದಾಗಲೀ, ಯಾವ ಭರವಸೆಯೂ ಇಲ್ಲ. ಈಗ, ಕೋವಿಡ್ ಲಸಿಕೆ ಸಿಗುವವರೆಗೆ, ಈ ಸೊಂಕು ತಡೆಗಟ್ಟಲು ಉಪಾಯ? ಪರಿಣಿತ ವೈದ್ಯರು ಹಾಗೂ ಸೋಂಕು ತಜ್ಞರಾದ ಡಾ. ಟಿ. ಜಾಕೋಬ್ ಜಾನ್ ಮತ್ತು ಡಾ. ಎಮ್. ಎಸ್. ಶೇಷಾದ್ರಿ ಹೇಳಿದಂತೆ 'ದೊಡ್ಡ ಸಮಸ್ಯೆಗೆ, ಅಷ್ಟೇ ದೊಡ್ಡದಾದ ಪರಿಹಾರ ಹುಡುಕುವುದು ನಮ್ಮ ಮನಸ್ಥಿತಿ'. ಇಲ್ಲಿ ನಾವು ಎಡವಿದ್ದೇವೆ.

ಮುಖ ಕವಚ ಅಥವಾ ಮಾಸ್ಕ್ ಧರಿಸುವುದು ನಮ್ಮಲ್ಲಿರುವ ಸರಳ ಪರಿಹಾರ. ಗಂಡಸು, ಹೆಂಗಸು, ಮಕ್ಕಳು: ಪ್ರತಿಯೊಬ್ಬರು ಹೊರಗೆ ಬರುವಾಗ ಮಾಸ್ಕ್ ಹಾಕಿದರೆ, ಇದು ಲಾಕ್ ಡೌನ್ ಗೆ ಎರಡುಪಟ್ಟು ಹೆಚ್ಚು ಪರಿಣಾಮಕಾರಿ. ನಮ್ಮ ಲಾಕ್ ಡೌನ್ ಉಲ್ಲಂಘಿಸುವವರೇ ಹೆಚ್ಚು. ಅಂತಹ ಅರೆಬರೆ ಮಾತ್ರ ಜಾರಿಯಾಗುವ ಲಾಕ್ ಡೌನ್ ಗಿಂತ ಮಾಸ್ಕ್ ಧಾರಣೆ ಹೆಚ್ಚು ಫಲಿತ ಕೊಟ್ಟು ಸೊಂಕನ್ನು ಬೇಗ ಹತೋಟಿಗೆ ತರುತ್ತದೆ. ಲಾಕ್ ಡೌನ್ ನಾಶಮಾಡುವ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನೂ ಈ ಸರಳ ಪರಿಹಾರವಾದ ಮಾಸ್ಕ್ ಉಳಿಸುತ್ತದೆ.

ಪುಟ 15 ಕ್ಕೆ



ಜಮ್ಮು ಮತ್ತು ಕಾಶ್ಮೀರದಲ್ಲಿ ಸವಾಲುಗಳನ್ನು ಎದುರಿಸಲು ಜನತಾ ಮೈತ್ರಿಕೂಟದ ಉದಯ

ಜಮ್ಮು ಮತ್ತು ಕಾಶ್ಮೀರದ ಜನತೆಯ ಅಸ್ಮಿತೆ ಮತ್ತು ಹಕ್ಕುಗಳ ಮೇಲೆ ನಡೆಯುತ್ತಿರುವ ಸತತ ದಾಳಿಗಳನ್ನು ಎದುರಿಸಲು ಇಲ್ಲಿನ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳ ಐಕ್ಯತೆ ಅಗತ್ಯವಾಗಿದೆ. ಇಂತಹ ಸಮಯದಲ್ಲಿ 'ಗುಪ್ಕರ್ ಘೋಷಣೆಗೆ ಜನತಾ ಮೈತ್ರಿ' ಮೂಡಿ ಬಂದಿದೆ.
ಈ ಜನತಾ ಮೈತ್ರಿಕೂಟದ ಪ್ರಯತ್ನಗಳನ್ನು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಮತ್ತು ಒಕ್ಕೂಟತತ್ವವನ್ನು ರಕ್ಷಿಸುವ ಒಟ್ಟಾರೆ ಹೋರಾಟದ ಭಾಗವಾಗಿ ಕಾಣಬೇಕು.



ಪ್ರಕಾಶ ಕಾರಟ್

ಜಮ್ಮು ಮತ್ತು ಕಾಶ್ಮೀರದಲ್ಲಿ 'ಗುಪ್ಕರ್ ಘೋಷಣೆಗೆ ಜನತಾ ಮೈತ್ರಿ'(ಪಿಎಜಿಡಿ)ಯ ಉದಯ ಜನವಾದಿ ರಾಜಕೀಯ ಮತ್ತು ಜಮ್ಮು-ಕಾಶ್ಮೀರದ ಜನತೆಯ ಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ಹಕ್ಕುಗಳನ್ನು ಕಾಯ್ದುಕೊಳ್ಳುವ ಹೋರಾಟಕ್ಕೆ ಶುಭಸೂಚನೆ.

ಮೊದಲ ಗುಪ್ಕರ್ ಘೋಷಣೆ ಬಂದದ್ದು ಆಗಸ್ಟ್ 4, 2019 ರಂದು; ಅಂದು ಆರು ಪಕ್ಷಗಳು ಶ್ರೀನಗರದ ಗುಪ್ಕರ್ ರಸ್ತೆಯಲ್ಲಿರುವ ಫಾರುಕ್ ಅಬ್ದುಲ್ಲ ಅವರ ನಿವಾಸದಲ್ಲಿ ಸಭೆ ಸೇರಿ ಇದನ್ನು ಪ್ರಕಟಿಸಿದವು. ಅದರಿಂದಲೇ ಈ ಹೆಸರು ಬಂದಿರುವುದು. ಆ ಹೇಳಿಕೆ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು, ಕಲಮು 370 ಮತ್ತು ಕಲಮು 35ಎ ಕಾಪಾಡಿಕೊಳ್ಳುವ ಬಗ್ಗೆ ಮಾತಾಡಿತ್ತು. ಮರುದಿನವೇ, ಆಗಸ್ಟ್ 5, ರಂದು ಮೋದಿ ಸರಕಾರ ಸಂಸತ್ತಿನಲ್ಲಿ ಕಲಮು 370 ಮತ್ತು 35ಎ ನ್ನು ರದ್ದುಗೊಳಿಸಲು ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕಳಚಿ ಹಾಕಲು ಮುಂದಾಯಿತು.

ಜಮ್ಮು ಮತ್ತು ಕಾಶ್ಮೀರದ ಮೇಲೊಂದು ಭಂಡ ಪ್ರಹಾರದೊಂದಿಗೇ, ಬಿಜೆಪಿ ಮತ್ತು ಅದರ ಬಾಲಬಡುಕರನ್ನು ಬಿಟ್ಟು ಎಲ್ಲ ರಾಜಕೀಯ ಮುಖಂಡರುಗಳ ಮತ್ತು ಕಾರ್ಯಕರ್ತರ ವ್ಯಾಪಕ ಬಂಧನಗಳು ನಡೆದವು. ನಂತರ ಬಂದ ಲಾಕ್‌ಡೌನ್ ಒಂದಿಡೀ ಜನತೆಯ ಮೇಲೆ, ಅವರ ಮೂಲ ಹಕ್ಕುಗಳ ಮೇಲೆ ಒಂದು ಅತ್ಯಂತ ಕ್ರೂರ ನಿರ್ಬಂಧವಾಗಿತ್ತು.

ಆಗಸ್ಟ್ 22ರಂದು ಹೆಚ್ಚಿನ ರಾಜಕೀಯ ಪಕ್ಷಗಳ ಮುಖಂಡರ(ಮಹಬೂಬ ಮುಫ್ತಿಯವರನ್ನು ಬಿಟ್ಟು) ಬಿಡುಗಡೆಯ ನಂತರ ಗುಪ್ಕರ್ ಗುಂಪಿನ ಎರಡನೇ ಸಭೆ ನಡೆಯಿತು. ನ್ಯಾಶನಲ್ ಕಾನ್ಫರೆನ್ಸ್, ಪಿಡಿಪಿ, ಪೀಪಲ್ಸ್ ಕಾನ್ಫರೆನ್ಸ್, ಅವಾಮಿ ನ್ಯಾಶನಲ್ ಕಾನ್ಫರೆನ್ಸ್, ಕಾಂಗ್ರೆಸ್ ಮತ್ತು ಸಿಪಿಐ(ಎಂ) ಮುಖಂಡರು ಹಿಂದಿನ ಗುಪ್ಕರ್ ಹೇಳಿಕೆಗೆ ತಾವು ಈಗಲೂ ಬದ್ಧರಾಗಿದ್ದೇವೆ ಎಂದು ಪ್ರಕಟಿಸಿದರು. "ಸಂವಿಧಾನದ ಅಡಿಯಲ್ಲಿ ಖಾತ್ರಿಪಡಿಸಿರುವ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮತ್ತೆ ಸ್ಥಾಪಿಸಲು ಮತ್ತು ಸಮಯ-ಸಮಯಕ್ಕೆ ನೀಡಿದ ವಚನಗಳಿಗೆ ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ" ಎಂದು ಅವರು ಹೇಳಿದರು. "ರಾಜ್ಯದ ಯಾವುದೇ ರೀತಿಯ ವಿಭಜನೆ ನಮಗೆ ಒಪ್ಪಿಗೆಯಿಲ್ಲ" ಎಂದು ಅವರು ಘೋಷಿಸಿದರು.

ಗುಪ್ಕರ್ ಘೋಷಣೆ-2 ವಿಶೇಷ ಸ್ಥಾನಮಾನ, ರಾಜ್ಯದ ದರ್ಜೆ ಮತ್ತು ಜನತೆಯ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಬದ್ಧರಾದ ಶಕ್ತಿಗಳು ಮತ್ತೆ ಒಂದುಗೂಡುವತ್ತ ಮೊದಲ ಹೆಜ್ಜೆಯಾಗಿತ್ತು.

ಪಿಡಿಪಿ ಅಧ್ಯಕ್ಷರಾದ ಮೆಹಬೂಬ ಮುಫ್ತಿಯವರ ಬಿಡುಗಡೆಯ ನಂತರ ಅಕ್ಟೋಬರ್ 15ರಂದು ಮತ್ತೊಂದು ಸಭೆ ನಡೆಯಿತು. ಅಲ್ಲಿ 'ಗುಪ್ಕರ್ ಘೋಷಣೆಗೆ ಜನತಾ ಮೈತ್ರಿ'ಯನ್ನು ರಚಿಸಲು ನಿರ್ಧರಿಸಲಾಯಿತು. ನ್ಯಾಶನಲ್ ಕಾನ್ಫರೆನ್ಸ್, ಪಿಡಿಪಿ, ಪೀಪಲ್ಸ್ ಕಾನ್ಫರೆನ್ಸ್, ಅವಾಮಿ ನ್ಯಾಶನಲ್ ಕಾನ್ಫರೆನ್ಸ್, ಕಾಂಗ್ರೆಸ್ ಮತ್ತು ಸಿಪಿಐ(ಎಂ) ಈ ಆರು ಪಕ್ಷಗಳ ಮೈತ್ರಿ ಇದು. ಸಿಪಿಐ ಕೂಡ ಮೈತ್ರಿಕೂಟವನ್ನು ಸೇರಿತು, ಇತರ ಕೆಲವು ಪಕ್ಷಗಳು ತಮ್ಮ ಬೆಂಬಲ ಪ್ರಕಟಿಸಿದರು. ಏಳು ಪಕ್ಷಗಳ ಗುಂಪು ಅಕ್ಟೋಬರ್ 24ರಂದು ಮತ್ತೆ ಸಭೆ ಸೇರಿ ಮೈತ್ರಿಕೂಟದ ಪದಾಧಿಕಾರಿಗಳನ್ನು ಪ್ರಕಟಿಸಿದೆ.

ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಆಗಸ್ಟ್ 22ರ ಸಭೆಯಲ್ಲಿ ಭಾಗವಹಿಸಿದ್ದರು, ನಂತರದ ಎರಡು ಸಭೆಗಳಲ್ಲಿ ಭಾಗವಹಿಸಲಿಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಮುಖಂಡತ್ವ ಕಲಮು 370ನ್ನು ರದ್ದು ಮಾಡಿದ ರೀತಿಯ ಬಗ್ಗೆಯಷ್ಟೇ ತನ್ನ ವಿರೋಧ ಎಂಬ ನಿಲುವು ತಳೆದು, ಅದನ್ನು ಮತ್ತೆ ಸ್ಥಾಪಿಸಬೇಕೆಂದು ತಾನೇನೂ ಕೇಳುತ್ತಿಲ್ಲ ಎಂದು ಪರೋಕ್ಷವಾಗಿ ಸೂಚಿಸಿದೆ. ಇದೇ ನಿಲುವನ್ನು, ಇತ್ತೀಚೆಗೆ ಬಿಹಾರ ಚುನಾವಣಾ ಪ್ರಚಾರದ ವೇಳೆಯಲ್ಲಿ ಮೋದಿ ಕಲಮು 370ನ್ನು ಮರುಸ್ಥಾಪಿಸಲು ಪ್ರಯತ್ನಿಸುತ್ತಿರುವವರನ್ನು ಟೀಕಿಸಿದಾಗ, ಕಾಂಗ್ರೆಸ್ ವಕ್ತಾರರು ಪುನರುಚ್ಚರಿಸಿರುವುದು ಜಮ್ಮು ಮತ್ತು ಕಾಶ್ಮೀರ ಕಾಂಗ್ರೆಸಿನ ಚಂಚಲ ನಿಲುವಿಗೆ ಕಾರಣವಾಗಿರಬಹುದು.


ಜಮ್ಮು ಮತ್ತು ಕಾಶ್ಮೀರವು ಭಾರತೀಯ ಒಕ್ಕೂಟದೊಂದಿಗೆ ಸೇರುವ ಬಗ್ಗೆ ಶೇಖ್ ಅಬ್ದುಲ್ಲ ಮತ್ತು ನ್ಯಾಶನಲ್ ಕಾನ್ಫರೆನ್ಸ್ ಮುಖಂಡರೊಂದಿಗೆ ಮಾತುಕತೆ ನಡೆಸಿದವರು ಜವಹರಲಾಲ್ ನೆಹರೂ ಮತ್ತು ಸರ್ದಾರ್ ಪಟೇಲ್, ಇದರ ಫಲಿತಾಂಶವೇ ಸಂವಿಧಾನದ ಕಲಮು 370ರ ರೂಪೀಕರಣ ಎಂಬುದನ್ನು ಕಾಂಗ್ರೆಸ್ ಮರೆಯಬಾರದು. ನೆಹರೂರವರು ಜಮ್ಮು ಮತ್ತು ಕಾಶ್ಮೀರ ವಿಶೇಷ ಸ್ಥಾನಮಾನದ ಆಧಾರದಲ್ಲಿ ಭಾರತೀಯ ಒಕ್ಕೂಟದಲ್ಲಿ ಸುಲಲಿತವಾಗಿ ಸೇರಿಕೊಂಡದ್ದು ಭಾರತೀಯ ಪ್ರಭುತ್ವದ ಜಾತ್ಯತೀತ ಸ್ವರೂಪವನ್ನು ಸಾಬೀತು ಮಾಡಿದೆ ಎಂದು ಕಂಡರು. ಕಾಂಗ್ರೆಸ್ ಪಕ್ಷ ಯಾವುದೇ ರೀತಿಯಲ್ಲಿ ಈ ಜಾತ್ಯತಿತ ಪರಂಪೆಯನ್ನು ಬಿಟ್ಟುಕೊಡಬಾರದು.

ಎರಡು ಪ್ರಧಾನ ಪ್ರತಿಸ್ಪರ್ಧಿ ಪಕ್ಷಗಳನ್ನು –ನ್ಯಾಶನಲ್ ಕಾನ್ಫರೆನ್ಸ್ ಮತ್ತು ಪಿಡಿಪಿ ಯನ್ನು – ಒಟ್ಟಿಗೆ ತಂದ ಈ ಹೊಸ ರಾಜಕೀಯ ಮೈತ್ರಿಕೂಟ ಸರಿಯಾದ ಸಮಯದಲ್ಲೇ ಬಂದಿದೆ. ಏಕೆಂದರೆ ಜನತೆಯ ಅಸ್ಮಿತೆ ಮತ್ತು ಹಕ್ಕುಗಳ ಮೇಲೆ ನಡೆಯುತ್ತಿರುವ ಸತತ ದಾಳಿಗಳನ್ನು ಎದುರಿಸಲು ಜಮ್ಮು ಮತ್ತು ಕಾಶ್ಮೀರದ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳ ಐಕ್ಯತೆ ಅಗತ್ಯವಾಗಿದೆ.

ಕೇಂದ್ರ ಸರಕಾರ ಈಗಷ್ಟೇ ಈ ಕೇಂದ್ರಾಡಳಿತ ಪ್ರದೇಶದ ಭೂಮಿ ಕಾನೂನುಗಳಲ್ಲಿ ಒಂದು ಬದಲಾವಣೆಯನ್ನು ಪ್ರಕಟಿಸಿದೆ. ಈ ಮೂಲಕ ಹೊರಗಿನ ಜನಗಳು ಇಲ್ಲಿ ಭೂಮಿಯನ್ನು ಖರೀದಿಸಲು ಸಾಧ್ಯವಾಗುತ್ತದೆ. ಈ ಮೊದಲು ರಾಜ್ಯದ ಶಾಶ್ವತ ನಿವಾಸಿಗಳು ಮಾತ್ರವೇ ಹೀಗೆ ಮಾಡಲು ಸಾಧ್ಯವಿತ್ತು. ಈ ಕ್ರಮ, ಈ ಹಿಂದೆ ತಂದ ಕಾಯಂ ನಿವಾಸದ ಕಾಯ್ದೆಗಿಂತಲೂ ಮುಂದೆ ಹೋಗಿದೆ. ಇದು ಜಮ್ಮು ಮತ್ತು ಕಾಶ್ಮೀರದ ಭೂಮಿ ಮತ್ತು ಸಂಪನ್ಮೂಲಗಳನ್ನು ದುರುಪಯೋಗ ಪಡಿಸಿಕೊಳ್ಳಲು ಒಮತ್ತು ಈ ಪ್ರದೇಶದ ಜನಸಂಖ್ಯಾ ಸಂಯೋಜನೆಯನ್ನು ಬದಲಿಸುವ ಪ್ರಕ್ರಿಯೆಗೆ ಒಂದು ಬಹಿರಂಗ ಆಹ್ವಾನವಾಗಿದೆ.

ಜನತಾ ಮೈತ್ರಿಕೂಟದ ಮುಂದೆ ಸಂವಿಧಾನದ ಅಡಿಯಲ್ಲಿ ಸ್ವಾಯತ್ತತೆಯನ್ನು ಮತ್ತೆ ನೆಲೆಗೊಳಿಸುವ ಹೋರಾಟದಲ್ಲಿ ಬಹಳ ಕಠಿಣ ಕಾರ್ಯಭಾರ ಇದೆ. ಹಾಗೆ ಮಾಡಲು, ಅದು ಮೊದಲಿಗೆ ಪ್ರಜಾಪ್ರಭುತ್ವ ರಾಜಕೀಯವನ್ನು ಮತ್ತು ಭಾರತದ ಎಲ್ಲ ನಾಗರಿಕರಿಗೂ ಸಿಗಬೇಕಾದ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕಾಗಿದೆ. ಜನತಾ ಮೈತ್ರಿಕೂಟ, ತಾನು ಕಾಶ್ಮೀರ ಕಣಿವೆ-ಕೇಂದ್ರಿತ ಕೂಟ ಎಂಬ ಭಾವನೆಯನ್ನು ಹೋಗಲಾಡಿಸಬೇಕು, ಅದಕ್ಕಾಗಿ ಜಮ್ಮು ಮತ್ತು ಲಡಾಖಿನ ಪ್ರಜಾಪ್ರಭುತ್ವ ಶಕ್ತಿಗಳು ಮತ್ತು ಸಾರ್ವಜನಿಕ ಅಭಿಪ್ರಾಯವನ್ನು ರಾಜಕೀಯವಾಗಿ ತಲುಪಲು ಪ್ರಯತ್ನಿಸಬೇಕು, ಮತ್ತು ಬಿಜೆಪಿ-ಆರೆಸ್ಸೆಸ್ ಕೂಟದ ವಿಭಜನಕಾರೀ ರಾಜಕೀಯವನ್ನು ಎದುರಿಸಬಲ್ಲ ಒಂದು ಸರ್ವಸಾಮಾನ್ಯ ವೇದಿಕೆಯನ್ನು ಕಟ್ಟಬೇಕು.

ಈ ಜನತಾ ಮೈತ್ರಿಕೂಟ ದೇಶದ ಎಲ್ಲ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳ ಬೆಂಬಲವನ್ನು ಪಡೆಯಬೇಕು. ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ಮತ್ತು ರಾಜ್ಯದ ದರ್ಜೆಯ ಮೇಲೆ ಪ್ರಹಾರ ಒಕ್ಕೂಟ ತತ್ವದ ಮೇಲೆ ಈಗ ನಡೆಯುತ್ತಿರುವ ಇನ್ನೂ ವ್ಯಾಪಕವಾದ ದಾಳಿಗಳ ಮುನ್ಸೂಚನೆಯಾಗಿತ್ತು. ಬಿಜೆಪಿ ಸರಕಾರದ ಕೇಂದ್ರೀಕರಣದ ಧಾವಂತ ಎಲ್ಲ ಒಕ್ಕೂಟ ವಿಧಿ-ವಿಧಾನಗಳನ್ನು ಮತ್ತು ರಾಜ್ಯಗಳ ಹಕ್ಕುಗಳನ್ನು ತುಳಿದು ಹಾಕುತ್ತಿದೆ. ಇತ್ತೀಚಿನ ಕೃಷಿ ಮಸೂದೆಗಳಲ್ಲಿ ಕಂಡಂತೆ, ಸಂವಿಧಾನದ ರಾಜ್ಯ ಪಟ್ಟಿಯಲ್ಲಿ ಇರುವ ವಿಷಯಗಳಲ್ಲಿ ಕೇಂದ್ರ ಸರಕಾರದ ಅತಿಕ್ರಮಣ, ಜಿಎಸ್‌ಟಿ ಪರಿಹಾರದ ಬಾಕಿಗಳನ್ನು ತೆರುವ ಕೇಂದ್ರ ಸರಕಾರದ ಬದ್ಧತೆಯನ್ನು ಈಡೇರಿಸಲು ನಿರಾಕರಣೆ ಮತ್ತು ರಾಜ್ಯ ಆಡಳಿತದ ವಿಷಯಗಳಲ್ಲಿ ಹಸ್ತಕ್ಷೇಪ ನಡೆಸಲು ರಾಜ್ಯಪಾಲರುಗಳ ಬಳಕೆ ಒಕ್ಕೂಟ ತತ್ವ-ವಿರೋಧಿ ಧಾವಂತದ ಲಕ್ಷಣಗಳು. ಜನತಾ ಮೈತ್ರಿಕೂಟದ ಪ್ರಯತ್ನಗಳನ್ನು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಮತ್ತು ಒಕ್ಕೂಟತತ್ವವನ್ನು ರಕ್ಷಿಸುವ ಒಟ್ಟಾರೆ ಹೋರಾಟದ ಭಾಗವಾಗಿ ಕಾಣಬೇಕು.



ಬಿಜೆಪಿ ತನ್ನ ಎಂದಿನ "ರಾಷ್ಟ್ರ-ವಿರೋಧಿ', 'ಪಾಕಿಸ್ತಾನದ ಆದೇಶಪಾಲನೆ' ಇತ್ಯಾದಿ ಚರ್ವಿತಚರ್ವಣದೊಂದಿಗೆ ಜನತಾ ಮೈತ್ರಿಕೂಟದ ಮೇಲೆ ದಾಳಿ ಮಾಡಿದೆ. ಆದರೆ ಮೋದಿ ಸರಕಾರಕ್ಕೆ ನೆಲದ ವಾಸ್ತವತೆಗಳ ಅರಿವು ಇರಬೇಕು. ಒಂದು ವರ್ಷಕ್ಕೂ ಹೆಚ್ಚಿನ ಪಾಶವೀ ದಮನದಿಂದಾಗಿ ಜನಗಳಲ್ಲಿನ ಪರಕೀಯ ಭಾವ, ವಿಶೇಷವಾಗಿ ಕಣಿವೆ ಪ್ರದೇಶದಲ್ಲಿ ಹಿಂದೆಂದೂ ಕಾಣದ ಮಟ್ಟವನ್ನು ತಲುಪಿದೆ. ಕೇಂದ್ರ ಸರಕಾರ ಇಡೀ ರಾಜ್ಯದಲ್ಲಿನ ಎಲ್ಲ ಸಂಬಂಧಪಟ್ಟವರೊಂದಿಗೆ ಒಂದು ಸಂವಾದವನ್ನು ಆರಂಭಿಸಲು ಸಿದ್ಧವಾಗದಿದ್ದರೆ, ಒಂದು ಪ್ರಜಾಸತ್ತಾತ್ಮಕವಾದ ಮುಂದಿನ ದಾರಿ ಸಾಧ್ಯವಿಲ್ಲ. ಮೋದಿ ಸರಕಾರ ಮತ್ತು ಬಿಜೆಪಿ ಎಷ್ಟೇ ಕಟ್ಟಾ ಭದ್ರತಾ ಮತ್ತು ಕಾನೂನು-ವ್ಯವಸ್ಥೆಯ ನಿಲುವನ್ನು ತಳೆದರೂ, ಜಮ್ಮು ಮತ್ತು ಕಾಶ್ಮೀರದ ಸಮಸ್ಯೆಯನ್ನು ರಾಜಕೀಯವಾಗಿಯೇ ನಿರ್ವಹಿಸಬೇಕೇ ಹೊರತು ಕಾನೂನು-ವ್ಯವಸ್ಥೆ ಅಥವ ಭದ್ರತೆಯ ಸಮಸ್ಯೆಯಾಗಿ ಅಲ್ಲ ಎಂಬ ಮೂಲ ಸಂಗತಿಯನ್ನು ಅವು ಉಪೇಕ್ಷಿಸಲು ಸಾಧ್ಯವಿಲ್ಲ. ವಾಜಪೇಯಿ ಸರಕಾರದ ಕಾಲದಲ್ಲಿ ಸಂವಾದಕ್ಕೆ ರಾಜಕೀಯ ಪ್ರಯತ್ನಗಳನ್ನು ಮಾಡಲಾಯಿತು, ಅದರಲ್ಲಿ ಲಾಹೋರಿಗೆ ಪ್ರಧಾನಿಗಳ ಬಸ್ ಪ್ರವಾಸವೂ ಸೇರಿತ್ತು. ಆಗಿನ ಗೃಹ ಮತ್ರಿ ಎಲ್.ಕೆ.ಅಡ್ವಾಣಿಯವರ ಅಡಿಯಲ್ಲಿ,, ಹಿಜ್ಬುಲ್ ಮುಜಾಹಿದೀನ್ ಪ್ರತಿನಿಧಿಗಳೂ ಸೇರಿದಂತೆ ಉಗ್ರಗಾಮಿ ಗುಂಪುಗಳೊಂದಿಗೂ ಮಾತುಕತೆಗಳನ್ನು ನಡೆಸಲಾಯಿತು.

ಸದಾ ಭಾರತದ ಬೆಂಬಲಕ್ಕೆ ನಿಂತಿರುವ ಕಾಶ್ಮೀರದಲ್ಲಿನ ಮುಖ್ಯಧಾರೆಯ ರಾಜಕೀಯ ಶಕ್ತಿಗಳೊಂದಿಗೆ ಮುಖಾಮುಖಿಯಾಗುವ ಆಶಯ ಮೋದಿ ಸರಕಾರಕ್ಕೆ ಇಲ್ಲವಾದರೆ, ಈ ಬಗೆಹರಿಸಲಾಗದಂತೆ ಕಾಣುವ ಸಮಸ್ಯೆಯ ಇತ್ಯರ್ಥದಲ್ಲಿ ಪ್ರಗತಿ ಸಾಧ್ಯವಿಲ್ಲ. ಇದು ದೇಶದ ಒಕ್ಕೂಟ, ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ರಾಜಕೀಯ ವ್ಯವಸ್ಥೆಯ ಮೇಲೆ ಒಂದು ಜೀವನ್ಮರಣ ಪರಿಣಾಮವನ್ನು ಬೀರುತ್ತಲೇ ಇರುತ್ತದೆ. ■

ಭಾರತದ ವಿಜ್ಞಾನದಲ್ಲಿ ಮರೆಯಾದ ಎಡಪಂಥೀಯರ ಕತೆ

ಸುಭಾಷ್ ಚಂದ್ರ ಬೋಸ್ ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾದಾಗ ಅವರ ಮೇಲೆ ಪ್ರಭಾವ ಬೀರಿದ ಮೇಘನಾದ ಸಾಹ ಅವರು ಯೋಜನಾ ಸಮಿತಿಯ ರಚನೆ ಮಾಡಲು ಕಾರಣರಾದರು. ಬೋಸ್ ಅವರು ನೆಹರು ಅವರ ನೇತ್ರತ್ವದಲ್ಲಿ ಯೋಜನಾ ಸಮಿತಿಯನ್ನು ರಚಿಸಿ ಭಾರತದ ಔದ್ಯಮಿಕರಣ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಂಸ್ಥೆಗಳನ್ನು ಕಟ್ಟುವ ಯೋಜನೆಯ ಸ್ಥೂಲನಕ್ಷೆ ತಯಾರಿಸಿದರು...ಸ್ವಾತಂತ್ರ್ಯಾನಂತರ ' ಎಡಪಂಥೀಯರ ಕೊಡುಗೆ ವೈಜ್ಞಾನಿಕ ಮೂಲ ಸೌಕರ್ಯಗಳ ಸ್ಥಾಪನೆಗೆ ಮತ್ತು ವೈಜ್ಞಾನಿಕ ಹಾಗೂ ಸಂಶೋಧನಾ ಸಂಸ್ಥೆಗಳ ವಿಸ್ತರಣೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಸ್ವಾವಲಂಬನೆಗಾಗಿಯೂ ಅವರು ಅವಿರತ ಹೋರಾಡಿದರು. ಆಳಕ್ಕೆ ಬೇರು ಬಿಟ್ಟಿದ್ದ ಬಹುರಾಷ್ಟ್ರೀಯ ಕಂಪನಿಗಳ ಜೊತೆಗೆ ದೃಢ ಹೋರಾಟವಿಲ್ಲದೆ ಇದು ಸಾಧ್ಯವಾಗಲಿಲ್ಲ. ಹಲವು ವಿಜ್ಞಾನಿಗಳು ಮತ್ತು ರಾಜಕಾರಣಿಗಳ ವಸಾಹತುಶಾಹಿ–ಗ್ರಸ್ತ ಮನೋಭಾವದ ವಿರುದ್ಧವೂ ಈ ಹೋರಾಟ ನಡೆಸಬೇಕಾಯಿತು. ಅದು ಇಂದಿಗೂ ಮುಂದುವರೆದಿದೆ.

– ಪ್ರಬೀರ್ ಪುರಕಾಯಸ್ಥ ಅನು: ಜಿ.ಎಸ್. ಮಣಿ



ಎಡದಿಂದ ಬಲಕ್ಕೆ: ಮೇಘನಾದ ಸಾಹಾ, ಸಾಹಿಬ್ ಸಿಂಘ್ ಸೂಕಿ, ಸೈಯ್ಯದ್ ಹುಸ್ಸೇನ್ ಜಾಹೀರ್

ಭಾರತದ ವಿಜ್ಞಾನದ ಕತೆ ದೇಶದ ಔದ್ಯಮಿಕರಣ ಸಾಧಿಸಲು ನೆಹರು ಮತ್ತು ವೈಜ್ಞಾನಿಕ ಸಂಸ್ಥೆಗಳನ್ನು ಕಟ್ಟುವುದರ ಸುತ್ತ ಕಟ್ಟಲಾಗಿದೆ. ಆದರೆ ಈ ಕಥೆ ಅಪೂರ್ಣ. ಯಾಕೆಂದರೆ ಅದು ಈ ಪ್ರಕ್ರಿಯೆಯಲ್ಲಿ ಭಾರತೀಯ ಎಡಪಂಥೀಯ ವಿಜ್ಞಾನಿಗಳಾದ ಮೇಘನಾದ ಸಾಹಾ, ಸಾಹಿಬ್ ಸಿಂಘ್ ಸೂಕಿ, ಸೈಯ್ಯದ್ ಹುಸ್ಸೇನ್ ಜಾಹೀರ್ ಮತ್ತು ಅಂತರ್ರಾಷ್ಟ್ರೀಯವಾದಿಗಳಾದ ಜೆ.ಡಿ.ಬರ್ನಾಲ್ ಮತ್ತು ಜೆ.ಬಿ.ಎಸ್.ಹಾಲ್ಡೆನ್ ಅವರ ಪಾತ್ರವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ವಿಜ್ಞಾನಿಗಳು ಈ ಕತೆಯ ಕೇಂದ್ರದಲ್ಲಿದ್ದವರು.

ಆಧುನಿಕ ರಾಷ್ಟ್ರವೊಂದನ್ನು, ವೈಜ್ಞಾನಿಕ ದೃಷ್ಟಿಕೋನ (ನೆಹರು ಹೇಳಿದ ವೈಜ್ಞಾನಿಕ ಮನೋಭಾವ), ಯೋಜಿತ ವಿಜ್ಞಾನ, ತಂತ್ರಜ್ಞಾನ ಮತ್ತು ಆರ್ಥಿಕತೆ ಹಾಗೂ ಪ್ರಭುತ್ವದ ಗಮನಾರ್ಹ ಪಾತ್ರ ಇವೆಲ್ಲವುಗಳನ್ನು ಸಂಯೋಜಿಸುವ ಮೂಲಕ ಮಾತ್ರ ಕಟ್ಟಬಹುದೆಂಬ ವಿಜ್ಞಾನದ ದರ್ಶನದ ಮೇಲೆ ಭಾರತದ ವಿಜ್ಞಾನ ಆಧಾರಿತವಾಗಿತ್ತು. ಇವತ್ತಿಗೆ ಇದು ಸಾಮಾನ್ಯ ಎನಿಸಬಹುದಾದರೂ ವಿಜ್ಞಾನವನ್ನು ಯೋಜಿತ ತಳಹದಿಯ ಮೇಲೆ ಬೆಳೆಸಬಹುದೆಂಬುದೇ ಮಹಾ ಅಪಚಾರವೆಂದು ಎರಡನೇ ಮಹಾಯುದ್ಧದ ಮೊದಲು ವೈಜ್ಞಾನಿಕ ಸಮುದಾಯಗಳಲ್ಲಿ ಪ್ರಚಲಿತವಾಗಿತ್ತು. ಅಂದು ಸ್ಥಾಪಿತ ವೈಜ್ಞಾನಿಕ ಸಮುದಾಯಗಳ ದೃಷ್ಟಿಯಲ್ಲಿ 1917 ರ ಕ್ರಾಂತಿ ಮತ್ತು ನಂತರದಲ್ಲಿ ಔದ್ಯಮೀಕರಣ ಮತ್ತು ಆಧುನಿಕ ರಾಷ್ಟ್ರ ನಿರ್ಮಾಣದಲ್ಲಿ ಯೋಜಿತವಾಗಿ ಬಳಸಿಕೊಂಡಿದ್ದು ಅಪದ್ಧವಾಗಿತ್ತು. ಲಂಡನ್ನಿನಲ್ಲಿ 1931 ರಲ್ಲಿ ನಡೆದ ಅಂತರ್ರಾಷ್ಟ್ರೀಯ ವಿಜ್ಞಾನ ಇತಿಹಾಸದ ಸಮ್ಮೇಳನದಲ್ಲಿ ಬುಖಾರಿನ್ ನೇತ್ರತ್ವದ ನಿಯೋಗ, ವಿಜ್ಞಾನದ ಭಿನ್ನವಾದ ದರ್ಶನ ಎಂತಹದ್ದಿರಬಹುದೆಂಬುದರ ಒಂದು ನೋಟವನ್ನು ನೀಡಿತ್ತು. ಜೆ ಡಿ ಬರ್ನಾಲ್, ಜೆ ಬಿ ಎಸ್ ಹಾಲ್ಡೇನ್, ಜೋಸೆಫ್ ನೀಢಾಮ್ ಮತ್ತು ಲಾನ್ಸೆಲೋಟ್ ಹಾಗ್ಬೆನ್ ಅವರನ್ನೊಳಗೊಂಡ ಅತ್ಯಂತ ಪ್ರಖರ ಯುವ ಬ್ರಿಟಿಷ್ ವಿಜ್ಞಾನಿಗಳ ತಂಡ ಸೋವಿಯತ್ ಪ್ರಬಂಧಗಳಿಂದ ಪ್ರಭಾವಿತವಾಯಿತು. ಇದು ಬರ್ನಾಲರ ಪ್ರಖ್ಯಾತ ಕೃತಿ "ವಿಜ್ಞಾನದ ಸಾಮಾಜಿಕ ಕಾರ್ಯ" ಕ್ಕೆ ಸ್ಫೂರ್ತಿಯಾಯಿತು. 'ವಿಜ್ಞಾನ ಮತ್ತು ಸಮಾಜ' ಚಳುವಳಿ ರೂಪುಗೊಳ್ಳಲು ಮತ್ತು ವಿಜ್ಞಾನಿಗಳನ್ನು ವೈಜ್ಞಾನಿಕ ಕೆಲಸಗಾರರನ್ನಾಗಿ ಸಂಘಟಿಸಲು ಸ್ಫೂರ್ತಿಯಾಯಿತು.

ಎರಡನೇ ಮಹಾಯುದ್ಧದ ನಂತರ ವಿಜ್ಞಾನದ ಚಳುವಳಿ, ವೈಜ್ಞಾನಿಕ ಕೆಲಸಗಾರರ ಜಾಗತಿಕ ಒಕ್ಕೂಟದ ಹುಟ್ಟಿಗೆ ಕಾರಣವಾಗಿ, 'ಜಾಗತಿಕ ಶಾಂತಿ ಮಂಡಳಿ' ಎಂಬ ಜಾಗತಿಕ ಶಾಂತಿ ಚಳಿವಳಿಯ ಬಹುಮುಖ್ಯ ಅಂಗವಾಯಿತು. ನಂತರದಲ್ಲಿ ಬರ್ನಾಲ್ ಮತ್ತು ಹಾಲ್ಡೆನ್ ಭಾರತದಲ್ಲಿನ ವಿಜ್ಞಾನದ ಜೊತೆಗೆ ನಿಕಟ ಸಂಬಂಧವಿಟ್ಟುಕೊಂಡರೆ, ನೀಢಾಮ್ ಅವರು ಚೀನಾದ ವಿಜ್ಞಾನದ ಜೊತೆಗೆ ಸಂಬಂಧವಿಟ್ಟುಕೊಂಡು ಚೀನಾದ ವಿಜ್ಞಾನ ಮತ್ತು ನಾಗರಿಕತೆಯ ಇತಿಹಾಸ ದ ಬಗೆಗಿನ ಹದಿನಾರು ಸಂಪುಟಗಳ ಬೃಹತ್ ಕೃತಿ ರಚಿಸುವಲ್ಲಿ ಚೀನಾದ ಸಹೋದ್ಯೋಗಿಗಳೊಡನೆ ಪಾಲ್ಗೊಂಡರು. ಈ ಮೂವರೂ ಗ್ರೇಟ್ ಬ್ರಿಟನ್ನಿನ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿದ್ದರು.

ಕಲ್ಕತ್ತದಲ್ಲಿ 1930ರ ದಶಕದಲ್ಲಿ ಇದೇ ರೀತಿ ವಿಜ್ಞಾನ, ಯೋಜನೆ ಮತ್ತು ಸೋವಿಯೆಟ್ ಯೂನಿಯನ್ನಿನ ಸಮಾಜವಾದಿ ಪ್ರಯೋಗಗಳಿಂದ ಮೇಘನಾದ ಸಾಹ ಅವರೊಂದಿಗಿನ ಒಂದು ಯುವ ವಿಜ್ಞಾನಿಗಳ ಗುಂಪು ಪ್ರಭಾವಿತವಾಗಿತ್ತು. ಸುಭಾಷ್ ಚಂದ್ರ ಬೋಸ್ ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾದಾಗ ಅವರ ಮೇಲೆ ಪ್ರಭಾವ ಬೀರಿದ ಮೇಘನಾದ ಸಾಹ ಅವರು ಯೋಜನಾ ಸಮಿತಿಯ ರಚನೆ ಮಾಡಲು ಕಾರಣರಾದರು. ಬೋಸ್ ಅವರು ನೆಹರು ಅವರ ನೇತ್ರತ್ವದಲ್ಲಿ ಯೋಜನಾ ಸಮಿತಿಯನ್ನು ರಚಿಸಿ ಭಾರತದ ಔದ್ಯಮಿಕರಣ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಂಸ್ಥೆಗಳನ್ನು ಕಟ್ಟುವ ಯೋಜನೆಯ ಸ್ಥೂಲನಕ್ಷೆ ತಯಾರಿಸಿದರು. ಸ್ವಾತಂತ್ರ್ಯದ ನಂತರ ಈ ಸಮಿತಿ ಯೋಜನಾ ಆಯೋಗವಾಗಿ ರೂಪುಗೊಂಡು ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮೂಲಸೌಕರ್ಯಗಳ ರಚನೆಗೆ ಮತ್ತು ವಿಸ್ತರಣೆಗೆ ತಳಹದಿಯಾಯಿತು. ಸಿ.ಎಸ್.ಐ.ಆರ್ ಪ್ರಯೋಗಾಲಯಗಳ ವಿಸ್ತರಣೆ, ಅಣುಶಕ್ತಿ, ಬಾಹ್ಯಾಕಾಶ, ಮತ್ತು ಐ.ಐ.ಟಿ ಗಳನ್ನೊಳಗೊಂಡ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಯೋಜನೆ ಮತ್ತು ಸ್ವಾವಲಂಬಿ ಭಾರತ ಕಟ್ಟುವುದರಲ್ಲಿ ವಿಜ್ಞಾನದ ಪ್ರಾಮುಖ್ಯತೆ ಮೆರೆವ ದರ್ಶನದ ಫಲಗಳು.

ಭಾರತ ಔದ್ಯಮಮೀಕರಣಗೊಳ್ಳಲು ಸರ್ಕಾರ, ಆರ್ಥಿಕದಲ್ಲಿ ಮಾತ್ರವಲ್ಲ ಈ ಪಥಕ್ಕೆ ಬೆಂಬಲ ನೀಡಬಲ್ಲ ವೈಜ್ಞಾನಿಕ ಸಂಸ್ಥೆಗಳ ಕಟ್ಟುವುದರಲ್ಲೂ ಸಕ್ರಿಯ ಪಾತ್ರ ವಹಿಸುವ ಅವಶ್ಯಕತೆಯ ಅರಿವು ನೆಹರು ಅವರಿಗೆ ಇತ್ತು. ವೈಜ್ಞಾನಿಕ ಸಂಸ್ಥೆಗಳ ಕಟ್ಟುವ ಹುಡುಕಾಟದಲ್ಲಿ ನೆಹರು ಅವರು ಬರ್ನಾಲರನ್ನು ಹಲವು ಬಾರಿ ಭಾರತಕ್ಕೆ ಕರೆಸಿಕೊಂಡರು. ತಳಿ ಶಾಸ್ತ್ರಜ್ಞರಾದಂತಹ ಜೆ.ಬಿ.ಎಸ್ ಹಾಲ್ಡೆನ್ ಅವರು ಭಾರತದಲ್ಲಿ ನೆಲೆಸಿದರಲ್ಲದೆ ಭಾರತದ ಪೌರತ್ವ ಪಡೆದರು. ಭಾರತದ ಅಧಿಕಾರಶಾಹಿಯ ಜೊತೆಗೆ ಏಗಲಾರದೆ ಹಾಲ್ಡೆನ್ ಅವರು ನೆಹರು ಅವರಿಗೆ ಕೇಂದ್ರೀಯ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಸಂಸ್ಥೆಯನ್ನು (ಸಿ.ಎಸ್.ಐ.ಆರ್) 'ಸ್ವತಂತ್ರ ಸಂಶೋಧನೆಯ ನಿಗ್ರಹ ಕೇಂದ್ರ' ಎಂದು ಪುನರ್ನಾಮಕರಣ ಮಾಡಿ ಎಂದು ಹೇಳಿದರಂತೆ. (ಇರ್ಫಾನ್ ಹಬೀಬ್ ಅವರ 'ಸ್ವಾತಂತ್ರ್ಯ ಹೋರಾಟದ ಪರಂಪರೆ: ನೆಹರು ಅವರ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ನೋಟಗಳು', ಸೋಷಿಯಲ್ ಸೈಂಟಿಸ್ಟ್, ಮಾರ್ಚ್–ಏಪ್ರಿಲ್, 2016).

ಭಾರತೀಯ ವಿಜ್ಞಾನಿಗಳಾದ ಮೇಘನಾದ ಸಾಹ, ಹುಸ್ಸೈನ್ ಜಾಹೀರ್, ಸಾಹಿಬ್ ಸಿಂಗ್ ಸೋಖೆ ಭಾರತದ ವಿಜ್ಞಾನದ ಮೂಲಪುರುಷರಷ್ಟೇ ಆಗಿರಲಿಲ್ಲ ಜೊತೆಗೆ ಅವರು ಭಾರತೀಯ ಕಮ್ಯುನಿಸ್ಟ್ ಪಕ್ಷದ ಆಪ್ತ ವಲಯದಲ್ಲೂ ಇದ್ದರು. ಅಮೇರಿಕಾದ ವಿದ್ವಾಂಸರ ಗೌರವಾನ್ವಿತರ ಪಟ್ಟಿಯಲ್ಲಿ ಇವರು 'ಸಹಯಾನಿ'ಗಳು (ಕಮ್ಯುನಿಸ್ಟ್ ಒಲವು ಇರುವವರು) ಎಂದು ಗುರುತಿಸಲ್ಪಟ್ಟಿದ್ದರು. ಈ ಬಿರುದು ಕುಖ್ಯಾತ (ಚಾರ್ಲಿ ಚಾಪ್ಲಿನ್ ಸೇರಿದಂತೆ ಹಲವಾರು ಪ್ರಖ್ಯಾತ ಕಲಾವಿದರು ಮತ್ತು ವಿಜ್ಞಾನಿಗಳನ್ನು 'ಸಹಯಾನಿ;ಗಳೆಂದು ಬೇಟೆಯಾಡಿದ) ಮೇಖಾರ್ತಿ ಯುಗದ್ದು ಎಂದೇ ಜನಜನಿತವಾಗಿದೆ. ಮೇಘನಾದ ಸಾಹ ಅವರು ಹೋಮಿ ಜೆ ಭಾಭಾ ಅವರ ಜೊತೆ ಸೇರಿ ದೇಶದಲ್ಲಿ ಅಣು ಭೌತಶಾಸ್ತ್ರದ ಬುನಾದಿಯನ್ನು ಹಾಕಿದರು. ಹುಸೇನ್ ಜಾಹೀರ್ ಅವರು ಸಿ.ಎಸ್.ಐ.ಆರ್ ನ ಮಹಾ ನಿರ್ದೇಶಕರಾಗಿ ಅದನ್ನು ಗಮನಾರ್ಹವಾಗಿ ವಿಸ್ತರಿಸಿದರು.

ಸೋಖೆ ಅವರನ್ನು 1932 ರಲ್ಲಿ ಹಾಫ್ಕಿನ್ ಇನ್ಸ್ಟಿಟ್ಯೂಟ್ ನ ಮೊದಲ ಭಾರತೀಯ ನಿರ್ದೇಶಕರನ್ನಾಗಿ ನೇಮಿಸಲಾಯಿತು. ಅವರು ಭಾರತೀಯ ಬ್ರಿಟಿಷ್ ಸೇನೆಯಲ್ಲಿ ಕರ್ನಲ್ ಆಗಿದ್ದರೂ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಯೋಜನಾ ಸಮಿತಿಯ ಆರೋಗ್ಯ ವಿಭಾಗದ ಮುಖ್ಯಸ್ಥರಾಗಿದ್ದರು. ಸ್ವಾತಂತ್ರ್ಯಾ ನಂತರ ಅವರು ಎರಡು ಸಾರ್ವಜನಿಕ ವಲಯದ ಉದ್ದಿಮೆಗಳಾದ ಐ.ಡಿ.ಪಿ.ಎಲ್(ಇಂಡಿಯನ್ ಡ್ರಗ್ಸ್ ಅಂಡ್ ಫಾರ್ಮಸಿಟಿಕಲ್ಸ್ ಲಿಮಿಟೆಡ್) ಮತ್ತು ಎಚ್.ಎ.ಎಲ್ (ಹಿಂದುಸ್ತಾನ್ ಆಂಟಿಬಯೊಟಿಕ್ಸ್ ಲಿಮಿಟೆಡ್) ಗಳನ್ನು ಸ್ಥಾಪಿಸಿ ಭಾರತದ ಸ್ವಾವಲಂಬನೆಯ ಪಯಣ ಪ್ರಾರಂಭಿಸಿದರು. ಮುಂದೆ ಅವರು ಜಾಗತಿಕ ಶಾಂತಿ ಮಂಡಳಿಯ ಭಾಗವಾದ ಅಖಿಲ ಭಾರತ ಶಾಂತಿ ಮಂಡಳಿಯ ಅಧ್ಯಕ್ಷರಾದರು. ತದನಂತರ ಅವರು ಜಾಗತಿಕ ವೈಜ್ಞಾನಿಕ ಕೆಲಸಗಾರರ ಫೆಡರೇಷನ್ನಿನ ಭಾಗವಾದ ಭಾರತೀಯ ವೈಜ್ಞಾನಿಕ ಕೆಲಸಗಾರರ ಅಸೋಸಿಯೇಷನ್ ನ ಅಧ್ಯಕ್ಷರಾದರು. ಜವಹರಲಾಲ್ ನೆಹರು ಅವರು ಈ ಅಸೋಸಿಯೇಷನ್ನಿನ ಮೊದಲ ಅಧ್ಯಕ್ಷರಾಗಿದ್ದರು.

ಜೋಸೆಫ್ ನೀಢಾಮ್ ಅವರು ಅಂತರ್ರಾಷ್ಟ್ರೀಯ ವೈಜ್ಞಾನಿಕ ಕಮಿಷನ್ನಿನ ಅಧ್ಯಕ್ಷತೆ ವಹಿಸಿ, ಕೊರಿಯ ಮತ್ತು ಚೀನಗಳ ವಿರುದ್ಧ ಬ್ಯಾಕ್ಟೀರಿಯಾ ಯುದ್ಧ ಮಾಡಿದ ಅಮೆರಿಕದ ಮೇಲೆ ಇದ್ದ ಆಪಾದನೆಯ ವಿಚಾರಣೆ ಮಾಡಿ ಅಮೇರಿಕವನ್ನು ತಪ್ಪಿತಸ್ಥ ದೇಶವೆಂದು 1952 ರಲ್ಲಿ ತೀರ್ಪು ನೀಡಿದರು. ಸೋಖೆ ಅವರು ಈ ಕಮಿಷನ್ನಿನ ಭಾಗವಾಗಲು ಒಪ್ಪಿದ್ದರು. ಆದರೆ ಭಾರತ ಸರ್ಕಾರ ಕಮಿಷನ್ನಿನ ಭಾಗವಾಗಬೇಡಿ ಎಂದು ಹೇಳಿದ್ದರಿಂದ ಅವರು ಅದರ ಭಾಗವಾಗಲಿಲ್ಲ. ಅಮೇರಿಕ ಬಹು ಕಾಲ ತಾನು ಕೊರಿಯಾ ಮತ್ತು ಚೀನಾ ಗಳ ವಿರುದ್ಧ ಜೈವಿಕ ಅಸ್ತ್ರ ಬಳಸಿದ್ದನ್ನು ಅಲ್ಲಗಳೆಯುತ್ತಲೇ ಇತ್ತು. ಅಮೆರಿಕಾದ ಇತ್ತೀಚಿಗೆ ಬಿಡುಗಡೆಗೊಂಡ ರಹಸ್ಯ ದಾಖಲೆಗಳು ನೀಢಾಮ್ ಕಮಿಷನ್ನಿನ ವರದಿಯ ಘಟನೆಗಳು ನಿಜವೆಂದು ಹೇಳುತ್ತವೆ. ಇವೆಲ್ಲಕ್ಕಿಂತ ಬರ್ಬರವೆನಿಸುವುದು ಜಪಾನಿನ 731 ನೇ ಘಟಕ ಚೀನಿ ಮತ್ತು ಮೈತ್ರಿ ಕೈದಿಗಳ ವಿರುದ್ಧ ಜೈವಿಕ ಯುದ್ಧ ಪ್ರಯೋಗಗಳನ್ನು ಮಾಡಿ 3000 ಜನರನ್ನು ಕೊಂದಿದ್ದು. ಈ ಘಟಕದ ಸದಸ್ಯರಿಗೆ ಅಮೇರಿಕ ಯುದ್ಧ ಅಪರಾಧಗಳಿಂದ ಪೂರ್ತಿ ರಕ್ಷಣೆ ನೀಡಿತ್ತು. ಅದಕ್ಕೆ ಪ್ರತಿಯಾಗಿ ಅವರ ಎಲ್ಲ ಸಂಶೋಧನೆಗಳನ್ನು ಅಮೆರಿಕಾಕ್ಕೆ ಕೊಡಬೇಕೆಂಬ ಷರತ್ತು ವಿಧಿಸಲಾಗಿತ್ತು. ಅವರ ಈ "ಸಂಶೋಧನೆ" ಫೋರ್ಟ್ ಡೆಟ್ರಿಕ್ ನ ಕುಖ್ಯಾತ ಜೈವಿಕ ಅಸ್ತ್ರ ಸಂಶೋಧನಾ ಕೇಂದ್ರದ ಸ್ಥಾಪನೆಗೆ ಒತ್ತು ನೀಡಿತು.

ಸ್ವಾತಂತ್ರ್ಯಾನಂತರ ಎಡಪಂಥೀಯರ ಕೊಡುಗೆ ವೈಜ್ಞಾನಿಕ ಮೂಲ ಸೌಕರ್ಯಗಳ ಸ್ಥಾಪನೆಗೆ ಮತ್ತು ವೈಜ್ಞಾನಿಕ ಹಾಗೂ ಸಂಶೋಧನಾ ಸಂಸ್ಥೆಗಳ ವಿಸ್ತರಣೆಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಸ್ವಾವಲಂಬನೆಗಾಗಿಯೂ ಅವರು ಅವಿರತ ಹೋರಾಡಿದರು. ಆಳಕ್ಕೆ ಬೇರು ಬಿಟ್ಟಿದ್ದ ಬಹುರಾಷ್ಟ್ರೀಯ ಕಂಪನಿಗಳ ಜೊತೆಗೆ ದೃಢ ಹೋರಾಟವಿಲ್ಲದೆ ಇದು ಸಾಧ್ಯವಾಗಲಿಲ್ಲ. ಹಲವು ವಿಜ್ಞಾನಿಗಳು ಮತ್ತು ರಾಜಕಾರಣಿಗಳ ವಸಾಹತುಶಾಹಿ–ಗ್ರಸ್ತ ಮನೋಭಾವದ ವಿರುದ್ಧವೂ ಈ ಹೋರಾಟ ನಡೆಸಬೇಕಾಯಿತು. ಅದು ಇಂದಿಗೂ ಮುಂದುವರೆದಿದೆ.

ಒಂದೇ ಲೇಖನದಲ್ಲಿ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಎಡಪಂಥೀಯರು ನೀಡಿದ ಕೋಡುಗಯೆಲ್ಲವನ್ನೂ ವಿವರಿಸುವುದು ಸಾಧ್ಯವಿಲ್ಲ. ನಾನು ಒಂದೇ ಕ್ಷೇತ್ರವನ್ನು ಎತ್ತಿಕೊಳ್ಳುತ್ತೇನೆ – ಅದು ಔಷದಿಗಳ (ಫಾರ್ಮಸುಟಿಕಲ್ಸ್) ಉದ್ದಿಮೆ. ಕಥೆಯ ಕೆಲವು ಭಾಗಗಳನ್ನು ಅದು ಹೇಳುತ್ತದೆ. ಮೊದಲನೆಯದು ವೈಜ್ಞಾನಿಕ ಸಂಸ್ಥೆಗಳನ್ನು ಕಟ್ಟುವಲ್ಲಿ ಎಡಪಂಥೀಯರ ಪಾತ್ರ ಮತ್ತು ಈ ಸಂಸ್ಥೆಗಳನ್ನು ನಮ್ಮ ಸ್ವಾವಲಂಬನೆಯ ಪ್ರಯತ್ನದ ಭಾಗವಾಗಿಸಿ ವೈಜ್ಞಾನಿಕ ಮೇಲ್ನೋಟವನ್ನು ಬೆಳೆಸುವ ಬಹುಮುಖ್ಯ ಕಾರ್ಯ. ಎರಡನೆಯದು ವಿಜ್ಞಾನದ ಮುನ್ನಡೆಗೆ ಅವರು ನೀಡಿದ ಕೊಡುಗೆ. ಈ ಕಥೆಯನ್ನು ಇತ್ತೀಚೆಗೆ ಲೆಫ್ಟ್ ವರ್ಡ್ ಪ್ರಕಾಶನ ಹೊರತಂದಿರುವ ಅಮಿತ್ ಸೇನ್ ಗುಪ್ತ ಅವರ ಮತ್ತು ಅವರ ಗೌರವಾರ್ಥ ಪ್ರಬಂಧಗಳಿರುವ "ಆರೋಗ್ಯ ಕ್ಷೇತ್ರದಲ್ಲಿ ರಾಜಕೀಯ ಪಯಣಗಳು" ಎಂಬ ಪುಸ್ತಕದಲ್ಲಿನ ಪ್ರಬಂಧಗಳಲ್ಲಿ ವಿವರವಾಗಿ ನೀಡಲಾಗಿದೆ.

ಬ್ರಿಟಿಷರು ಭಾರತವನ್ನು ಬಿಟ್ಟು ಹೋದಾಗ ಔಷದಗಳ ಉದ್ದಿಮೆ ಬ್ರಿಟಿಷ್ ಬಂಡವಾಳದ ಕೈಯಲ್ಲೇ ಇತ್ತು. ಔಷದಗಳ ಸಕ್ರಿಯ ಪದಾರ್ಥಗಳನ್ನು ಯುನೈಟೆಡ್ ಕಿಂಗ್ಡಂ ನಲ್ಲಿ ಉತ್ಪಾದಿಸಿ ಇಲ್ಲಿ ಅದನ್ನು ಪ್ಯಾಕೇಜ್ ಮಾಡಿ ಮಾರಲಾಗುತ್ತಿತ್ತು. ಭಾರತದಲ್ಲಿ ಸಣ್ಣ ಔಷಧಿ ಕಂಪನಿಗಳಿದ್ದವು. ಅವುಗಳಲ್ಲಿ ವೈಜ್ಞಾನಿಕ ಸಂಶೋಧನೆಯ ಬಲವಿರಲಿಲ್ಲ. ಅಲ್ಲದೆ ಬಹುರಾಷ್ಟ್ರೀಯ ಕಂಪನಿಗಳ ಜೊತೆ ಸೆಣಸುವ ಮತ್ತು ಬ್ರಿಟಿಷರ ಕಾಲದ ಭಾರತೀಯ ಪೇಟೆಂಟ್ ಕಾಯಿದೆಯ ವಿರುದ್ಧ ಹೋರಾಡುವ ತಾಕತ್ತು ಇರಲಿಲ್ಲ.

ಇದು ಎರಡು ಮಜಲಿನ ಹೋರಾಟವಾಗಿತ್ತು. ಭಾರತೀಯ ಪೇಟೆಂಟ್ ಕಾಯಿದೆಗಳನ್ನು ಭಾರತೀಯರ ಹಿತಾಸಕ್ತಿಗಳಿಗೆ ತಕ್ಕಂತೆ ಬದಲಿಸುವುದು. ಮತ್ತು ವೈಜ್ಞಾನಿಕ ಮೂಲ ಸೌಕರ್ಯಗಳನ್ನು ಹಾಗೂ ಅದರ ಅರಿವನ್ನು ಸ್ಥಳೀಯ ಔಷಧಿ ಉದ್ದಿಮೆಯಲ್ಲಿ ಬೆಳೆಸುವುದು. ಪೇಟೆಂಟ್ ಕಾನೂನಿನ ಕಥೆ ಮತ್ತು ಅದರಲ್ಲಿ ಎಡಪಂಥೀಯರ ಪಾತ್ರದ ಕುರಿತು ಈ ಹಿಂದೆ ಈ ಪತ್ರಿಕೆಯಲ್ಲಿ ಬರೆಯಲಾಗಿದೆ. ಇಲ್ಲಿ ವೈಜ್ಞಾನಿಕ ಕ್ಷೇತ್ರಕ್ಕೆ ಅವರ ಕೊಡುಗೆಯನ್ನು ನೋಡಬಹುದು.

ಸಾಹಿಬ್ ಸಿಂಗ್ ಸೋಖೆ ಅವರು ಹಾಫ್ಕಿನ ಸಂಸ್ಥೆಯ ಮೊದಲ ಭಾರತೀಯ ನಿರ್ದೇಶಕರಾಗಿ ಗೃಹ ಕೈಗಾರಿಕೆಯಂತಿದ್ದ ಅದನ್ನು ಲಸಿಕೆ ಉತ್ಪಾದಿಸುವ ಅತ್ಯಂತ ಆಧುನಿಕ ಬೃಹತ್ ಸೌಲಭ್ಯವನ್ನಾಗಿ ಪರಿವರ್ತಿಸಿದರು. ಈ ಮೂಲ ತಂಡವೇ ಮುಂದೆ ಸೋವಿಯೆಟ್

ಪುಟ 15 ಕ್ಕೆ

Janashakthi Media

ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆ ಲೋಕಾರ್ಪಣೆ ವೆಬಿನಾರ್ ಸರಣಿ ವರದಿ–1

ಮುಖ್ಯವಾಹಿನಿಯಲ್ಲ, ಕಾರ್ಪೊರೇಟ್ ಮಾಧ್ಯಮ; ಪರ್ಯಾಯವಲ್ಲ, ಜನತಾ ಮಾಧ್ಯಮ: ಸಾಯಿನಾಥ್

ವಸಂತರಾಜ ಎನ್ .ಕೆ.



ಮುಖ್ಯವಾಹಿನಿ ಮಾಧ್ಯಮ' ಮತ್ತು 'ಪರ್ಯಾಯ ಮಾಧ್ಯಮ' ಎಂಬ ಪರಿಕಲ್ಪನೆಯನ್ನೇ ನಾನು ಪ್ರಶ್ನಿಸುತ್ತೇನೆ. ನಾವು ಮುಖ್ಯವಾಹಿನಿ ಮಾಧ್ಯಮ ಎಂದು ಕರೆಯುತ್ತಿರುವುದು ನಿಜವಾಗಿಯೂ, ಕಾರ್ಪೊರೇಟುಗಳ ಮತ್ತು ಕಾರ್ಪೊರೇಟುಗಳಿಗಾಗಿ ಇರುವ ಕಾರ್ಪೊರೇಟ್ ಮಾಧ್ಯಮವಾಗಿದೆ. 'ಮುಖ್ಯವಾಹಿನಿ'ಯ ಬಹುಸಂಖ್ಯಾತ ರೈತರು, ಕೂಲಿಕಾರರು, ಗ್ರಾಮೀಣ ಜನತೆ, ನಗರದ ಕಾರ್ಮಿಕರ ಕುರಿತು ಈ ಮಾಧ್ಯಮ ಬರೆಯುವುದೇ ಇಲ್ಲ. ಉದಾಹರಣೆಗೆ, 'ರಾಷ್ಟ್ರೀಯ ದೈನಿಕ'(ಇದು ಇನ್ನೊಂದು ಹುಸಿ ಕಲ್ಪನೆ)ಗಳು ಕೊರೊನಾ–ಪೂರ್ವ 5 ವರ್ಷ ಅವಧಿಯಲ್ಲಿ ಮುಖಪುಟದಲ್ಲಿ ಶೇ.69 ಭಾರತೀಯರು ವಾಸಿಸುವ ಗ್ರಾಮೀಣ ಪ್ರದೇಶದ ಜನರ (ರೈತರು, ಕೂಲಿಕಾರರು) ಹಾಗೂ ಕೃಷಿ, ಕಸುಬುಗಳು ಮತ್ತಿತರ ಗ್ರಾಮೀಣ ವಿದ್ಯಮಾನಗಳಿಗೆ ಕೊಟ್ಟ ಜಾಗ ಕೇವಲ 0.67%. ಹೀಗಿರುವಾಗ ಈ ಕಾರ್ಪೊರೇಟ್ ಮಾಧ್ಯಮವನ್ನು ಮುಖ್ಯವಾಹಿನಿ ಮಾಧ್ಯಮ ಎಂದು ಕರೆಯುವುದು ಹೇಗೆ? – ಹೀಗೆಂದು ಪ್ರಶ್ನಿಸಿದವರು ಖ್ಯಾತ ಪತ್ರಕರ್ತ ಮತ್ತು 'ಪರಿ' (PARI - People's Archives of Rural India) ಸ್ಥಾಪಕ ಸಂಪಾದಕ ಪಿ ಸಾಯಿನಾಥ್. ಅವರು ಅಕ್ಟೋಬರ್ 17 ರಂದು ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆ ಲೋಕಾರ್ಪಣೆಯ ಭಾಗವಾಗಿ ಏರ್ಪಡಿಸಿದ್ದ ವೆಬಿನಾರ್ ಸರಣಿಯ 'ಪರ್ಯಾಯ ಮಾಧ್ಯಮ ಏಕೆ? ಹೇಗೆ? : ಕೊರೊನಾ ಕಾಲದಲ್ಲಿ, ಮೊದಲು ಮತ್ತು ನಂತರ' ಎಂಬ ವೆಬಿನಾರಿನಲ್ಲಿ ದಿಕ್ಸೂಚಿ ಭಾಷಣ ಮಾಡುತ್ತಿದ್ದರು. ಮುಂದುವರೆದು ಅವರು ಮುಖ್ಯವಾಹಿನಿ ಜನರ ಕುರಿತು ಬರೆಯುವ, ಬರೆಯಲು ಬಯಸುವ ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆ ಯಂತಹ ಮಾಧ್ಯಮಗಳು ತಮ್ಮನ್ನು 'ಜನತಾ ಮಾಧ್ಯಮ' (People's Media) ಎಂದು ಭಾವಿಸಬೇಕು ಎಂದರು.

ಕೊರೊನಾ ಕಾಲದಲ್ಲಿ ಈ ಕಾರ್ಪೊರೇಟ್ ಮಾಧ್ಯಮಗಳ ವರ್ತನೆ ಇದನ್ನು ಇನ್ನಷ್ಟು ಸ್ಪಷ್ಟವಾಗಿ ತೋರಿಸಿದೆ. ಲಾಕ್ ಡೌನ್ ಕಾಲದಲ್ಲಿ ತಮ್ಮ ಹುಟ್ಟುಗ್ರಾಮಗಳತ್ತ ವಲಸೆ ಕಾರ್ಮಿಕರ ಚಾರಿತ್ರಿಕ ಗಾತ್ರದ (ದೇಶವಿಭಜನೆಯ ನಂತರದ ವಲಸೆಯನ್ನು ನೆನಪಿಸುವ) ವಲಸೆಯ ಸಂದರ್ಭದಲ್ಲಿ ಇವರು ಕೇಳಿದ ಪ್ರಶ್ನೆ "ಇವರು ಯಾಕೆ ಹೀಗೆ ಹೋಗುತ್ತಿದ್ದಾರೆ" ಅಂತ. ಅದೂ ನಗರಗಳ ಕುಲೀನರು, ಮಧ್ಯಮ ವರ್ಗದವರು ಬಯಸುವ (ಮನೆಕೆಲಸ, ಹಾಲು/ಪೇಪರ್, ಆಫೀಸ್ ಬಾಯ್ ಇತ್ಯಾದಿ) ಸೇವೆಗಳಲ್ಲಿ ಭಾರೀ ವ್ಯತ್ಯಯಗಳಾದ್ದರಿಂದ. ಆದರೆ ಅವರು ನಿಜವಾಗಿಯೂ ಕೇಳಬೇಕಾಗಿದ್ದ ಮತ್ತು ಉತ್ತರ ಕಂಡುಕೊಳ್ಳಬೇಕಾಗಿದ್ದ ಪ್ರಶ್ನೆ "ಇವರು ಯಾಕೆ ಯಾವಾಗ ಇಷ್ಟು ಸಂಖ್ಯೆಯಲ್ಲಿ ನಗರಗಳಿಗೆ ವಲಸೆ ಬಂದಿದ್ದಾರೆ' ಕಳೆದ ದಶಕದಲ್ಲಿ 1990ರ ಜಾಗತೀಕರಣದ ನೀತಿಗಳ ಪರಿಣಾಮವಾಗಿ ಗ್ರಾಮೀಣ ಮತ್ತು ಕೃಷಿಯ ಸಂಕಷ್ಟಗಳಿಂದ ಸಂತ್ರಸ್ತರಾಗಿ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ದೇಶವಿಭಜನೆಯ ನಂತರದ (ಅಥವಾ ಅದನ್ನೂ ಮೀರಿಸುವ) ಗಾತ್ರದ ವಲಸೆ ನಡೆದಿದ್ದು, ಅದು ಅವುಗಳ ಪ್ರಧಾನ ವರದಿಯಾಗಿರಬೇಕಿತ್ತು. ಆಗ ಇವೆರಡೂ ಪ್ರಶ್ನೆಗಳನ್ನೂ ಕೇಳುವ ಅಗತ್ಯವಿರುತ್ತಿರಲಿಲ್ಲ. ಎಂದು ಸಾಯಿನಾಥ್ ಕಾರ್ಪೊರೇಟ್ ಮಾಧ್ಯಮಗಳನ್ನು ತರಾಟೆಗೆ ತೆಗೆದುಕೊಂಡರು.

ಮುಖ್ಯವಾಹಿನಿ ಜನತೆಯ ಕುರಿತು ಬರೆಯುವ 'ಜನತಾ ಮಾಧ್ಯಮ'ಗಳು, ಅವುಗಳ ಗಾತ್ರ, ತಲುಪುವಿಕೆ ಎಷ್ಟೇ ಇರಲಿ, ತಮ್ಮನ್ನು ತಾವು ಮುಖ್ಯವಾಹಿನಿ ಮಾಧ್ಯಮಗಳೆಂದು ಪರಿಗಣಿಸಬೇಕು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಗಾಂಧಿ, ಅಂಬೇಡ್ಕರ್ ನಡೆಸಿದ ಪತ್ರಿಕೆಗಳು ಎಷ್ಟೇ ಸಣ್ಣವಾಗಿದ್ದರೂ ಜನತೆಯ ಮಾಧ್ಯಮಗಳಾಗಿ ಅಗಾಧ ರಾಜಕೀಯ ಪರಿಣಾಮ ಬೀರಿದವು. ಕಳೆದ 2–3 ದಶಕ ಬಿಟ್ಟರೆ ಸುಮಾರು 2 ಶತಕಗಳ ಭಾರತೀಯ ಮಾಧ್ಯಮದ ಇತಿಹಾಸದ ಉದ್ದಕ್ಕೂ ಇದು ಸಾಧ್ಯವಾಗಿತ್ತು. ಆದ್ದರಿಂದ ಕಾರ್ಪೊರೇಟ್ ಮಾಧ್ಯಮಗಳಿಂದ ಪ್ರತ್ಯೇಕವಾದ 'ಜನತಾ ಮಾಧ್ಯಮ'ಕ್ಕೆ ತಕ್ಕುದಾದ ಶೈಲಿ, ಉದ್ದೇಶ, ಕಂಟೆಂಟ್, ಸಂರಚನೆ, ಸಂಪನ್ಮೂಲ ಹೊಂಚುವಿಕೆ, ನೋಡುಗ/ಓದುಗ ಸಮೂಹವನ್ನು ಕಟ್ಟಿ ಬೆಳೆಸುವ ಬಗೆ ಇತ್ಯಾದಿಗಳನ್ನು ರೂಪಿಸಿಕೊಳ್ಳಬೇಕು.

****

ಇದು ಸಾಲದೆಂಬಂತೆ ಕೊರೊನಾ ಕಾಲದಲ್ಲಾದರೂ ಇವರ ಕುರಿತು ಬರೆಯಬಹುದಾಗಿದ್ದ ಸಾವಿರಾರು ಪತ್ರಕರ್ತರನ್ನು ವಜಾ ಮಾಡಲಾಗಿದೆ. ಹೆಚ್ಚಿನ ಮಾಧ್ಯಮಗಳಲ್ಲಿ (ಕೊರೊನಾ ಸಂಬಂಧಿತ ಹಣಕಾಸಿನ ಸಮಸ್ಯೆ ಕೆಲವೇ ಪ್ರಸಂಗಗಳಲ್ಲಿ ನಿಜವಾದ ಕಾರಣವಾಗಿತ್ತು) ಈ ಕೊರೊನಾ 'ಸದವಕಾಶ'ವನ್ನು ಬಳಸಿ ಖರ್ಚು ಕಡಿತ ಮಾಡಿ ಲಾಭ ಹೆಚ್ಚಿಸಿಕೊಳ್ಳುವ ಮುಖ್ಯ ಉದ್ದೇಶದಿಂದ ಇದನ್ನು ಮಾಡಲಾಗಿದೆ. ಕೊರೊನಾ ಕಾಲದಲ್ಲಿ ಜನರ ಸಂಕಷ್ಟಗಳು, ಸರಕಾರಗಳ ವೈಫಲ್ಯಗಳ ಕುರಿತು ವರದಿಗಳ ಮೂಲಕ ತಮ್ಮ ಕರ್ತವ್ಯ ಪಾಲಿಸಿದ ಪತ್ರಕರ್ತರ ಮೇಲೆ ಸರಕಾರ 75ಕ್ಕೂ ಹೆಚ್ಚು ಎಫ್.ಐ.ಆರ್ ಗಳನ್ನು ಕೊರೊನಾ ಅವಧಿಯಲ್ಲಿ ದಾಖಲಿಸುವ ಮೂಲಕ ದಮನಚಕ್ರ ನಡೆಸಿತು. ಇದನ್ನು ಮಾಧ್ಯಮ ಧಣಿಗಳು ಮೌನವಾಗಿ ನೋಡುತ್ತಿದ್ದರು ಅಥವಾ ವಾಸ್ತವ ಮರೆಮಾಚುವ ಈ ಕೆಲಸದಲ್ಲಿ ಶಾಮೀಲಾದರು. ಕರ್ತವ್ಯನಿರತ ಪತ್ರಕರ್ತರ ಮೇಲೆ ಯು.ಎ.ಪಿ.ಎ, ಎನ್.ಎಸ್.ಎ, ದೇಶದ್ರೋಹ ಮುಂತಾದ ಕರಾಳ ಕಾನೂನುಗಳು ಅಲ್ಲದೆ ಸಾಂಕ್ರಾಮಿಕ ಕಾಯಿದೆ ಸೇರಿದಂತೆ 55 ಕಾನೂನುಗಳ ದುರ್ಬಳಕೆ ಮಾಡಲಾಗಿದೆ, ಎಂದು ಪಿ ಸಾಯಿನಾಥ್ ಕಿಡಿ ಕಾರಿದರು.

ಇದಕ್ಕೆ ಕಾರಣ, ಮಾಧ್ಯಮ ಇಂದು ಮಾಹಿತಿ ಸಂವಹನದ ಸಂರಚನೆಗೆ ಸೀಮಿತವಾಗಿಲ್ಲ. ಮಾಧ್ಯಮ ಮತ್ತು ಮನೋರಂಜನೆ ಸುಮಾರು 2 ಲಕ್ಷ ಕೋಟಿ ರೂಪಾಯಿಗಳ ಒಂದು ಅಗಾಧ ದೈತ್ಯ ಗಾತ್ರದ ಉದ್ಯಮ. ಕಾರ್ಪೊರೇಟ್ ಮಾಧ್ಯಮ ಕಂಪನಿಗಳು ಇನ್ನೂ ದೊಡ್ಡ ದೈತ್ಯ ಗಾತ್ರದ ಉದ್ಯಮ ಸಮೂಹಗಳ ಭಾಗ. ಇವುಗಳ ಉದ್ದೇಶ ತನ್ನ ಧಣಿಗಳ ಆರ್ಥಿಕ ಹಿತಾಸಕ್ತಿ ಕಾಯುವುದು ಬಿಟ್ಟರೆ ಬೇರೇನೂ ಅಲ್ಲ. 2014ರ ನಂತರ ಸಾಮಾಜಿಕ–ಧಾರ್ಮಿಕ ಮೂಲಭೂತವಾದಿಗಳ ಮತ್ತು ಆರ್ಥಿಕ–ಮಾರುಕಟ್ಟೆ ಮೂಲಭೂತವಾದಿಗಳ ಕೂಟ ರಾಜಕೀಯ ಅಧಿಕಾರ ಪಡೆದಿದೆ. ಇದು ಕಾರ್ಪೊರೇಟ್ ಹಿತಾಸಕ್ತಿಗೆ ಹಿಂದೆಂದೂ ಕಾಣದಷ್ಟು ಬದ್ಧವಾಗಿದೆ. ಆದ್ದರಿಂದ ಕಾರ್ಪೊರೇಟ್ ಮಾಧ್ಯಮ ಕಂಪನಿಗಳು ಸರಕಾರದ ಜತೆ ಪೂರ್ಣವಾಗಿ ಶಾಮೀಲಾಗಿವೆ. ದೇಶದ ಅತಿ ದೊಡ್ಡ ಏಕಸ್ವಾಮ್ಯ ಮಾಧ್ಯಮ ಕಾರ್ಪೊರೇಟ್ ಕಂಪನಿ, ದೇಶದ ಅತಿ ದೊಡ್ಡ ಕಾರ್ಪೊರೇಟ್ ಕಂಪನಿ ಸಮೂಹದ ಭಾಗ. ದೇಶದ ನಂ.1 ಶ್ರೀಮಂತ ಮುಕೇಶ್ ಅಂಬಾನಿ ದೇಶದ ಅತಿ ದೊಡ್ಡ ಕಾರ್ಪೊರೇಟ್ ಮಾಧ್ಯಮದ ಧಣಿ ಕೂಡಾ. ಆದ್ದರಿಂದ ಮುಖ್ಯವಾಹಿನಿ ಜನತೆಯ ಕುರಿತು ಈ ಮಾಧ್ಯಮಗಳಲ್ಲಿ ಹೆಚ್ಚನ್ನು ನಿರೀಕ್ಷಿಸುವುದು ಹುಂಬತನವಾಗುತ್ತದೆ ಎಂದು ಸಾಯಿನಾಥ್ ಅಭಿಪ್ರಾಯಪಟ್ಟರು.

'ಸಾಮಾಜಿಕ ಮಾಧ್ಯಮ ಎಂಬುದಿಲ್ಲ, ಅವೂ ಕಾರ್ಪೊರೇಟ್ ಮಾಧ್ಯಮಗಳೇ'

ಅದೇ ರೀತಿ ಗೂಗಲ್/ಯೂಟ್ಯೂಬ್, ಫೇಸ್ ಬುಕ್/ವಾಟ್ಸಪ್ ಇತ್ಯಾದಿ ಇಂಟರ್ನೆಟ್ ಆಧಾರಿತ ವೇದಿಕೆಗಳು ಸಾಮಾಜಿಕ ಮಾಧ್ಯಮಗಳು ಎಂದು ಭಾವಿಸುವುದು ಮತ್ತು ಅದು ಜನಪರ ಮಾಧ್ಯಮಗಳಿಗೆ ವೇದಿಕೆಯಾಗಬಲ್ಲುದು ಎಂದು ನಿರೀಕ್ಷಿಸುವುದು ಸಹ ಹುಂಬತನವಾಗುತ್ತದೆ. ಏಕೆಂದರೆ ಜಗತ್ತಿನ ಮೊದಲ ಹತ್ತು ದೈತ್ಯ ಕಾರ್ಪೊರೇಟುಗಳ ಪಟ್ಟಿಯಲ್ಲಿ ಬರುವ ಈ ಕಂಪನಿಗಳ (ಗೂಗಲ್ ಫೇಸ್ ಬುಕ್, ಅಮೆಜಾನ್, ಮೈಕ್ರೋಸಾಫ್ಟ್ ಇತ್ಯಾದಿ) ಆರ್ಥಿಕ ಶಕ್ತಿ ಹಲವು ದೊಡ್ಡ ಮೂರನೇ ಜಗತ್ತಿನ ದೇಶಗಳ ಆರ್ಥಿಕ ಶಕ್ತಿಗಿಂತ ದೊಡ್ಡದು. ಇವುಗಳ ಆರ್ಥಿಕ ಹಿತಾಸಕ್ತಿ ಸಹ, (ಹಿಂದೆ ಹೇಳಿದ) ದೇಶದ ರಾಜಕೀಯ ಅಧಿಕಾರ ಹಿಡಿದಿರುವ ಸಾಮಾಜಿಕ–ಧಾರ್ಮಿಕ ಮೂಲಭೂತವಾದಿಗಳ ಮತ್ತು ಆರ್ಥಿಕ–ಮಾರುಕಟ್ಟೆ ಮೂಲಭೂತವಾದಿಗಳ ಕೂಟಗಳ ಹಿತಾಸಕ್ತಿಯೊಂದಿಗೆ ಮಿಳಿತವಾಗುತ್ತವೆ. ಅವೂ ಕಾರ್ಪೊರೇಟ್ ಮಾಧ್ಯಮಗಳೇ. ಜನತೆಯ ಖಾಸಗಿ ಮಾಹಿತಿಯನ್ನು ಕದ್ದು ಮಾರುವ, ಮತ್ತು ಜನಪರ ಮಾಧ್ಯಮ ಘಟಕಗಳು ಕಟ್ಟಿ ಬೆಳೆಸಿದ ಜನಪ್ರಿಯತೆ ಮತ್ತು ಕಂಟೆಂಟನ್ನು ಪುಕ್ಕಟೆಯಲ್ಲಿ ಪಡೆದು, ಅದರ ಬಳಕೆದಾರರನ್ನು ಜಾಹೀರಾತುದಾರರಿಗೆ ಮಾರುವುದು ಅವುಗಳ ವಹಿವಾಟಿನ ಮಾದರಿ. ಆದ್ದರಿಂದ ಅವು ಜನಪರ ಮಾಧ್ಯಮ ಘಟಕಗಳ ತಲುಪುವಿಕೆ ಇತ್ಯಾದಿಗಳನ್ನು ತಮ್ಮ ಆರ್ಥಿಕ ಹಿತಾಸಕ್ತಿಗೆ ಅಧೀನವಾಗಿ ನಿಯಂತ್ರಿಸುತ್ತವೆ. ಆದ್ದರಿಂದ 'ಜನತಾ ಮಾಧ್ಯಮ'ಗಳು ಇವುಗಳ ಮೇಲೆ ಹೆಚ್ಚು ಅವಲಂಬಿಸದೆ, ಮುಕ್ತ ತಂತ್ರಾಂಶ (ಫ್ರೀ ಸಾಫ್ಟ್ ವೇರ್) ವೇದಿಕೆಗಳನ್ನು ಬಳಸಲು ಪ್ರಯತ್ನಿಸಬೇಕು ಎಂದು ಜನಪರ ಮಾಧ್ಯಮ ಕಟ್ಟುವುದರಲ್ಲಿ ತೊಡಗಿರುವವರಿಗೆ ಸಲಹೆಯಿತ್ತರು.

ಮುಖ್ಯವಾಹಿನಿ ಜನತೆಯ ಕುರಿತು ಬರೆಯುವ 'ಜನತಾ ಮಾಧ್ಯಮ'ಗಳು, ಅವುಗಳ ಗಾತ್ರ, ತಲುಪುವಿಕೆ ಎಷ್ಟೇ ಇರಲಿ, ತಮ್ಮನ್ನು ತಾವು ಮುಖ್ಯವಾಹಿನಿ ಮಾಧ್ಯಮಗಳೆಂದು ಪರಿಗಣಿಸಬೇಕು. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಗಾಂಧಿ, ಅಂಬೇಡ್ಕರ್ ನಡೆಸಿದ ಪತ್ರಿಕೆಗಳು ಎಷ್ಟೇ ಸಣ್ಣವಾಗಿದ್ದರೂ ಜನತೆಯ ಮಾಧ್ಯಮಗಳಾಗಿ ಅಗಾಧ ರಾಜಕೀಯ ಪರಿಣಾಮ ಬೀರಿದವು. ಕಳೆದ 2–3 ದಶಕ ಬಿಟ್ಟರೆ ಸುಮಾರು 2 ಶತಕಗಳ ಭಾರತೀಯ ಮಾಧ್ಯಮದ ಇತಿಹಾಸದ ಉದ್ದಕ್ಕೂ ಇದು ಸಾಧ್ಯವಾಗಿತ್ತು. ಆದ್ದರಿಂದ ಕಾರ್ಪೊರೇಟ್ ಮಾಧ್ಯಮಗಳಿಂದ ಪ್ರತ್ಯೇಕವಾದ 'ಜನತಾ ಮಾಧ್ಯಮ'ಕ್ಕೆ ತಕ್ಕುದಾದ ಶೈಲಿ, ಉದ್ದೇಶ, ಕಂಟೆಂಟ್, ಸಂರಚನೆ, ಸಂಪನ್ಮೂಲ ಹೊಂಚುವಿಕೆ, ನೋಡುಗ/ಓದುಗ ಸಮೂಹವನ್ನು ಕಟ್ಟಿ ಬೆಳೆಸುವ ಬಗೆ – ಇತ್ಯಾದಿಗಳನ್ನು ರೂಪಿಸಿಕೊಳ್ಳಬೇಕು. ಸಂಪನ್ಮೂಲ ಹೊಂಚುವಿಕೆಗೆ ಇತರ ಮೂಲಗಳಲ್ಲದೆ ಸಾರ್ವಜನಿಕರಿಂದ ದೊಡ್ಡ ಸಂಖ್ಯೆಯ ಸಣ್ಣ ದಾನಗಳು ('ಪರಿ'ಯ ಒಟ್ಟು ಆದಾಯದ 35% ಈ ರೀತಿ ಬರುತ್ತವೆ) ಮುಖ್ಯ ಮೂಲವಾಗಬೇಕು. ಜಾಹೀರಾತುಗಳಲ್ಲೂ ಕೆಲವೇ ದೊಡ್ಡ ಜಾಹೀರಾತುದಾರರ ಮೇಲೆ ಅವಲಂಬಿಸಬಾರದು.. ಜನಪರ ಪತ್ರಕರ್ತರು ಮತ್ತು ಸಂಪನ್ಮೂಲ ವ್ಯಕ್ತಿಗಳ ಸ್ವಯಂ–ಸೇವೆ ಇತ್ಯಾದಿ ಇತರ ಮೂಲಗಳನ್ನೂ ಹೊಂಚಬೇಕು. ಜನತೆಯ ಜತೆ ಸತತ ಸಾವಯವ ಸಂಪರ್ಕ ಸಾಧಿಸುವುದು 'ಜನತಾ ಮಾಧ್ಯಮ'ಗಳಿಗೆ ಅತ್ಯಂತ ಆದ್ಯತೆಯ ಕೆಲಸವಾಗಬೇಕು. ಕಾರ್ಪೊರೇಟ್ ಮಾಧ್ಯಮಗಳಲ್ಲಿ ಜನಪರ ಕಂಟೆಂಟ್ ಪ್ರಕಟಿಸುವ ಅವಕಾಶಕ್ಕಾಗಿ, ಅಲ್ಲಿ ಕೆಲಸ ಮಾಡುವ ಜನಪರ ಪತ್ರಕರ್ತರು ಸಹ ಹೋರಾಡಬೇಕು. ಕಾರ್ಪೊರೇಟ್ ಮಾಧ್ಯಮಗಳಲ್ಲಿನ ಪತ್ರಕರ್ತರು 'ಶತ್ರು ವಲಯದಲ್ಲಿರುವ ಗೆರಿಲ್ಲಾ ಹೋರಾಟಗಾರ'ರಾದರೆ, ಜನತಾ ಮಾಧ್ಯಮಗಳು 'ವಿಮೋಚಿತ ಪ್ರದೇಶ'ಗಳಂತೆ ಕೆಲಸ ಮಾಡಬೇಕು ಎಂದು ಸಾಯಿನಾಥ್ ಕಿವಿಮಾತು ಹೇಳಿದರು.

ಇದಕ್ಕಿಂತ ಮೊದಲು ವೆಬಿನಾರ್ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಡಿ ಉಮಾಪತಿ ಅವರು ಆಶಯ ಭಾಷಣ ಮಾಡಿದರು. ಪ್ರಚಂಡ ನಾಯಕರು ತಮ್ಮ ಅಭಿಪ್ರಾಯಗಳನ್ನು ಭಾರತದ ಜನತೆಯ ಮೇಲೆ ಹೊರಿಸಿ ಅದು ಅವರದೇ ಅಭಿಪ್ರಾಯ ಎಂದು ಭಾರತದ ಜನತಂತ್ರವನ್ನು ಅಪಹಾಸ್ಯ ಮಾಡುತ್ತಿರುವ ಇಂದಿನ ಸ್ಥಿತಿಯನ್ನು 'ಧ್ವನಿ ಗಾರುಡಿ' ಅಥವಾ 'ಮಾತಾಡುವ ಗೊಂಬೆ' ರೂಪಕದ ಮೂಲಕ, ಉಮಾಪತಿ ಅವರು ಪರಿಣಾಮಕಾರಿಯಾಗಿ ಪ್ರಸ್ತುತ ಪಡಿಸಿದರು. ಸರಕಾರಗಳ ಜನ–ವಿರೋಧಿ ನೀತಿಗಳಿಂದ ಮೈಗೆ ಬಿದ್ದ ಪೆಟ್ಟು ಮೆದುಳಿಗೆ ತಿಳಿಯದಿರುವ ಇಂದಿನ ಭಾರತದ ಜನತೆಯ ದಾರುಣ ಸ್ಥಿತಿಯನ್ನು ವಿವರಿಸಿದರು. ಕರುಳುಬಳ್ಳಿಯ ಸಂಬಂಧ ಹೊಂದಿರುವ ಜನತಂತ್ರ ಮತ್ತು ಮಾಧ್ಯಮಗಳಲ್ಲಿ ಒಂದಕ್ಕೆ (ಮಾಧ್ಯಮ) ವಿಷವೇರಿದಾಗ ಇನ್ನೊಂದು ವಿಷಮಯವಾಗುವುದು. ಪ್ರಶ್ನೆಯ ಮತ್ತು ಪ್ರಶ್ನಿಸುವ ಮನೋಭಾವದ ಹತ್ಯೆಯಾಗಿದೆ. ತರ್ಕದ ಬದಲು ಕುರುಡುಶ್ರದ್ಧೆಯನ್ನು ಬೆಳೆಸುವ ಫೇಕ್ ನ್ಯೂಸ್ ಮಾಧ್ಯಮ ಕ್ಷೇತ್ರದ ಕಳೆಯಾಗಿದೆ. ಕಳೆಯೇ ಬೆಳೆಯಾಗುವ ಭೀಕರ ಸ್ಥಿತಿಯಿದೆ ಎಂದು ಇಂದಿನ ಮಾಧ್ಯಮ ಪರಿಸ್ಥಿತಿಯನ್ನು ತಮ್ಮ ಆಶಯ ಮಾತುಗಳಲ್ಲಿ ಉಮಾಪತಿ ಅವರು ಬಿಚ್ಚಿಟ್ಟರು.

'ಪರ್ಯಾಯ ಮಾಧ್ಯಮ ಕಟ್ಟುವುದು ಕಲ್ಲುಮುಳ್ಳುಗಳ ಹೋರಾಟದ ಹಾದಿ'

ಆ ನಂತರ ಹಿರಿಯ ಪತ್ರಕರ್ತರಾದ ಡಾ. ಆರ್.ಪೂರ್ಣಿಮಾ, ಗೌರೀಶ್ ಅಕ್ಕಿ ಮತ್ತು ಗೌರಿ ಮೀಡಿಯಾ ಸಂಪಾದಕರಾದ ಡಾ.ಎಚ್.ವಿ, ವಾಸು ಭಾಗವಹಿಸಿದ 'ಪರ್ಯಾಯ ಮಾಧ್ಯಮ : ಏಕೆ, ಹೇಗೆ?" ಎಂಬ ವಿಷಯದ ಕುರಿತು ಸಂವಾದ ನಡೆಯಿತು. ಸಂವಾದವನ್ನು ಸಂವಹನ ಸಮಾಲೋಚಕರಾದ ಎಸ್.ಸತ್ಯಾ ಅವರು ನಡೆಸಿಕೊಟ್ಟರು. ಅಧ್ಯಕ್ಷತೆ ವಹಿಸಿದ್ದ ಡಿ ಉಮಾಪತಿ ಅವರು ಸಹ ಸಂವಾದದಲ್ಲಿ ಭಾಗವಹಿಸಿದರು.

ಪರ್ಯಾಯ ಮಾಧ್ಯಮ ಏಕೆ? – ಎಂಬುದು ದಿಕ್ಸೂಚಿ ಮತ್ತು ಆಶಯ ಮಾತುಗಳಲ್ಲಿ ಇದು 'ಕಾಲದ ಅಗತ್ಯ' ಎಂದು ಸ್ಪಷ್ಟವಾಗಿದ್ದರಿಂದ ಪರ್ಯಾಯ ಮಾಧ್ಯಮ ಹೇಗೆ ಎಂಬುದೇ ಸಂವಾದದ ಪ್ರಮುಖ ವಿಷಯವಾಯಿತು. ಸಂವಾದ 'ಸಂಬಂಧಿಸಿದ ಹಲವು ನಿರ್ದಿಷ್ಟ ಪ್ರಶ್ನೆಗಳ ಸುತ್ತ ನಡೆಯಿತು. ಪುಟ 15 ಕ್ಕೆ


ಡಿ. ಉಮಾಪತಿ

ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆ ಲೋಕಾರ್ಪಣೆ ವೆಬಿನಾರ್ ಸರಣಿ ವರದಿ–2

'ಪರ್ಯಾಯ ಮಾಧ್ಯಮ ಕಟ್ಟುವುದು ಕಲ್ಲುಮುಳ್ಳುಗಳ ಹೋರಾಟದ ಹಾದಿ': ಡಿ ಉಮಾಪತಿ

ವಸಂತರಾಜ ಎನ್.ಕೆ.

ಸಾವಿರಾರು ಕೈಗಳು ಲಕ್ಷಾಂತರ ಹತಾರಗಳುಳ್ಳ ಸರ್ವಶಕ್ತ ಪ್ರಭುತ್ವ ಮತ್ತು ದೈತ್ಯ ಕಾರ್ಪೊರೇಟ್ ಮಾಧ್ಯಮಗಳ ಅಪವಿತ್ರ ಮೈತ್ರಿಯ ವಿರುದ್ಧ ಪರ್ಯಾಯ ಮಾಧ್ಯಮ ಕಟ್ಟುವುದು ಹೂಹಾಸಿದ ಹಾದಿಯಲ್ಲ. ಕಲ್ಲುಮುಳ್ಳುಗಳ ಹೋರಾಟದ ಹಾದಿ. ಇದನ್ನು ಸಾಧಿಸಲು ಒಂದು ಕಡೆ ಜನಸಮೂಹಗಳ ಜತೆ ಸಾವಯವ ಸಂವಹನ ಸಂಪರ್ಕ ಸಾಧಿಸುತ್ತಾ ಪರ್ಯಾಯ ಮಾಧ್ಯಮಗಳ ಜಾಲವನ್ನು ಕಟ್ಟಿಕೊಳ್ಳಬೇಕು ಮತ್ತು ಇನ್ನೊಂದೆಡೆ ಕಾರ್ಪೊರೇಟ್ ಮಾಧ್ಯಮದಲ್ಲೂ ಕಿರು ಆವರಣಗಳನ್ನು ಕಟ್ಟಿಕೊಳ್ಳಬೇಕು.

ನಾವು ಮುಖ್ಯವಾಹಿನಿ ಮಾಧ್ಯಮ ಎಂದು ಕರೆಯುತ್ತಿರುವುದು ನಿಜವಾಗಿಯೂ, ಕಾರ್ಪೊರೇಟುಗಳ ಮತ್ತು ಕಾರ್ಪೊರೇಟುಗಳಿಗಾಗಿ ಇರುವ ಕಾರ್ಪೊರೇಟ್ ಮಾಧ್ಯಮವಾಗಿದೆ. – ಹೀಗೆಂದವರು ಖ್ಯಾತ ಪತ್ರಕರ್ತ ಪಿ ಸಾಯಿನಾಥ್. ಅವರು ಅಕ್ಟೋಬರ್ 17 ರಂದು ಜನಶಕ್ತಿ ಮೀಡಿಯಾ ವೆಬ್ ಪತ್ರಿಕೆ ಲೋಕಾರ್ಪಣೆಯ ಭಾಗವಾಗಿ ಏರ್ಪಡಿಸಿದ್ದ ವೆಬಿನಾರ್ ಸರಣಿಯ 'ಪರ್ಯಾಯ ಮಾಧ್ಯಮ ಏಕೆ? ಹೇಗೆ? : ಕೊರೊನಾ ಕಾಲದಲ್ಲಿ, ಮೊದಲು ಮತ್ತು ನಂತರ' ಎಂಬ ವೆಬಿನಾರಿನಲ್ಲಿ ದಿಕ್ಸೂಚಿ ಭಾಷಣ ಮಾಡುತ್ತಿದ್ದರು.


ಗೌರಿಶ್ ಅಕ್ಕಿ

ಇದಕ್ಕಿಂತ ಮೊದಲು ವೆಬಿನಾರ್ ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಡಿ ಉಮಾಪತಿ ಅವರು ಆಶಯ ಭಾಷಣ ಮಾಡಿದರು. ಪ್ರಚಂಡ ನಾಯಕರು ತಮ್ಮ ಅಭಿಪ್ರಾಯಗಳನ್ನು ಭಾರತದ ಜನತೆಯ ಮೇಲೆ ಹೊರಿಸಿ ಅದು ಅವರದೇ ಅಭಿಪ್ರಾಯ ಎಂದು ಭಾರತದ ಜನತಂತ್ರವನ್ನು ಅಪಹಾಸ್ಯ ಮಾಡುತ್ತಿರುವ ಇಂದಿನ ಸ್ಥಿತಿಯನ್ನು 'ಧ್ವನಿ ಗಾರುಡಿ' ಅಥವಾ 'ಮಾತಾಡುವ ಗೊಂಬೆ' ರೂಪಕದ ಮೂಲಕ, ಉಮಾಪತಿ ಅವರು ಪರಿಣಾಮಕಾರಿಯಾಗಿ ಪ್ರಸ್ತುತ ಪಡಿಸಿದರು. ಇಂದಿನ ಮಾಧ್ಯಮ ಪರಿಸ್ಥಿತಿಯನ್ನು ತಮ್ಮ ಆಶಯ ಮಾತುಗಳಲ್ಲಿ ಉಮಾಪತಿ ಅವರು ಬಿಚ್ಚಿಟ್ಟರು.

'ಪರ್ಯಾಯ ಮಾಧ್ಯಮ : ಏಕೆ, ಹೇಗೆ?" ಸಂವಾದ

ಆ ನಂತರ ಹಿರಿಯ ಪತ್ರಕರ್ತರಾದ ಡಾ. ಆರ್.ಪೂರ್ಣಿಮಾ, ಗೌರೀಶ್ ಅಕ್ಕಿ ಮತ್ತು ಗೌರಿ ಮೀಡಿಯಾ ಸಂಪಾದಕರಾದ ಡಾ.ಎಚ್.ವಿ, ವಾಸು ಭಾಗವಹಿಸಿದ 'ಪರ್ಯಾಯ ಮಾಧ್ಯಮ : ಏಕೆ, ಹೇಗೆ?" ಎಂಬ ವಿಷಯದ ಕುರಿತು ಸಂವಾದ ನಡೆಯಿತು. ಸಂವಾದವನ್ನು ಸಂವಹನ ಸಮಾಲೋಚಕರಾದ ಎಸ್.ಸತ್ಯಾ ಅವರು ನಡೆಸಿಕೊಟ್ಟರು. ಅಧ್ಯಕ್ಷತೆ ವಹಿಸಿದ್ದ ಡಿ ಉಮಾಪತಿ ಅವರು ಸಹ ಸಂವಾದದಲ್ಲಿ ಭಾಗವಹಿಸಿದರು.

ಪರ್ಯಾಯ ಮಾಧ್ಯಮ ಏಕೆ? – ಎಂಬುದು ದಿಕ್ಸೂಚಿ ಮತ್ತು ಆಶಯ ಮಾತುಗಳಲ್ಲಿ ಇದು 'ಕಾಲದ ಅಗತ್ಯ' ಎಂದು ಸ್ಪಷ್ಟವಾಗಿದ್ದರಿಂದ ಪರ್ಯಾಯ ಮಾಧ್ಯಮ ಹೇಗೆ ಎಂಬುದೇ ಸಂವಾದದ ಪ್ರಮುಖ ವಿಷಯವಾಯಿತು. ಸಂವಾದ 'ಸಂಬಂಧಿಸಿದ ಹಲವು ನಿರ್ದಿಷ್ಟ ಪ್ರಶ್ನೆಗಳ ಸುತ್ತ ನಡೆಯಿತು.

ಜನಪರ (ಅಥವಾ ಜನತಾ) ಮಾಧ್ಯಮಗಳು ನಿಜವಾದ ಮುಖ್ಯವಾಹಿನಿ ಸಮೂಹ ಮಾಧ್ಯಮ ಆಗಲು ನೋಡುಗ/ಓದುಗ ಪ್ರಮಾಣ (ಗಾತ್ರ) ಮುಖ್ಯವೇ? ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಹಿಂದೆ ಸಣ್ಣ 'ಪರ್ಯಾಯ ಪತ್ರಿಕೆ'ಗಳಾಗಿ ಆರಂಭವಾಗಿ ಮುಖ್ಯವಾಹಿನಿ ಪತ್ರಿಕೆಯಾಗುವ ಗಂಭೀರ ಪ್ರಯತ್ನಗಳಿಂದ ಪಾಠ ಕಲಿಯಬಹುದೇ? ಕರ್ನಾಟಕ ಮತ್ತು ದೇಶದಲ್ಲಿ ಸಾಮಾಜಿಕ ಸಾಂಸ್ಕೃತಿಕ ಚಳುವಳಿಗಳ ಮತ್ತು ರಾಜಕೀಯ ಚಳುವಳಿ–ಪಕ್ಷಗಳ ಪತ್ರಿಕೆಗಳ ಅನುಭವದಿಂದ ಏನನ್ನು ಕಲಿಯಬಹುದು? ಎಲ್ಲ ಜನಪರ ಮಾಧ್ಯಮಗಳು ಮತ್ತು ಪತ್ರಕರ್ತರು ಒಟ್ಟಾಗಿ ತಮ್ಮೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಒಂದು ಸಶಕ್ತ ದೊಡ್ಡ ಮಾಧ್ಯಮ ಕಟ್ಟುವುದು ಸಾಧ್ಯವಿಲ್ಲವೆ? ಇಂತಹ ಕ್ರೋಢೀಕರಣ ಇಂದಿನ ಗಂಭೀರ ಪರಿಸ್ಥಿತಿಯಲ್ಲಿ ಜನಚಳುವಳಿಗಳ ಐಕ್ಯತೆ ಮತ್ತು ಕ್ರೋಢೀಕರಣಕ್ಕೂ ಹಾದಿ ಮಾಡಿಕೊಡಬಹುದೆ? ಸ್ವತಃ ದೈತ್ಯ ಕಾರ್ಪೊರೇಟ್ ಗಳಾಗಿರುವ ನೆಟ್–ಆಧಾರಿತ ಡಿಜಿಟಲ್ (ಫೇಸ್ ಬುಕ್, ಯೂ ಟ್ಯೂಬ್, ವಾಟ್ಸಪ್ ಇತ್ಯಾದಿ) ವೇದಿಕೆಗಳಿಂದ ಜನಪರ ಮಾಧ್ಯಮಗಳಿಗೆ ಯಾವ ಸಾಧ್ಯತೆ, ಸವಾಲುಗಳನ್ನು ನಿರೀಕ್ಷಿಸಬಹುದು.? ಸಣ್ಣ ಗಾತ್ರದ ಜನಪರ ಮಾಧ್ಯಮಗಳು ಮುಖ್ಯವಾಹಿನಿಯ ಜನಸಮೂಹ ಆಗುವುದು ಹೇಗೆ ? ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಹೊಂಚುವುದು ಹೇಗೆ? ಈ ಹಲವು ಪ್ರಶ್ನೆಗಳ ಸುತ್ತ ಆಸಕ್ತಿಕಾರಕ ಸಂವಾದ ನಡೆಯಿತು.

ಸಮೂಹ ಮಾಧ್ಯಮ ಆಗಲು ನೋಡುಗ/ಓದುಗ ಪ್ರಮಾಣ (ಗಾತ್ರ) ಮುಖ್ಯವೇ?

ನಿಜವಾದ ಮುಖ್ಯವಾಹಿನಿ ಸಮೂಹ ಮಾಧ್ಯಮ ಆಗಲು ನೋಡುಗ/ಓದುಗ ಪ್ರಮಾಣ (ಗಾತ್ರ) ಮುಖ್ಯವಲ್ಲ. ಹಿಂದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಮತ್ತು ನಂತರವೂ ಸಾಮಾಜಿಕ–ಸಾಂಸ್ಕೃತಿಕ ರಾಜಕೀಯ ಚಳುವಳಿಗಳ ಮತ್ತು ಇತರ ಪರ್ಯಾಯ ಸಣ್ಣ ಪತ್ರಿಕೆಗಳ ಪ್ರಸಾರ ಕಡಿಮೆ ಇದ್ದರೂ ಅವು ಪರಿಣಾಮಕಾರಿಯಾಗಿದ್ದವು. ಆಗ ಸಾಕ್ಷರತೆ ಕಡಿಮೆ ಇದ್ದು ತಂತ್ರಜ್ಞಾನ ಮಟ್ಟ ಹಾಗೂ ಪ್ರಸಾರಕ್ಕೆ ಹಲವು ಅಡೆತಡೆಗಳು ಇದ್ದರೂ ಅವುಗಳ ಪರಿಣಾಮಕಾರಿತನಕ್ಕೆ ಅಡ್ಡಿಯಾಗಿರಲಿಲ್ಲ. ಈಗಲೂ ಆಗಬೇಕಿಲ್ಲ. ಇದಕ್ಕೆ ಒಂದು ಕಾರಣ ಅವು ಜನತೆಯೊಂದಿಗೆ ಹೊಂದಿದ್ದ ಸಾವಯವ ಸಂಬಂಧಗಳು. ಅದನ್ನು ಸಾಧಿಸಿದರೆ ಈಗಲೂ ಅದು ಸಾಧ್ಯ ಎಂಬ ಒಂದು ಅಭಿಪ್ರಾಯ ವ್ಯಕ್ತವಾಯಿತು. ಇಂದಿನ ಬದಲಾದ ಸಂವಹನ ವಿಜ್ಞಾನ–ತಂತ್ರಜ್ಞಾನಗಳ ವ್ಯಾಪಕ ಲಭ್ಯತೆ, ಸಾಕ್ಷರತೆ, ಕಾರ್ಪೊರೇಟ್ ಮಾಧ್ಯಮಗಳ ಅಗಾಧ ತಲುಪುವಿಕೆ ಮತ್ತು ಶಕ್ತಿ, ಆಳುವವರ ಜತೆ ಜನತೆಯ ಮೇಲೆ ನಿಯಂತ್ರಣಕ್ಕೆ ಶಾಮೀಲು – ಇತ್ಯಾದಿ ಬೆಳವಣಿಗೆಗಳಿಂದ ಜನಪರ ಮಾಧ್ಯಮಗಳ ತಲುಪುವಿಕೆಯ ಗಾತ್ರ ಮುಖ್ಯವಾಗುತ್ತದೆ. ಅವು ನಿಜವಾದ ಸಮೂಹ ಮಾಧ್ಯಮವಾಗದೆ ಕಾರ್ಪೊರೇಟ್–ಆಳುವವರ ಕೂಟಕ್ಕೆ ಪರಿಣಾಮಕಾರಿ ಸವಾಲು ಹಾಕುವುದು ಕಷ್ಟಸಾಧ್ಯ ಎಂಬ ಇನ್ನೊಂದು ಅಭಿಪ್ರಾಯವೂ ವ್ಯಕ್ತವಾಯಿತು.

ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಹಿಂದೆ ಸಣ್ಣ 'ಪರ್ಯಾಯ ಪತ್ರಿಕೆ'ಗಳಾಗಿ ಆರಂಭವಾಗಿ ಮುಖ್ಯವಾಹಿನಿ ಪತ್ರಿಕೆಯಾಗುವ ಗಂಭೀರ ಪ್ರಯತ್ನಗಳನ್ನು ನಡೆಸಿದ ಲಂಕೇಶ್ ಪತ್ರಿಕೆ, ಮುಂಗಾರು ಮುಂತಾದ ಪತ್ರಿಕೆಗಳು ಒಂದು ಹಂತದ ನಂತರ ಮುಂದಕ್ಕೆ ಹೋಗಲು ಸಾಧ್ಯವಾಗದ್ದರ ಕಾರಣಗಳ ಕುರಿತು ಇನ್ನಷ್ಟು ಕೂಲಂಕಷ ಅಧ್ಯಯನ–ವಿಶ್ಲೇಷಣೆಗಳ ಅಗತ್ಯವಿದೆ. ಅವುಗಳ ಪ್ರಯತ್ನಗಳಿಂದ, ಶಕ್ತಿ ಹಾಗೂ ನ್ಯೂನತೆಗಳಿಂದ ಇಂದಿನ ದಿನಮಾನಗಳಿಗೆ ಏನು ಕಲಿಯಬಹುದು ಎಂಬುದರ ಕುರಿತು ಹೆಚ್ಚಿನ ಚರ್ಚೆಯ ಅಗತ್ಯವಿದೆ. ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದು ದೀರ್ಘಕಾಲ ಅಸ್ತಿತ್ವದಲ್ಲಿದ್ದರೂ ಜನಸಮೂಹ ಅಥವಾ ಮುಖ್ಯವಾಹಿನಿ ಪತ್ರಿಕೆಯಾಗದೆ ಹೋದ ಚಳುವಳಿಗಳ ಪರ್ಯಾಯ ಪತ್ರಿಕೆಗಳಿಗೂ ಅನ್ವಯವಾಗುತ್ತದೆ.

ಎಲ್ಲ ಜನಪರ ಮಾಧ್ಯಮಗಳು ಮತ್ತು ಪತ್ರಕರ್ತರು ಒಟ್ಟಾಗಿ ದೊಡ್ಡ ಮಾಧ್ಯಮ ಕಟ್ಟುವುದು ಸಾಧ್ಯವಿಲ್ಲವೆ?

ಎಲ್ಲ ಜನಪರ ಮಾಧ್ಯಮಗಳು ಮತ್ತು ಪತ್ರಕರ್ತರು ಒಟ್ಟಾಗಿ ತಮ್ಮೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಒಂದು ಸಶಕ್ತ ದೊಡ್ಡ ಮಾಧ್ಯಮ ಕಟ್ಟುವುದು ಸಾಧ್ಯವೂ ಇಲ್ಲ. ಅದರ ಅಗತ್ಯವೂ ಇಲ್ಲ. ಜನಪರ ಮಾಧ್ಯಮಗಳಲ್ಲಿ ಭಿನ್ನದನಿಗಳು ಬೇಕು. ಮತ್ತು ಬದಲಾವಣೆಯ ಹಲವು ಹಾದಿಗಳ ಅನ್ವೇಷಣೆಗಳು ನಡೆಯಬೇಕು. ಆದರೆ ಅವೆಲ್ಲ ಜನತೆ, ಜನಚಳುವಳಿಗಳ ಮತ್ತು ಜನಸಂಘಟನೆಗಳ ಜತೆ ಸಾವಯವ ಸಂಬಂಧ ಹೊಂದುವುದು ಮುಖ್ಯ. ಜನಪರ ಮಾಧ್ಯಮಗಳು ತಮ್ಮ ವೈವಿಧ್ಯತೆ ಮತ್ತು ಸ್ವಾಯತ್ತತೆ ಕಳೆದುಕೊಳ್ಳದೆ, ಅರ್ಥಪೂರ್ಣ ಸಂವಾದ ಸಹಕಾರ ಸಾಧ್ಯವಾಗಿಸುತ್ತಾ, ಒಂದು ಜಾಲ ಕಟ್ಟಿಕೊಂಡು ಜನಪರ ವಿಷಯಗಳನ್ನು ಚಳುವಳಿಗಳನ್ನು (ಕಾರ್ಪೊರೇಟ್ ಮಾಧ್ಯಮಗಳ ಮೇಲೆ ಒತ್ತಡ ಸೃಷ್ಟಿಸುವುದು ಸೇರಿದಂತೆ) ಮುನ್ನೆಲೆಗೆ ತರುವಲ್ಲಿ ಪರಿಣಾಮಕಾರಿ ಮಟ್ಟದ ಪ್ರಚಾರ ಮಾಡುವುದು ಅಗತ್ಯ ಮತ್ತು ಸಾಧ್ಯ. ಇಂತಹ ಜಾಲ ಕಟ್ಟಲು ಸಾಮಾಜಿಕ ಮಾಧ್ಯಮವನ್ನು ಮಾತ್ರ ಆಧರಿಸದೆ ವ್ಯಾಪಕ ಸಾಮಾಜಿಕ ಜಾಲವನ್ನು ಕಟ್ಟುವ ಮೂಲಕ ಇದನ್ನು ಸಾಧ್ಯಗೊಳಿಸಬೇಕು. ಇದೇ ಒಂದು ಚಳುವಳಿಯಾಗಬೇಕು ಮತ್ತು ಇದು ಜನಚಳುವಳಿಯ ಪ್ರಮುಖ ಭಾಗವೂ ಆಗಬೇಕು. ಆ ಮೂಲಕ ಜನಪರ ಮಾಧ್ಯಮಗಳ ತಲುಪುವಿಕೆ ಮತ್ತು ಪರಿಣಾಮಕಾರಿತನ ಹೆಚ್ಚಿಸುವುದು ಸಾಧ್ಯವೆಂಬ ಅಭಿಪ್ರಾಯ ವ್ಯಕ್ತವಾಯಿತು.

ಲಭ್ಯ ಡಿಜಿಟಲ್ ವೇದಿಕೆಗಳನ್ನು ಬಳಸಿಕೊಳ್ಳುತ್ತಲೇ, ತಮ್ಮ ಮತ್ತು ಕಾರ್ಪೊರೇಟ್–ಆಳುವ ರಾಜಕೀಯ ಕೂಟದ ಹಿತಾಸಕ್ತಿ ಕಾಪಾಡಲು ಅವು ಜನಪರ ಮಾಧ್ಯಮಗಳ ಮೇಲೆ ಸಾಕಷ್ಟು ನಿರ್ಬಂಧಗಳನ್ನು ಅಡೆತಡೆಗಳನ್ನು ಹಾಕುತ್ತವೆ ಎಂದು ನಿರೀಕ್ಷಿಸಿಯೇ ಕೆಲಸ ಮಾಡಬೇಕು. ಮುಕ್ತ ತಂತ್ರಾಂಶ (ಫ್ರೀ ಸಾಫ್ಟ್ ವೇರ್) ಚಳುವಳಿಯ ಸಹಕಾರದೊಂದಿಗೆ, ದೈತ್ಯ ಡಿಜಿಟಲ್ ವೇದಿಕೆಗಳಿಗೆ ಬದಲಿ ಡಿಜಿಟಲ್ ವೇದಿಕೆಗಳನ್ನು ರೂಪಿಸಿಕೊಳ್ಳಬೇಕು. ಈ ದೈತ್ಯ ಡಿಜಿಟಲ್ ವೇದಿಕೆಗಳ ಅಗಾಧ ರಾಜಕೀಯ ಶಕ್ತಿಗೆ ಕಡಿವಾಣ ಹಾಕಲು ಇಂಟರ್ನೆಟ್ ನ ಪ್ರಜಾಸತ್ತೀಕರಣದ ಚಳುವಳಿಯಲ್ಲೂ ಜನಪರ ಮಾಧ್ಯಮಗಳು ತೊಡಗಿಸಿಕೊಳ್ಳಬೇಕು.



ಜನಸಮೂಹಗಳ ಜತೆ ಸಾವಯವ ಸಂವಹನ ಸಂಪರ್ಕ ಸಾಧಿಸಬೇಕು

ಸಣ್ಣ ಗಾತ್ರದ ಜನಪರ ಮಾಧ್ಯಮಗಳು ಮುಖ್ಯವಾಹಿನಿಯ ಜನಸಮೂಹ ಮಾಧ್ಯಮ ಆಗುವುದು ಹೇಗೆ ? ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಹೊಂಚುವುದು ಹೇಗೆ? ಎಂಬುದು ಸರಳವಲ್ಲ. ಅದು ಖಂಡಿತ ಅಸಾಧ್ಯವೇನಲ್ಲ. ಅದರೆ. ಸುಲಭವಾದ ತಕ್ಷಣದ ಉತ್ತರಗಳಿಲ್ಲದ ಅತ್ಯಂತ ಸಂಕೀರ್ಣವಾದ ಪ್ರಶ್ನೆ. ಸಾಕಷ್ಟು ಪರಿಣಾಮಕಾರಿಯಾಗಿದ್ದರೂ ಹೆಚ್ಚಿನ ಸಂಪನ್ಮೂಲ ಹಾಗೂ ಸಾಧ್ಯತೆಗಳನ್ನು ಹೊಂದಿರುವ ಇಂಗ್ಲಿಷ್ ಪರ್ಯಾಯ ಮಾಧ್ಯಮಗಳು ಸಹ ಬದುಕುಳಿಯಲು ಇನ್ನೂ ಹೋರಾಡುತ್ತಿವೆ, ಕನ್ನಡದಂತಹ ಪ್ರಾದೇಶಿಕ ಪರ್ಯಾಯ ಮಾಧ್ಯಮಗಳ ಸವಾಲುಗಳು ಇನ್ನೂ ಹೆಚ್ಚಿವೆ. ಇದರ ಕುರಿತು ಹಲವು ಸುತ್ತಿನ ಚರ್ಚೆ, ಚಿಂತನ–ಮಂಥನ ಪ್ರಯೋಗಗಳು ಬೇಕಾಗಿವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಕೊನೆಯಲ್ಲಿ ಸಂವಾದಕಾರರೊಂದಿಗೆ ಸಭಿಕರ ಪ್ರಶ್ನೋತ್ತರ ಸಹ ನಡೆಯಿತು.

ವೆಬಿನಾರಿನ ಅಧ್ಯಕ್ಷತೆ ವಹಿಸಿ ಸಂವಾದದಲ್ಲೂ ಭಾಗವಹಿಸಿದ್ದ ಡಿ ಉಮಾಪತಿ ಅವರು, ವೆಬಿನಾರಿನಲ್ಲಿ ಹೊಮ್ಮಿದ ಯೋಚನೆ, ಚರ್ಚೆಗಳ ಒಟ್ಟು ಸಾರವನ್ನು ಸಮಾರೋಪ ಮಾತುಗಳಲ್ಲಿ ಮುಂದಿಟ್ಟರು. ಸಾವಿರಾರು ಕೈಗಳು ಲಕ್ಷಾಂತರ ಹತಾರಗಳುಳ್ಳ ಸರ್ವಶಕ್ತ ಪ್ರಭುತ್ವ ಮತ್ತು ದೈತ್ಯ ಕಾರ್ಪೊರೇಟ್ ಮಾಧ್ಯಮಗಳ ಅಪವಿತ್ರ ಮೈತ್ರಿಯ ವಿರುದ್ಧ ಪರ್ಯಾಯ ಮಾಧ್ಯಮ ಕಟ್ಟುವುದು ಹೂಹಾಸಿದ ಹಾದಿಯಲ್ಲ. ಕಲ್ಲುಮುಳ್ಳುಗಳ ಹೋರಾಟದ ಹಾದಿ. ಇದನ್ನು ಸಾಧಿಸಲು ಒಂದು ಕಡೆ ಜನಸಮೂಹಗಳ ಜತೆ ಸಾವಯವ ಸಂವಹನ ಸಂಪರ್ಕ ಸಾಧಿಸುತ್ತಾ ಪರ್ಯಾಯ ಮಾಧ್ಯಮಗಳ ಜಾಲವನ್ನು ಕಟ್ಟಿಕೊಳ್ಳಬೇಕು ಮತ್ತು ಇನ್ನೊಂದೆಡೆ ಕಾರ್ಪೊರೇಟ್ ಮಾಧ್ಯಮದಲ್ಲೂ ಕಿರು ಆವರಣಗಳನ್ನು ಕಟ್ಟಿಕೊಳ್ಳಬೇಕು ಎಂದರು.

ಕಾರ್ಪೊರೇಟ್ ಮಾಧ್ಯಮಗಳು ಬರಿಯ ಸುದ್ದಿ–ವಿಶ್ಲೇಷಣೆ ಕೊಡುತ್ತಿಲ್ಲ. ಬರಿಯ ಉದ್ಯಮಗಳ ಉತ್ಪನ್ನಗಳನ್ನು ಮಾರುತ್ತಿಲ್ಲ. ಅವು ತನ್ನ ಓದುಗ/ನೋಡುಗರ ಕಣ್ಣಾಲಿಗಳನ್ನು ತನ್ನ ಜಾಹೀರಾತುದಾರ ಉದ್ಯಮಗಳಿಗೆ ಮಾರುತ್ತಿವೆ. ಆಳುವವರ ಮತ್ತು ಉದ್ಯಮಪತಿಗಳ ಪರವಾಗಿ ಜನಸಮೂಹಗಳಲ್ಲಿ ಒಪ್ಪಿಗೆಯನ್ನು ಉತ್ಪಾದಿಸುತ್ತಿವೆ. ಜನರು ತಮ್ಮ ಸಮಸ್ಯೆಗಳನ್ನು ಮರೆಯುವಂತೆ – ವಲಸೆಗಾರ, ಮುಸ್ಲಿಂ, ಕಮ್ಯುನಿಸ್ಟ್ ಇತ್ಯಾದಿ – ಕಾಲ್ಪನಿಕ ಶತ್ರುಗಳನ್ನು ಸೃಷ್ಟಿಸುತ್ತಿವೆ. ಈಗಲೂ ಬಹಳ ಪ್ರಸ್ತುತವಾಗಿರುವ, ನೋಮ್ ಚೋಮ್ ಸ್ಕಿ ಬಹಳ ಹಿಂದೆ ಬರೆದ 'ಮನ್ಯುಫಾಕ್ಚರಿಂಗ್ ಕನ್ಸೆಂಟ್' (ಒಪ್ಪಿಗೆಯ ಸಾಮೂಹಿಕ ಉತ್ಪಾದನೆ) ಎಂಬ ಪುಸ್ತಕದಲ್ಲಿ ಮಂಡಿಸಿದ ಪರಿಕಲ್ಪನೆಯನ್ನು ಪರ್ಯಾಯ ಮಾಧ್ಯಮ ಕಟ್ಟಬಯಸುವವರು ಅಧ್ಯಯನ ಮಾಡಬೇಕು. ಕಾರ್ಪೊರೇಟ್ ಮಾಧ್ಯಮಗಳು ನಮ್ಮ ಮುಂದೆ ಇಡುವ ಪ್ರತಿ ಸುದ್ದಿ ಐದು ಜರಡಿ (ಫಿಲ್ಟರ್) ಗಳನ್ನು ಹಾದು ಬರುತ್ತದೆ ಎಂಬ ವಿಶ್ಲೇಷಣೆಯನ್ನು ಸಹ ವಿವರವಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ಒತ್ತಿ ಹೇಳಿದರು.

ಮೊದಲಿಗೆ ಜನಶಕ್ತಿ ಮೀಡಿಯಾದ ಪರವಾಗಿ ವಸಂತರಾಜ್, ವೆಬಿನಾರಿನ ಆಶಯದ ಮಾತುಗಳನ್ನಾಡಿ ಪಿ ಸಾಯಿನಾಥ್, ಡಿ ಉಮಾಪತಿ ಹಾಗೂ ಸಂವಾದದಲ್ಲಿ ಭಾಗವಹಿಸಿದವರನ್ನು ಪರಿಚಯ ಮಾಡಿ ಸ್ವಾಗತಿಸಿದರು, ವೆಬಿನಾರಿನ ನಿರ್ವಹಣೆ ಮಾಡಿದರು. ಗುರುರಾಜ ದೇಸಾಯಿ ಅವರು ಕೊನೆಯಲ್ಲಿ ಫೋಟೊ/ವಿಡಿಯೊ ಸ್ಪರ್ಧೆಯ ತೀರ್ಪನ್ನು ಘೋಷಿಸಿ ವಂದನಾರ್ಪಣೆ ಮಾಡಿದರು. ■

ಶತಮಾನೋತ್ಸವ ಲೇಖನಮಾಲೆ-49

1920-2020

ತೆನಾಲಿ ಸಮಾವೇಶ-ಕ್ರಾಂತಿಕಾರಿ ಪಕ್ಷದ ರಚನೆಗೆ ನಾಂದಿ

ಕಮ್ಯುನಿಸ್ಟ್ ನಿಯಮ ಹಾಗೂ ಆಚರಣೆಗಳನ್ನು ಉಲ್ಲಂಘಿಸುತ್ತಿದ್ದ ಮತ್ತು ಪಕ್ಷವನ್ನು ಪರಿಷ್ಕರಣವಾದಿ ದಿಕ್ಕಿನಲ್ಲಿ ಕೊಂಡೊಯ್ಯುತ್ತಿದ್ದ ರೀತಿಯನ್ನು ಪ್ರತಿಭಟಿಸಿ ಮಂಡಳಿಯ ಸಭೆಯಿಂದ ಹೊರಬಂದ 32 ಸದಸ್ಯರು ಪಕ್ಷದ ಎಲ್ಲಾ ಸದಸ್ಯರಿಗೆ 14 ಏಪ್ರಿಲ್, 1964 ರಂದು ಒಂದು ಜಂಟೀ ಮನವಿಯನ್ನು ಹೊರಡಿಸಿದರು. 'ಐಕ್ಯತೆಗಾಗಿ ಮತ್ತು ಮಾತುಕತೆಗಾಗಿ ಒತ್ತಾಯಿಸುತ್ತೇವೆ' ಎಂಬ ಸೋಗುಹಾಕುತ್ತಾ ಪಕ್ಷದ ಸದಸ್ಯರಲ್ಲಿ ಗೊಂದಲ ಉಂಟುಮಾಡಲು ಪರಿಷ್ಕರಣವಾದಿ ನಾಯಕತ್ವವು ಯತ್ನಿಸಿತು. ಆದಾಗ್ಯೂ, ಇಡೀ ಪಕ್ಷದ ಪ್ರಜಾಸತ್ತಾತ್ಮಕ ತೀರ್ಪನ್ನು ಪಡೆಯಬೇಕೆಂಬ ಮತ್ತು 32 ಸದಸ್ಯರು ಮುಂದಿಟ್ಟಿದ್ದ ಯಾವ ಬೇಡಿಕೆಗಳನ್ನೂ ಅವರು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಈ ಹಿನ್ನೆಲೆಯಲ್ಲಿ ತೆನಾಲಿ ಸಮಾವೇಶವು 1964ರ ಜುಲೈ 7 ರಿಂದ 11 ರವರೆಗೆ ನಡೆಯಿತು. ಇದರಲ್ಲಿ ಒಂದು ಲಕ್ಷ ಪಕ್ಷದ ಸದಸ್ಯರನ್ನು ಪ್ರತಿನಿಧಿಸಿ 146 ಪ್ರತಿನಿಧಿಗಳು ಸೇರಿದ್ದರು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ಒಂದು ದಶಕಕ್ಕೂ ಹೆಚ್ಚಿನ ಕಾಲ ಪರಿಷ್ಕರಣವಾದದ ವಿರುದ್ಧದ ದೀರ್ಘ ಹೋರಾಟವು 1964ರ ಹೊತ್ತಿಗೆ ಹಿಂತಿರುಗಲಾರದ ಘಟ್ಟ ತಲುಪಿತ್ತು. ಏಪ್ರಿಲ್ 11 ರಂದು, ರಾಷ್ಟ್ರೀಯ ಮಂಡಳಿಯ 32 ಸದಸ್ಯರು ನಾಯಕತ್ವದ ಧೋರಣೆಯ ವಿರುದ್ಧ, ಎಲ್ಲಾ ಅಂಗೀಕೃತ ತೀರ್ಮಾನಗಳಿಗೆ ವ್ಯತಿರಿಕ್ತವಾಗಿ ಅವರು ಕಮ್ಯುನಿಸ್ಟ್ ನಿಯಮ ಹಾಗೂ ಆಚರಣೆಗಳನ್ನು ಉಲ್ಲಂಘಿಸುತ್ತಿದ್ದ ಮತ್ತು ಪಕ್ಷವನ್ನು ಪರಿಷ್ಕರಣವಾದಿ ದಿಕ್ಕಿನಲ್ಲಿ ಕೊಂಡೊಯ್ಯುತ್ತಿದ್ದ ರೀತಿಯನ್ನು ಪ್ರತಿಭಟಿಸಿ ಮಂಡಳಿಯ ಸಭೆಯಿಂದ ಹೊರಬಂದರು; ಈ 32 ಸದಸ್ಯರು ಪಕ್ಷದ ಎಲ್ಲಾ ಸದಸ್ಯರಿಗೆ 14 ಏಪ್ರಿಲ್, 1964 ರಂದು ಒಂದು ಜಂಟೀ ಮನವಿಯನ್ನು ಹೊರಡಿಸಿದರು. ಒಂದು ಬಲಿಷ್ಠ ಕಮ್ಯುನಿಸ್ಟ್ ಪಕ್ಷದ ಉದಯಕ್ಕೆ ಆ ಹೇಳಿಕೆಯು ದಾರಿ ಹಾಕಿಕೊಟ್ಟಿತು.

ಆ ಜಂಟೀ ಮನವಿಗೆ ಸಹಿ ಮಾಡಿದವರು: 1) ಪಿ.ಸುಂದರಯ್ಯ, 2) ಎಂ.ಬಸವಪುನ್ನಯ್ಯ, 3) ಟಿ.ನಾಗಿರೆಡ್ಡಿ, 4) ಎಂ.ಹನುಮಂತ ರಾವ್, 5) ಡಿ.ವೆಂಕಟೇಶ್ವರ ರಾವ್, 6) ಎನ್.ಪ್ರಸಾದ್ ರಾವ್, 7)ಜಿ..ಬಪನಯ್ಯ, 8) ಇಎಂಎಸ್ ನಂಬೂದಿರಿಪಾಡ್, 9) ಎ.ಕೆ.ಗೋಪಾಲನ್, 10) ಎ.ವಿ.ಕುಜಂಬು, 11) ಸಿ.ಹೆಚ್.ಕನಾರನ್, 12) ಇ.ಕೆ.ನಯನಾರ್, 13)ವಿ.ಎಸ್.ಅಚುತಾನಂದನ್,14)ಇ.ಕೆ.ಇಂಬಿಚಿಬಾವ, 15) ಪ್ರಮೋದ್ ದಾಸ್ ಗುಪ್ತಾ, 16) ಮುಜಾಫರ್ ಅಹಮದ್, 17) ಜ್ಯೋತಿ ಬಸು, 18) ಅಬ್ದುಲ್ ಹಲೀಮ್, 19) ಹರೆ ಕೃಷ್ಣ ಕೋನಾರ್, 20) ಸರೋಜ್ ಮುಖರ್ಜಿ, 21) ಪಿ.ರಾಮಮೂರ್ತಿ, 22) ಎಂ.ಆರ್.ವೆಂಕಟರಾಮನ್, 23) ಎನ್.ಶಂಕರಯ್ಯ, 24) ಕೆ.ರಮಣಿ, 25) ಹರ್ಕಿಶನ್ ಸಿಂಗ್ ಸುರ್ಜಿತ್, 26) ಜಗಜಿತ್ ಸಿಂಗ್ ಲ್ಯಾಲ್ಪುರಿ, 27) ಡಿ.ಎಸ್. ತಾಪಿಯಾಲ, 28) ಡಾ.ಭಾಗ್ ಸಿಂಗ್, 29) ಶಿವ ಕುಮಾರ್ ಮಿಶ್ರ, 30) ಆರ್.ಎನ್.ಉಪಾಧ್ಯಾಯ, 31) ಮೋಹನ್ ಪುನಮಿಯಾ ಮತ್ತು 32) ಆರ್.ಪಿ.ಶರಾಫ್.

ಎಸ್.ಎ.ಡಾಂಗೆ ನೇತೃತ್ವದ ಕಾರ್ಯಕಾರಿಯು ನಡೆಸುತ್ತಿದ್ದ ಪಕ್ಷವಿರೋಧಿ ಗುಂಪುಗುಳಿತನದ ಚಟುವಟಿಕೆಗಳ ವಿರುದ್ಧ ಹೋರಾಟವನ್ನು ಮುಂದೆ ಕೊಂಡೊಯ್ಯುವುದು ಮತ್ತು ಪರಿಷ್ಕರಣವಾದಿ ರಾಜಕೀಯ ನಿಲುವಿನ ವಿರುದ್ಧದ ಹೋರಾಟಕ್ಕೆ ಅದು ಹೇಗೆ ಸಹಜವಾಗಿ ತಳಕುಹಾಕಿಕೊಂಡಿದೆ ಎಂಬ ತೀರ್ಮಾನಕ್ಕೆ ಬರಲು ಅವರು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದುದನ್ನು ಆ ಮನವಿಯಲ್ಲಿ ವಿವರಿಸಿದ್ದರು. ಕಾಂಗ್ರೆಸ್ ಜತೆಗಿನ ಸಾಮಾನ್ಯ ಸಂಯುಕ್ತ ರಂಗದ ಪರಿಷ್ಕರಣವಾದಿ ರಾಜಕೀಯ ನಲುವನ್ನು ಪಕ್ಷದ ಸದಸ್ಯರು ಹಾಗೂ ಘಟಕಗಳು ಬಹುಮತದಿಂದ ತಿರಸ್ಕರಿಸಬೇಕೆಂದು ಅವರು ಕರೆ ಕೊಟ್ಟರು. 1961ರಲ್ಲಿ ನಡೆದ ಆರನೇ ಮಹಾಧಿವೇಶನದಲ್ಲಿಯೂ ಪರಿಷ್ಕರಣವಾದಿಗಳು ಇಂತಹದೇ ನಿಲುವನ್ನು ಮುಂದಿಟ್ಟಿದ್ದರು, ಆದರೆ ಅದನ್ನು "ಪ್ರತಿನಿಧಿಗಳು ದೃಢಸಂಕಲ್ಪದಿಂದ ವಿರೋಧಿಸಿದರು ಮತ್ತು ಮಹಾಧಿವೇಶನವು ನಿರ್ಣಯದ ಮೂಲಕ ತಿರಸ್ಕರಿಸಿದ್ದನ್ನು ಅಂತಿಮವಾಗಿ ಅಂಗೀಕರಿಸಿದೆ ಕೂಡ." ಎಂದು ಆ ಮನವಿಯಲ್ಲಿ ತಿಳಿಸಲಾಗಿತ್ತು. ನಾಚಿಕೆಯಿಲ್ಲದೇ ಪರಿಷ್ಕರಣವಾದಿ ರಾಜಕೀಯ ನಿಲುವನ್ನು ಪ್ರತಿಪಾದಿಸಿದ್ದ ಆ ಸಂಗಾತಿಗಳು ಮಹಾಧಿವೇಶನದಲ್ಲಿ ಸೋಲನ್ನು ಒಪ್ಪಿಕೊಳ್ಳಬೇಕಾಯಿತು. ಆದಾಗ್ಯೂ ಅವರು ಮಹಾಧಿವೇಶನದ ನಂತರವೂ ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಅದೇ ನಿಲುವನ್ನು ಅನುಸರಿಸುವ ಪ್ರಯತ್ನ ಮಾಡಿದರು."

ದೇಶದ ಆರ್ಥಿಕ ಮತ್ತು ರಾಜಕೀಯ ಸನ್ನಿವೇಶದ ಅಂದಾಜು ಮಾಡುವ ಬಗ್ಗೆ ಮತ್ತು ಡಾಂಗೆ ನೇತೃತ್ವದ ಕಾರ್ಯಕಾರಿಯ ಪರಿಷ್ಕರಣವಾದಿ ರಾಜಕೀಯ ಹಾಗೂ ಗುಂಪುಗುಳಿತನದ ಸಂಘಟನಾತ್ಮಕ ವಿಧಾನಗಳಿಗೆ ಹೇಗೆ ಪ್ರತಿರೋಧ ಒಡ್ಡುವುದು ಎಂಬ ಸಮಸ್ಯೆಗಳನ್ನು ಎದುರಿಸುವಲ್ಲಿ ಕೂಡ ತಮ್ಮ-ತಮ್ಮ ನಡುವೆಯೇ ಭಿನ್ನಾಭಿಪ್ರಾಯಗಳು ಇವೆ ಎಂಬ ನೈಜ ಸಂಗತಿಯನ್ನು ಆ ಮನವಿಯು ಬಹಿರಂಗವಾಗಿ ಒಪ್ಪಿಕೊಂಡಿತು. ಆದಾಗ್ಯೂ, "ಇಂತಹ ಸಂದರ್ಭಗಳು ಎದುರಾದಾಗ ಪಕ್ಷದ ಆಂತರಿಕ ಸಮಸ್ಯೆಗಳನ್ನು ಪಕ್ಷದ ಮಹಾಧಿವೇಶನವನ್ನು ಆಯೋಜಿಸಿ ಇಡೀ ಸದಸ್ಯತ್ವಕ್ಕೆ ಮನವಿ ಮಾಡಿಕೊಳ್ಳುವ ಮೂಲಕ ಮಾತ್ರವೇ ಪರಿಹರಿಸಿಕೊಳ್ಳಬೇಕು" ಎಂಬ ವಿಚಾರದಲ್ಲಿ ಅವರು ಒಗ್ಗಟ್ಟಾಗಿದ್ದರು. ಸೈದ್ಧಾಂತಿಕ ಪ್ರಶ್ನೆಗಳಲ್ಲಿ ಕೂಡ ತಮ್ಮ ನಡುವೆ ಭಿನ್ನಾಭಿಪ್ರಾಯಗಳಿವೆ, ಆದರೆ ಅವರು ತಾತ್ಕಾಲಿಕವಾಗಿ ಒಪ್ಪಿಕೊಂಡಿರುವ 'ಕರಡು ಕಾರ್ಯಕ್ರಮದ ಬಗ್ಗೆ ಒಗ್ಗಟ್ಟಾಗಿದ್ದೇವೆ' ಎನ್ನುವುದನ್ನೂ ಅದರಲ್ಲಿ ಹೇಳಲಾಗಿದೆ. "ಆದರೆ, ಈ ಭಿನ್ನಾಭಿಪ್ರಾಯಗಳ ಹೊರತಾಗಿಯೂ, ಪರಿಷ್ಕರಣವಾದಿ ರಾಜಕೀಯ ನಿಲುವನ್ನು, ಪಕ್ಷ-ವಿರೋಧಿ ಗುಂಪುಗುಳಿತನದ ಸಂಘಟನಾತ್ಮಕ ವಿಧಾನಗಳನ್ನು ಹಾಗೂ ಬ್ರಿಟಿಷರಿಗೆ ತನ್ನ ಸೇವೆ ಸಲ್ಲಿಸುವುದಾಗಿದೆ ಡಾಂಗೆ ಹೇಳಿದ್ದರೆನ್ನಲಾದ ನಡವಳಿಕೆಯನ್ನು ನಾಚಿಕೆಯಿಲ್ಲದೇ ಮರೆಮಾಚುವುದನ್ನು ಪ್ರತಿರೋಧಿಸುವ ಅಗತ್ಯದ ವಿಚಾರದಲ್ಲಿ ನಾವು ಎಲ್ಲರೂ ಒಂದಾಗಿದ್ದೇವೆ". ತಮ್ಮನ್ನು ವಿಭಜಿಸುವ ಸೈದ್ಧಾಂತಿಕ ಮತ್ತು ರಾಜಕೀಯ ಪ್ರಶ್ನೆಗಳ ಬಗ್ಗೆ ಇನ್ನೂ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಆ ಚರ್ಚೆಗಳಲ್ಲಿ ಪಕ್ಷದ ಇಡೀ ಸದಸ್ಯತ್ವವನ್ನು ಒಳಗೊಳ್ಳಬೇಕು ಎಂಬ ಪ್ರಸ್ತಾಪ ಮಾಡಿದರು.

ಈ ಚರ್ಚೆಗಳಿಗೆ ಸಹಾಯವಾಗುವಂತೆ, ಈ ಕೆಳಗಿನ ದಸ್ತಾವೇಜುಗಳನ್ನು ಪಕ್ಷದ ಸದಸ್ಯರು ಮತ್ತು ಹಿತೈಷಿಗಳ ನಡುವೆ ಅವರು ವಿತರಿಸಿದರು: 1) ಅವರು ತಾತ್ಕಾಲಿಕವಾಗಿ ಅಂಗೀಕರಿಸಿದ್ದ ಕರಡು ಕಾರ್ಯಕ್ರಮ; 2) ಪಕ್ಷದ ಕಾರ್ಯಕ್ರಮ ಕುರಿತು ಕಾಂ.ಇಎಂಎಸ್ ಅವರ ಕರಡು; 3) ಕಾಂ.ಎಂ.ಬಸವಪುನ್ನಯ್ಯ ಮತ್ತಿತರರು ಸಿದ್ಧಪಡಿಸಿದ್ದ ಸೈದ್ಧಾಂತಿಕ ಪ್ರಶ್ನೆಗಳ ಮೇಲಿನ ಕರಡು; 4) ಕಾಂ.ಜ್ಯೋತಿ ಬಸು ಮತ್ತಿತರರು ಈ ಮೇಲಿನವುಗಳ ಬಗ್ಗೆ ಸಿದ್ಧಪಡಿಸಿದ ಮತ್ತೊಂದು ಕರಡು. ತದನಂತರದಲ್ಲಿ ಕರಡು ಕಾರ್ಯಕ್ರಮದ ಮೇಲೆ ಕಾಂ.ಇಎಂಎಸ್ ಅವರ ವಿಮರ್ಶೆ ಮತ್ತು ಕಾಂ.ಇಎಂಎಸ್ ಅವರ ಕರಡು ಕಾರ್ಯಕ್ರಮದ ಮೇಲೆ ಇತರ ಸಂಗಾತಿಗಳ ವಿಮರ್ಶೆಗಳನ್ನೂ ವಿತರಿಸಲಾಗುವುದು ಎಂದೂ ಅವರು ತಿಳಿಸಿದರು. ಇಂತಹ 'ಚರ್ಚೆಗಳು ಮತ್ತು ಸಕ್ರಿಯ ರಾಜಕೀಯ ಹಾಗೂ ಸಾಮೂಹಿಕ ಕೆಲಸಗಳ' ಮೂಲಕ ದೊಡ್ಡ ಸಂಖ್ಯೆಯ ಪಕ್ಷದ ಸದಸ್ಯರನ್ನು ಮತ್ತು ಹಿತೈಷಿಗಳನ್ನು ಅಣಿನೆರೆಸಲು ಸಾಧ್ಯವಾಗುತ್ತದೆ, 'ಡಾಂಗೆ ಮತ್ತು ಅವರ ಅನುಯಾಯಿಗಳ ನೀತಿಗಳು ಮತ್ತು ಆಚರಣೆಗಳಿಗೆ ಪರಿಣಾಮಕಾರಿಯಾದ ಪ್ರತಿರೋಧವನ್ನು ಒಡ್ಡಬಹುದು ಮಾತ್ರವಲ್ಲ, ಪಕ್ಷದ ಏಳನೇ ಮಹಾಧಿವೇಶನವನ್ನು ಆಯೋಜಿಸಲು ಅಗತ್ಯವಾದ ರಾಜಕೀಯ ಹಾಗೂ ಸಂಘಟನಾತ್ಮಕ ಸಿದ್ಧತೆಯನ್ನೂ ಸಹ ಮಾಡಬಹುದು' ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಪಕ್ಷದ ಐಕ್ಯತೆಯನ್ನು ಪ್ರಾಮಾಣಿಕವಾಗಿ ಪ್ರತಿಪಾದಿಸುವ ಎಲ್ಲರಲ್ಲೂ 'ಕಾರ್ಯಕಾರಿ ಮತ್ತು ಅವರ ಬೆಂಬಲಿಗರು ತಮ್ಮ ಅಂದಿನ ನೀತಿಗಳು ಹಾಗೂ ಆಚರಣೆಗಳನ್ನು ಹಿಂತೆಗೆದುಕೊಳ್ಳುವಂತೆ ಅವರ ಮೇಲೆ ಒತ್ತಡ ತರಬೇಕು" ಎಂದು ತಮ್ಮ ಮನವಿಯನ್ನು ಕೊನೆಗೊಳಿಸಿದರು. ಒಂದೊಮ್ಮೆ ಕಾರ್ಯಕಾರಿಯು ತನ್ನ ಧೋರಣೆಯನ್ನೇ ಮುಂದುವರಿಸಿದರೆ, ಪಕ್ಷದ ಏಳನೇ ಮಹಾಧಿವೇಶನವನ್ನು ಆಯೋಜಿಸಲು ತಮ್ಮ ಜತೆ ಕೈಜೋಡಿಸಬೇಕೆಂದು ಪಕ್ಷದ ಇಡೀ ಸದಸ್ಯತ್ವಕ್ಕೆ ಅವರು ಮನವಿ ಮಾಡಿದರು; ಆ ಮಹಾಧಿವೇಶನವು ಎಸ್.ಎ.ಡಾಂಗೆ ಮತ್ತವರ ಗುಂಪಿನ ಗುಣಲಕ್ಷಣಗಳಾದ ಪರಿಷ್ಕರಣವಾದ, ಗುಂಪುಗಾರಿಕೆ ನಡೆಸುವವರು ಹಾಗೂ ಕ್ರಾಂತಿಕಾರಿ ಪರಂಪರೆಗಳನ್ನು ತೊರೆದವರ ವಿರುದ್ಧದ ಹೋರಾಟದ ಮಹಾಧಿವೇಶನವಾಗಬೇಕು ಎಂದರು. ತಮ್ಮ ಚಟುವಟಿಕೆಗಳನ್ನು ಪರಿಶೀಲಿಸಲು ಮತ್ತು ಮುಂದಿನ ಕಾರ್ಯಕ್ರಮಗಳನ್ನು ನಿರ್ಧರಿಸಲು ಎರಡು ತಿಂಗಳೊಳಗೆ ಪಕ್ಷದ ಸದಸ್ಯರ ಪ್ರತಿನಿಧಿಗಳ ಸಭೆಯೊಂದನ್ನು ಕರೆಯಲು ತೀರ್ಮಾನಿಸಲಾಗಿದೆಯೆಂದೂ ಅವರು ತಿಳಿಸಿದರು.

ಈ ಮನವಿಯ ಆಧಾರದಲ್ಲಿ, ಪಕ್ಷದಲ್ಲಿ ಆಂತರಿಕವಾಗಿ ತೀಕ್ಷ್ಣ ಚರ್ಚೆಗಳನ್ನು ಸಂಘಟಿಸಲಾಯಿತು, ದೇಶಾದ್ಯಂತ ಇರುವ ಪಕ್ಷದ ಸಮಿತಿಗಳು ಮತ್ತು ಸದಸ್ಯರನ್ನು ಸಂಪರ್ಕಿಸಲಾಯಿತು. ಪಕ್ಷದ ಕಾರ್ಯಕರ್ತರಲ್ಲಿ ಐಕ್ಯತೆಯ ಬಗ್ಗೆ ಅಪೇಕ್ಷೆ ಇತ್ತಾದರೂ, ಅವರಲ್ಲಿ ಬಹುತೇಕರು ಡಾಂಗೆ ಮತ್ತವರ ಗುಂಪು ಅನುಸರಿಸುತ್ತಿದ್ದ ಪರಿಷ್ಕರಣವಾದಿ ನಿಲುವನ್ನು ಮತ್ತು ಅವರ ಒಡಕುಂಟುಮಾಡುವ ವಿಧಾನಗಳನ್ನು ಟೀಕಿಸಿದರು. ಪಕ್ಷದ ಇಡೀ ಯಂತ್ರವು ಪರಿಷ್ಕರಣವಾದಿಗಳ ಕೈಯಲ್ಲಿ ಭದ್ರವಾಗಿರುವುದರಿಂದ ಎದುರಾದ ಇತಿಮಿತಿಗಳ ಹೊರತಾಗಿಯೂ ಪಕ್ಷದ ಬಹುಸಂಖ್ಯಾತ ಸದಸ್ಯರು 32 ಮುಖಂಡರ ಮನವಿ ಪತ್ರದ ಹಿಂದೆ ಒಟ್ಟುಗೂಡಿದರು.

'ಐಕ್ಯತೆಗಾಗಿ ಮತ್ತು ಮಾತುಕತೆಗಾಗಿ ಒತ್ತಾಯಿಸುತ್ತೇವೆ' ಎಂಬ ಸೋಗುಹಾಕುತ್ತಾ ಪಕ್ಷದ ಸದಸ್ಯರಲ್ಲಿ ಗೊಂದಲ ಉಂಟುಮಾಡಲು ಪರಿಷ್ಕರಣವಾದಿ ನಾಯಕತ್ವವು ಯತ್ನಿಸಿತು. ಆದಾಗ್ಯೂ, ಇಡೀ ಪಕ್ಷದ ಪ್ರಜಾಸತ್ತಾತ್ಮಕ ತೀರ್ಪನ್ನು ಪಡೆಯಬೇಕೆಂಬ ಮತ್ತು 32 ಸದಸ್ಯರು ಮುಂದಿಟ್ಟಿದ್ದ ಯಾವ ಬೇಡಿಕೆಗಳನ್ನೂ ಅವರು ಒಪ್ಪಿಕೊಳ್ಳಲು ಸಿದ್ಧರಿಲ್ಲ ಎಂಬುದನ್ನು ಅವರೊಂದಿಗಿನ ಮಾತುಕತೆಯು ಸ್ಪಷ್ಟಪಡಿಸಿತು. ವಾಸ್ತವದಲ್ಲಿ, ಪಕ್ಷವನ್ನು ಒಡೆಯುವುದರಲ್ಲಿ ಅವರು ನಿರತರಾಗಿದ್ದರು. ಲೋಕಸಭಾದ ಕಮ್ಯುನಿಸ್ಟ್ ಗುಂಪನ್ನು ಮತ್ತು ಕೆಲವು ರಾಜ್ಯಗಳ ವಿಧಾನಸಭೆಗಳಲ್ಲಿ ಕೂಡ ಒಡೆದರು. ಡಾಂಗೆ ಕಡೆಯವರು ನಂತರ ನಡೆಸಿದ ರಾಷ್ಟ್ರೀಯ ಮಂಡಳಿಯ ಸಭೆಯಲ್ಲಿ ಚರ್ಚೆ ಮಾಡಿದ ರಾಜಕೀಯ ನಿರ್ಣಯವು ಅವರು ತಮ್ಮ ಅದೇ ವರ್ಗ ಶಾಮೀಲಿನ ರಾಜಕೀಯ ನಿಲುವನ್ನೇ ಹೇಗಾದರೂ ಮಾಡಿ ಮುಂದುವರಿಸಲು ಕಟಿಬದ್ಧರಾಗಿದ್ದರು ಎಂಬುದನ್ನು ತೋರಿಸಿತು. ಈ ಹಿನ್ನೆಲೆಯಲ್ಲಿ ತೆನಾಲಿ ಸಮಾವೇಶವು 1964ರ ಜುಲೈ 7 ರಿಂದ 11ರವರೆಗೆ ನಡೆಯಿತು.

ಪಕ್ಷದೊಳಗಿನ ಆಂತರಿಕ ಸನ್ನಿವೇಶವನ್ನು ಚರ್ಚೆ ಮಾಡಲು ಹಾಗೂ 32 ಸದಸ್ಯರು ರಾಷ್ಟ್ರೀಯ ಮಂಡಳಿಯಿಂದ ಹೊರ ನಡೆದ ಮೇಲೆ ಸನ್ನಿವೇಶವನ್ನು ಅಂದಾಜು ಮಾಡಲು ಮತ್ತು ತಮ್ಮ ಮನವಿಗೆ ಅವರ ಪ್ರತಿಸ್ಪಂದನೆ ಹಾಗೂ ಮುಂದಿನ ಕಾರ್ಯಾಚರಣೆಯ ಹಾದಿಯ ಬಗ್ಗೆ ತೀರ್ಮಾನ ಮಾಡಲು ಒಂದು ಲಕ್ಷ ಪಕ್ಷದ ಸದಸ್ಯರನ್ನು ಪ್ರತಿನಧಿಸಿ 146 ಪ್ರತಿನಧಿಗಳು ತೆನಾಲಿಯಲ್ಲಿ ಸೇರಿದ್ದರು.

ಕಾಂ.ಮುಜಾಫರ್ ಅಹಮದ್ ಪಕ್ಷದ ಧ್ವಜವನ್ನು ಆರೋಹಣ ಮಾಡಿದರು ಮತ್ತು ನಿಜವಾದ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುತ್ತೇವೆ ಎಂದು ಪ್ರತಿಜ್ಞೆ ಮಾಡಬೇಕೆಂದು ಪ್ರತಿನಿಧಿಗಳಿಗೆ ಕರೆ ನೀಡಿದರು. ಸಂಗಾತಿಗಳಾದ ಎ.ಕೆ. ಗೋಪಾಲನ್, ಜ್ಯೋತಿಬಸು ಮತ್ತು ಶಿವ ವರ್ಮಾ ಅವರು ಸಮಾವೇಶದ ಅಧ್ಯಕ್ಷೀಯ ಮಂಡಳಿಯಲ್ಲಿ ಇದ್ದು ಸಮಾವೇಶದ ಕಾರ್ಯಕಲಾಪಗಳನ್ನು ನಡೆಸಿದರು. ಕಾಂ. ಪಿ.ಸುಂದರಯ್ಯ ಅವರು ಸ್ವಾಗತ ಸಮಿತಿಯ ಪರವಾಗಿ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಮಾವೇಶದ ಆರಂಭದಲ್ಲೇ 32 ಸಂಗಾತಿಗಳು ಮತ್ತು ಡಾಂಗೆ ನೇತೃತ್ವದ ರಾಷ್ಟ್ರೀಯ ಮಂಡಳಿಯ ನಡುವೆ ನಡೆದ 'ಐಕ್ಯತೆಯ ಮಾತುಕತೆಗಳ' ಬಗ್ಗೆ ವರದಿಯನ್ನು ಸಮಾವೇಶದಲ್ಲಿ ಮಂಡಿಸಲಾಯಿತು. ಅದರ ಹಿಂದೆಯೇ ಹಲವಾರು ರಾಜ್ಯಗಳ ವರದಿಗಳನ್ನು, ಆಯಾಯ ರಾಜ್ಯಗಳಲ್ಲಿನ ಪಕ್ಷದ ಆಂತರಿಕ ಪರಿಸ್ಥಿತಿ ಮತ್ತು ಅಧಿಕೃತ ಗುಂಪಿನಂದ ನಡೆಯುತ್ತಿರುವ ಪರಿಷ್ಕರಣವಾದಿ ರಾಜಕೀಯ ನಿಲುವು ಹಾಗೂ ಒಡಕುಂಟುಮಾಡುವ ಚಟುವಟಿಕೆಗಳ ಬಗ್ಗೆ ಕೂಡ ಸಮಗ್ರ ಚಿತ್ರಣವನ್ನು ನೀಡಲಾಯಿತು. ಹಲವಾರು ರಾಜ್ಯಗಳ ಅತಿದೊಡ್ಡ ಸಂಖ್ಯೆಯ ಪಕ್ಷದ ಸದಸ್ಯರು ಡಾಂಗೆ ನಾಯಕತ್ವವನ್ನು ತಿರಸ್ಕರಿಸಿ 32 ಸಂಗಾತಿಗಳ ಮನವಿಯ ಪರವಾಗಿ ನಿಂತಿದ್ದಾರೆ ಎಂಬುದನ್ನು ಈ ವರದಿಗಳು ತಿಳಿಯಪಡಿಸಿದವು.

'ಸೈದ್ಧಾಂತಿಕ ಚರ್ಚೆಗೆ ಒಂದು ಕೊಡುಗೆ' ಎಂಬ ಸೈದ್ಧಾಂತಿಕ ಪ್ರಶ್ನೆಗಳ ಮೇಲಿನ ದಸ್ತಾವೇಜನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಕುರಿತು ಒಂದು ಪ್ರಸ್ತಾಪ ಮಾಡಲಾಯಿತು: "ನಮ್ಮ ಪಕ್ಷವು ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಒಂದು ಸ್ವತಂತ್ರ ಸಾರ್ವಭೌಮ ಘಟಕವಾಗಿದೆ, ಆದ್ದರಿಂದ ಇಡೀ ಪಕ್ಷದೊಳಗಡೆ ಸಂಪೂರ್ಣ ಹಾಗೂ ಪ್ರಜಾಸತ್ತಾತ್ಮಕ ಚರ್ಚೆಯ ನಂತರ ನಮ್ಮದೇ ಆದ ಒಂದು ಸ್ವತಂತ್ರ ತೀರ್ಮಾನಗಳಿಗೆ ಬರೋಣ". ಬದಲಾವಣೆಯ ಸ್ವರೂಪಗಳು ಮತ್ತು ಶಾಂತಿಯುತ ಸಹಬಾಳ್ವೆ ಅಂತಹ ತಕ್ಷಣದ ಪರಿಸ್ಥಿತಿಗೆ ಸಂಬಂಧ ಹೊಂದಿದ ರಾಜಕೀಯ ಹಾಗೂ ಸೈದ್ಧಾಂತಿಕ ಕೆಲಸಗಳ ಬಗ್ಗೆ ಚರ್ಚೆ ಮಾಡಬೇಕು ಮತ್ತು ಕರಡು ಕಾರ್ಯಕ್ರಮದ ಜತೆ ಅದನ್ನು ನಿಷ್ಕರ್ಷೆ ಮಾಡಬೇಕು ಎಂಬ ಸಲಹೆಯನ್ನು ಸಮಾವೇಶವು ಒಪ್ಪಿಕೊಂಡಿತು.

ಕರಡು ಕಾರ್ಯಕ್ರಮವನ್ನು ಮತ್ತು ಕಾಂ. ಇಎಂಎಸ್ ಅವರ ಟಿಪ್ಪಣಿಯನ್ನೂ ಸಮಾವೇಶ ಚರ್ಚೆ ಮಾಡಿತು. ಡಾಂಗೆ, ಭೂಪೇಶ್ ಗುಪ್ತಾ ಮತ್ತು ಪಿ.ಸಿ.ಜೋಷಿಯವರು ಸಿದ್ಧಪಡಿಸಿ ಡಾಂಗೆ ನೇತೃತ್ವದ ರಾಷ್ಟ್ರೀಯ ಮಂಡಳಿಯಲ್ಲಿ ವಿತರಿಸಿದ ಮೂರು ಕರಡುಗಳನ್ನೂ ಪ್ರತಿನಿಧಿಗಳ ನಡುವೆ ಚರ್ಚೆಗಾಗಿ ಹಂಚಲಾಯಿತು. ಎರಡು ದಿನಗಳ ಚರ್ಚೆಗಳ ನಂತರ, ಕರಡು ಕಾರ್ಯಕ್ರಮ ಮತ್ತು ಜತೆಯಲ್ಲೇ ಕಾಂ.ಇಎಂಎಸ್ ಅವರ ವಿಮರ್ಶೆಯನ್ನೂ ಇಡೀ ಪಕ್ಷದಲ್ಲಿ ಚರ್ಚೆಗಾಗಿ ವಿತರಿಸಬೇಕು ಮತ್ತು ಏಳನೇ ಮಹಾಧಿವೇಶನದಲ್ಲಿ ಅದನ್ನು ನಿಷ್ಕರ್ಷೆ ಮಾಡಬೇಕು ಎಂದು ತೀರ್ಮಾನಿಸಲಾಯಿತು.

ಸೈದ್ಧಾಂತಿಕ ಹಾಗೂ ರಾಜಕೀಯ ಪ್ರಶ್ನೆಗಳನ್ನು ನಿರ್ಧರಿಸಿದ ನಂತರ, ಪಕ್ಷದ ಏಳನೇ ಮಹಾಧಿವೇಶನದ ಬಗ್ಗೆ ನಿರ್ಣಯವನ್ನು ಸಮಾವೇಶವು ಚರ್ಚೆ ಮಾಡಿ ಅಂಗೀಕರಿಸಿತು. ಒಂದು ಮನವಿಯೊಂದಿಗೆ ಸಮಾವೇಶವು ಕೊನೆಗೊಂಡಿತು: "ಈ ಕ್ರಮದಿಂದ ಉಂಟಾಗುವ ಪರಿಣಾಮಗಳ ಬಗ್ಗೆ ವ್ಯಾಕುಲರಾಗಿರುವ ಎಲ್ಲಾ ಸಂಗಾತಿಗಳು ಹಾಗೂ ಮಿತ್ರರಿಗೆ ಇಂತಹ ಸ್ಥಿತಿಗೆ ನಾವು ತಳ್ಳಲ್ಪಟ್ಟಿರುವುದು ನಮಗೆ ಸಂತೋಷದ ಸಂಗತಿಯಲ್ಲ ಎಂದು ನಾವು ಭರವಸೆ ನೀಡಲು

ಪುಟ 14 ನೋಡಿ

ಹಸಿವಿನ ಸೂಚ್ಯಂಕದಲ್ಲಿ ಭಾರತದ ಪರಿಸ್ಥಿತಿ 2020ರಲ್ಲೂ 'ಗಂಭೀರ'!

ನ್ಯೂ ಇಂಡಿಯಾದಲ್ಲಿ...

ಜಾಗತಿಕ ಹಸಿವಿನ ಸೂಚ್ಯಂಕ 2020 ಪ್ರಕಟವಾಗಿದ್ದು ಅದರ ಪ್ರಕಾರ ಭಾರತದ ಸ್ಥಾನ 107 ದೇಶಗಳಲ್ಲಿ 94ನೇಯದು.

ಈ ಅಧ್ಯಯನದ ಪ್ರಕಾರ ದೇಶದ 14ಶೇ. ಮಂದಿ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ದಕ್ಷಿಣ ಏಷ್ಯಾದ ಎಲ್ಲ ನಮ್ಮ ನೆರೆ ದೇಶಗಳಿಗಿಂತ ಭಾರತ ಹಸಿವಿನ ಸೂಚ್ಯಂಕದಲ್ಲಿ ಕೆಳಗೆ ಇದೆ.

ಅಫಘಾನಿಸ್ತಾನ ಬಿಟ್ಟು ಬೇರೆಲ್ಲ ದಕ್ಷಿಣ ಏಷ್ಯಾದ ನಮ್ಮ ನೆರೆದೇಶಗಳ ಹಸಿವಿನ ಸೂಚ್ಯಂಕ ನಮಗಿಂತ ಉತ್ತಮವಾಗಿದೆ. ಶ್ರೀಲಂಕಾ (64); ನೇಪಾಳ(73); ಬಾಂಗ್ಲಾದೇಶ(75); ಮ್ಯಾನ್ಮರ್(78); ಪಾಕಿಸ್ತಾನ(88); ಅಫಘಾನಿಸ್ತಾನ(99).

ನೇಪಾಳ ಮತ್ತು ಶ್ರೀಲಂಕಾ 'ಮಿತಹಸಿವು' ವಿಧದಲ್ಲಿ ಇದ್ದರೆ, ಭಾರತವೂ ಸೇರಿದಂತೆ ಉಳಿದ ಎಲ್ಲ ದಕ್ಷಿಣ ಏಷ್ಯಾದ ದೇಶಗಳು 'ಗಂಭೀರ ಹಸಿವು' ವಿಧದಲ್ಲಿವೆ.

ಈ ಸೂಚ್ಯಂಕದ ವರದಿಯ ಇತರ ಕೆಲವು ಅಂಶಗಳೂ ಆತಂಕಕಾರಿ. ಮಕ್ಕಳ ಎತ್ತರಕ್ಕೆ ಹೋಲಿಸಿದರೆ ಕಡಿಮೆ ತೂಕ ಇರುಉವದನ್ನು 'ವೇಸ್ಟಿಂಗ್' ಅಂದರೆ 'ವ್ಯರ್ಥಗೊಳಿಸುವುದು' ಎನ್ನಲಾಗುತ್ತದೆ. ಇದು ಮಕ್ಕಳಲ್ಲಿ ತೀವ್ರ ಅಪೌಷ್ಟಿಕತೆಯನ್ನು ಸೂಚಿಸುತ್ತದೆ. ಭಾರತದಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ 17.3ಇ. ಇಂತಹ ಮಕ್ಕಳಿದ್ದಾರೆ. 'ಸ್ಟಂಟಿಂಗ್' ಅತರೆ 'ಕುಂಠಿತತೆ'ಎಂದರೆ ವಯಸ್ಸಿಗೆ ತಕ್ಕ ತೂಕ ಹೊಂದಿರದಿರುವುದು. ಇದು ತೀವ್ರ ಅಪೌಷ್ಟಿಕತೆಯ ಇನ್ನೊಮದು ಸೂಚಕ. ಈ ವರದಿಯ ಪ್ರಕಾರ ಭಾರತದಲ್ಲಿ ಇಂತಹ ಮಕ್ಕಳ ಪ್ರಮಾಣ 37.4ಶೇ.

ಬಾಂಗ್ಲಾದೇಶ, ಭಾರತ ,ನೇಪಾಳ ಮತ್ತು ಪಾಕಿಸ್ತಾನ 1991ರಿಂದ 2014ರ ವರೆಗಿನ ದತ್ತಾಂಶಗಳು ಈ ಸ್ಟಂಟಿಂಗ್ ಅಥವ ಕುಂಠಿತತೆ ಬಹುವಿಧ ವಂಚನೆಗೊಳಗಾಗಿರುವ ಕುಟುಂಬಗಳಲ್ಲಿ ಕಂಡು ಬರುತ್ತದೆ– ಅಂದರೆ ಆಹಾರಸೇವನೆಯಲ್ಲಿ ವೈವಿಧ್ಯತೆ ಇಲ್ಲದಿರುವುದು, ತಾಯಿಯ ಶಿಕ್ಷಣ ಮಟ್ಟ ಬಹಳ ಕೆಳಗಿರುವುದು, ಮತ್ತು ಒಟ್ಟಾರೆ ಕುಟುಂಬದ ಬಡತನ.

ತಮ್ಮ ಆದಾಯದ ಮೂರನೇ ಒಂದು ಭಾಗವನ್ನು ಮಾತ್ರ ಆಹಾರೇತರ ಖರ್ಚುಗಳಿಗೆ ಇಟ್ಟರೆ, **76ಶೇ.ಗ್ರಾಮೀಣ ಭಾರತೀಯರಿಗೆ ಪೌಷ್ಟಿಕ ಊಟ ಪಡೆಯಲಾಗುತ್ತಿಲ್ಲ ಎಂದು ಇನ್ನೊಂದು 'ಫುಡ್ ಪಾಲಿಸಿ ಪತ್ರಿಕೆಯ ವರದಿ ಹೇಳುತ್ತದೆ**(ದಿ ಹಿಂದು ಅಕ್ಟೋಬರ್ 18). 63.3.ಶೇ. ಅಂದರೆ ಸುಮಾರು 52 ಕೋಟಿ ಗ್ರಾಮೀಣ ಬಡವರಿಗೆ ತಮ್ಮೆಲ್ಲ ಆದಾಯವನ್ನೂ ಆಹಾರಕ್ಕೆ ಖರ್ಚುಮಾಡಿದರೂ ಪೌಷ್ಟಿಕ ಊಟ ಸಿಗಲಾರದು ಎಂದು ಈ ಅಧ್ಯಯನ ಹೇಳುತ್ತದೆ.

ಹಸಿವಿನ ಸೂಚ್ಯಂಕಕ್ಕಿಂತ ಸ್ವಲ್ಪವೇ ಮೊದಲು ಬಾಂಗ್ಲಾದೇಶದ ತಲಾ ಜಿಡಿಪಿ ಭಾರತದ ತಲಾ ಜಿಡಿಪಿಯನ್ನು ದಾಟಿ ಹೋಗಿದೆ ಎಂಬ ಸುದ್ದಿ ಪ್ರಕಟವಾಗಿತ್ತು. ಆಗ ಮೋದಿ ಸರಕಾರ ಹಣದುಬ್ಬರವನ್ನು ಗಣನೆಗೆ ತಗೊಂಡರೆ ಭಾರತದ ತಲಾ ಜಿಡಿಪಿ ಈಗಲೂ ಬಾಂಗ್ಲಾದೇಶಕ್ಕಿಂತ ಹೆಚ್ಚಿದೆ ಎಂದು ಸಮಜಾಯಿಷಿ ಕೊಡುವ ಮಟ್ಟಕ್ಕೆ ಇಳಿಯಬೇಕಾಗಿ ಬಂತು.

ಆದರೆ ಹಸಿವಿನ ಸೂಚ್ಯಂಕದ ವಿಷಯದಲ್ಲಿ ಅಂತಹ ಸಮಜಾಯಿಷಿಯೂ ಈ ಸರಕಾರಕ್ಕೆ ಸಿಕ್ಕಿಂತೆ ಕಾಣುತ್ತಿಲ್ಲ. ಭಾರತ ಕಳೆದ ವರ್ಷ 117 ದೇಶಗಳಲ್ಲಿ 102ನೇ ಸ್ಥಾನದಲ್ಲಿತ್ತು. ಅಂದರೆ ನಮ್ಮ ಕೆಳಗೆ 15 ದೇಶಗಳಿದ್ದವು; ಈ ಬಾರಿ ನಮ್ಮ ಕೆಳಗಿರುವ ದೇಶಗಳು 13. ಆದ್ದರಿಂದ 102 ರಿಂದ 94ಕ್ಕೇರಿದೆಯಲ್ಲಾ ಎಂಬ ಸಮಜಾಯಿಷಿ ಕೊಡುವಂತೆಯೂ ಇಲ್ಲ.

ಗಮನಿಸಬೇಕಾದ ಸಂಗತಿಯೆಂದರೆ, ಎರಡು ವರ್ಷಗಳ ಹಿಂದೆಯಷ್ಟೇ, ಭಾರತದ ಗೃಹಮಂತ್ರಿಗಳು ನೆರೆದೇಶದ 'ನುಸುಳುಕೋರರು' ನಮ್ಮ ದೇಶವನ್ನು ಗೆದ್ದಲುಗಳಂತೆ ಕೊರೆಯುತ್ತಿದ್ದಾರೆ ಎಂದಿದ್ದರು. ಆ ನೆರೆದೇಶ ಬಾಂಗ್ಲಾದೇಶ ಎಂಬುದರಲ್ಲಿ ಸಂದೇಹವಿರಲಿಲ್ಲ. ಆದ್ದರಿಂದ ಬಾಂಗ್ಲಾದೇಶದ ಮಂತ್ರಿಯೊಬ್ಬರು ಭಾರತದ ಗೃಹಮಂತ್ರಿಗಳ ಹೇಳಿಕೆ "ಅಸೂಕ್ತ', 'ಅನಗತ್ಯವಾದದ್ದು' ಮತ್ತು 'ತಥ್ಯಗಳ ಮೇಲೆ ಆಧರಿಸಿಲ್ಲ"ಎಂದು ಪ್ರತ್ಯುತ್ತರ ನೀಡಿದ್ದರು. ಈಗ ಐಎಂಎಫ್ ಬಾಂಗ್ಲಾದೇಶದ ತಲಾ ಜಿಡಿಪಿಯ ಬಗ್ಗೆ ಹೇಳಿರುವುದು ನಮ್ಮ ಗೃಹಮಂತ್ರಿಗಳ ಬಗ್ಗೆ ಬಾಂಗ್ಲಾ ದೇಶದ ಮಂತ್ರಿಗಳು ಹೇಳಿದ್ದು ನಿಜ ಎಂಬುದನ್ನು ಸಾಬೀತು ಮಾಡಿದೆ. ವಾಸ್ತವವಾಗಿ ನಮ್ಮ ಗೃಹಮಂತ್ರಿಗಳ 'ಗೆದ್ದಲು' ಹೇಳಿಕೆಯ ವೇಳೆಯಲ್ಲಾಗಲೇ ಬಾಂಗ್ಲಾದೇಶ ಹಲವು ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಮುಂದಿತ್ತು.


ಹಸಿವು ಸೂಚ್ಯಂಕ 2020: "ನಾವೂ ಮಾಡಬಹುದು'
(ಬಾಂಗ್ಲಾದೇಶ್‌ನಂತೆ ಭಾರತಕ್ಕಿಂತ ಮೇಲೆ ಹೋಗಬಹುದು!)



ವ್ಯಂಗ್ಯಚಿತ್ರ ಕೃಪೆ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ

2014ರ ಭಾರತದ 'ವಿಕಾಸ್' ಈಗ ಬಾಂಗ್ಲಾದೇಶದಲ್ಲಿ!

ವಿಕಾಸ್ ಸಿಕ್ಕಿದ ಸಾರ್! ಅವನೀಗ
ಬಾಂಗ್ಲಾದೇಶದಲ್ಲಿ ಒಬ್ಬ ಎನ್‌ಆರ್‌ಐ ಆಗಿದ್ದಾನೆ!!



ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿಗೆ ಲಾಕ್‌ಡೌನಿನ ನಂತರದ ಪ್ರತಿ ಗಂಟೆಯಲ್ಲಿ ೯೦ ಕೋಟಿ ರೂ. ಗಳಿಕೆ!

ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿ ಮುಕೇಶ್ ಅಂಬಾನಿ ಈ ವರ್ಷದ ಮಾರ್ಚ್ ತಿಂಗಳಲ್ಲಿ ಹಾಕಿದ ಲಾಕ್‌ಡೌನ್ ನಂತರ ಪ್ರತಿ ಒಂದು ಗಂಟೆಯಲ್ಲಿ 90 ಕೋಟಿ ರೂ.ಗಳಿಸಿದ್ದಾರೆ ಎಂದು ಐಐಎಫ್‌ಎಲ್ ಹುರುನ್ ಇಂಡಿಯ ರಿಚ್ ಲಿಸ್ಟ್ 2020 ಹೇಳಿದೆ(ಮಿಂಟ್, ಸಪ್ಟಂಬರ್ 29, 2020).

ಮುಕೇಶ್ ಅಂಬಾನಿಯ ವೈಯಕ್ತಿಕ ಸಂಪತ್ತು ರೂ.2,77,700 ಕೋಟಿಯಿಂದ ರೂ.6,58,400 ಕೋಟಿಗೆ ಏರಿದೆಯಂತೆ, ಅಂದರೆ ಕಳೆದ ಒಂದು ವರ್ಷದಲ್ಲಿ 73%ದಷ್ಟು ಏರಿದೆ.

ಕೊರೊನ ಮಹಾಸೋಂಕಿನ ಆರಂಭದಲ್ಲಿ ಇವರ ಸಂಪತ್ತಿನಲ್ಲಿ 28% ಇಳಿಕೆಯಾಯಿತು. ನಂತರ ಹಲವಾರು ನಿಧಿಸಂಗ್ರಹ ಮತ್ತು ಫೇಸ್‌ಬುಕ್, ಗೂಗಲ್, ಸಿಲ್ವರ್ ಲೇಕ್ ಮುಂತಾದವುಗಳಿಂದ ಜಿಯೊ ಮತ್ತು ರಿಲಯನ್ಸ್ ರಿಟೇಲ್ ನಲ್ಲಿ ಹೂಡಿಕೆಗಳಿಂದಾಗಿ ಕೇವಲ ನಾಲ್ಕು ತಿಂಗಳಲ್ಲಿ ಅವರ ಸಂಪತ್ತಿನ ಮೌಲ್ಯ 85ಶೇ.ದಷ್ಟು ಉತ್ತಮಗೊಂಡಿತು. ಮತ್ತು ರಿಲಯನ್ಸ್‌ನ ಮಾರುಕಟ್ಟೆ ಬಂಡವಾಳ 10ಲಕ್ಷ ಕೋಟಿ ರೂ. ಗಳನ್ನು ದಾಟಿ ಮುಕೇಶ್ ಅಂಬಾನಿಯ ಸಂಪತ್ತಿನಲ್ಲಿ 73% ಏರಿಕೆ ದಾಖಲಿಸಿದೆ ಎಂದು ಹುರುನ್ ಇಂಡಿಯ ಹೇಳಿದೆ.

ಈ ಮೂಲಕ ಭಾರತದ ಈ ಅತ್ಯಂತ ಶ್ರೀಮಂತ ವ್ಯಕ್ತಿ ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿಯೂ ಆಗಿದ್ದಾರೆ ಮತ್ತು ಜಗತ್ತಿನಲ್ಲೇ ನಾಲ್ಕನೇ ಅತ್ಯಂತ ಶ್ರೀಮಂತ ವ್ಯಕ್ತಿಯ ಸ್ಥಾನಕ್ಕೇರಿದ್ದಾರೆ ಎಂದು ಹುರುನ್ ಇಂಡಿಯ ತಿಳಿಸಿದೆ.

ಈ ಹುರುನ್ ಇಂಡಿಯ ಪಟ್ಟಿ ಆಗಸ್ಟ್ 31 ರ ವೇಳೆಗೆ ಭಾರತದ 1000 ಕೋಟಿ ರೂ. ಗಿಂತ ಹೆಚ್ಚಿನ ಸಂಪತ್ತಿರುವ ವ್ಯಕ್ತಿಗಳ ಪಟ್ಟಿ ತಯಾರಿಸುತ್ತದೆ. ಇದರ 2020ರ ಆವೃತ್ತಿಯಲ್ಲಿ 1000 ಕೋಟಿ ರೂ. ಗಿಂತ ಹೆಚ್ಚು ಸಂಪತ್ತಿರುವ ಶ್ರೀಮಂತರ ಸಂಖ್ಯೆ 828.

ಮತದಾರರಿಗೆ ಪುಕ್ಕಟೆ ಚುಚ್ಚುಮದ್ದು–ಧೋರಣೆಯ ಪ್ರಕಟಣೆಯೋ, ಚುನಾವಣಾ ಆಮಿಷವೋ?

ಬಿಜೆಪಿ ತನ್ನ ಬಿಹಾರ ವಿಧಾನಸಭಾ 'ಸಂಕಲ್ಪ ಪತ್ರ'ದಲ್ಲಿ ಮತದಾರರಿಗೆ ಪುಕ್ಕಟೆಯಾಗಿ ಕೊವಿಡ್ ಚುಚ್ಚು ಮದ್ದನ್ನು ಕೊಡುವ ಆಶ್ವಾಸನೆ ನೀಡಿದೆ. ಇದು ಮೋದಿ–ಷಾ ಜೋಡಿಯ ಇನ್ನೊಂದು ಮಾಸ್ಟರ್ ಸ್ಟ್ರೋಕ್ ಎಂದು ಹೇಳಲಾಗಿದೆ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆಯೇ ಮುರಿದು ಬಿದ್ದಿರುವ ಬಿಹಾರದ ಜನಸಾಮಾನ್ಯರಿಗೆ ಇದರಿಂದ ಪ್ರಯೋಜನ ಸಿಗುತ್ತೋ, ಇಲ್ಲವೋಎಂದು ಹಲವರಿಗೆ ಸಂದೇಹವಿದೆ, ಆದರೆ ಬಿಜೆಪಿಯಂತೂ ಇದು ಚುನಾವಣಾ ಪ್ರಚಾರದಲ್ಲಿ ತಕ್ಷಣವೇ ಶಕ್ತಿ ತುಂಬುವ ಚುಚ್ಚು ಮದ್ದು ಎಂಬ ಭರವಸೆ ಇಟ್ಟುಕೊಂಡಿದೆಯಂತೆ.

ಇದು ಚುನಾವಣಾ ಮಾದರಿ ನೀತಿ ಸಂಹಿತೆಯ, ಚುನಾವಣಾ ಆಯೋಗದ ಮಾರ್ಗದರ್ಶನ ಸೂತ್ರಗಳ ಉಲ್ಲಂಘನೆಯಲ್ಲವೇ ಎಂದು ದೇಶಾದ್ಯಂತ ಹಲವರು ಹುಬ್ಬೇರಿಸಿದ್ದಾರೆ.

ಇಲ್ಲ, ಇದು ಒಂದು ಸಾರ್ವಜನಿಕ ಧೋರಣೆಯ ಪ್ರಕಟಣೆ, ಯಾವುದೇ ರಾಜಕೀಯ ಪಕ್ಷ ಇಂತಹ ಪ್ರಕಟಣೆ ನೀಡಬಹುದು, ಎಂದು ಆಯೋಗದ ಮೂಲಗಳು ಅಭಿಪ್ರಾಯ ಪಟ್ಟಿರುವುದಾಗಿ ಪತ್ರಿಕೆಗಳು ವರದಿ ಮಾಡಿವೆ. 'ಆರೋಗ್ಯ ಒಂದು ರಾಜ್ಯಪಟ್ಟಿಯಲ್ಲಿರುವ ವಿಷಯ' ಎಂದು ಕೇಂದ್ರ ಹಣಕಾಸು ಮಂತ್ರಿಗಳು ಬಿಹಾರದ ಜನತೆಗೆ ಬಿಜೆಪಿಯ ಚುನಾವಣಾ ಆಶ್ವಾಸನೆಯನ್ನು ಸಮರ್ಥಿಸಿಕೊಳ್ಳುತ್ತ ಸೇರಿಸಿದ್ದಾರೆ. ಆಯೋಗ ಮೌನವಾಗಿದೆ.

ಅದರಿಂದ ಏಳುವ ಪ್ರಶ್ನೆಗಳು ಹಲವು– ಬಿಹಾರದ ಜನತೆಗಾಯ್ತು, ಭಾರತದ ಉಳಿದವರಿಗೆ? ಅವರಿಗೆ ಬೆಲೆ ತೆತ್ತರೆ ಮಾತ್ರವೇ ಚುಚ್ಚುಮದ್ದು? ಬೆಲೆಯ ಮೇಲೆ ಸಬ್ಸಿಡಿಯಾದರೂ ಇರುತ್ತದೆಯೇ ಇತ್ಯಾದಿ.

ದೇಶದ ಎಲ್ಲರಿಗೂ ಇಂತಹ ಜೀವ ಉಳಿಸುವ ಚುಚ್ಚುಮದ್ದುಗಳನ್ನು ಪುಕ್ಕಟೆಯಾಗಿ ಒದಗಿಸುವ ಕೆಲಸವನ್ನು ದೇಶ ಸ್ವತಂತ್ರವಾದಂದಿನಿಂದ ಭಾರತ ಸರಕಾರ ಮಾಡುತ್ತ ಬಂದಿದೆ–ಅದು ಸಿಡುಬು ಇರಬಹುದು, ಕ್ಷಯ ಇರಬಹುದು, ಪೋಲಿಯೋ ಇರಬಹುದು. ಇದು ಸರಕಾರದ ಮೆಹರ್‌ಬಾನಿಯೇನೂ ಅಲ್ಲ, ಅದರ ಕರ್ತವ್ಯ ಎಂದು ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಅದೇನೇ ಇರಲಿ, ಅಕ್ಟೋಬರ್ 28, ನವಂಬರ್ 3 ಮತ್ತು ನವಂಬರ್ 7ರಂದು ಬಿಹಾರದ ಮತಗಟ್ಟೆಗಳಲ್ಲಿನ ದೃಶ್ಯ ಹೀಗಿರಬಹುದೇ?



ಇಲ್ಲ! ಇಲ್ಲ! ಇಂಕ್ ಮಾರ್ಕ್ ಬೆರಳ ಮೇಲಷ್ಟೇ!

ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ


ಹಾಥ್ರಸ್ ಕಾಂಡ: ಒಂದು ತಿಂಗಳಾದ ಮೇಲೆ.........

ಹಾಥ್ರಸ್ ಕಾಂಡ ನಡೆದು ಅಕ್ಟೋಬರ್ 29 ಕ್ಕೆ ಒಂದು ತಿಂಗಳಾಯಿತು.. ನ್ಯಾಯ ಸಿಗುವ ಲಕ್ಷಣಗಳು ಇನ್ನೂ ಸ್ಪಷ್ಟವಾಗಿ ಕಾಣುತ್ತಿಲ್ಲವಾದ್ದರಿಂದ ದಲಿತ ಶೋಷಣ ಮುಕ್ತಿ ಮಂಚ್ ಕರೆಯ ಮೇರೆಗೆ ದೇಶದ ಹಲವೆಡೆಗಳಲ್ಲಿ 'ನ್ಯಾಯ ಮಾಂಗೋ ದಿವಸ್' ಕಾರ್ಯಕ್ರಮಗಳು ನಡೆದಿವೆ.

ಈ ನಡುವೆ ತನ್ನ ಎಫ್‌ಐಆರ್‌ನ್ನೇ ತನ್ನ ವೆಬ್‌ತಾಣದಿಂದ ತೆಗೆದ ಸಿಬಿಐ ತನಿಖೆ ಅಲಹಾಬಾದ್ ಹೈಕೋರ್ಟಿನ ಉಸ್ತುವಾರಿಯಲ್ಲಿ ನಡೆಯಬೇಕು ಎಂದು ಸುಪ್ರಿಂ ಕೋರ್ಟ್, ತನಿಖೆ ಮಾತ್ರವಲ್ಲ, ಈ ಕಾಂಡದ ಎಲ್ಲ ಅಂಶಗಳನ್ನು ಹೈಕೋರ್ಟಿಗೆ ಒಪ್ಪಿಸಿದೆ. ಬಲಿಯಾದ ಬಾಲಕಿಯ ಕುಟುಂಬಕ್ಕೆ ಮತ್ತು ಸಾಕ್ಷಿಗಳಿಗೆ ಸಿಆರ್‌ಪಿಎಫ್(ಕೇಂದ್ರೀಯ ಮೀಸಲು ಪೋಲೀಸ್ ಪಡೆಯ ರಕ್ಷಣೆ ಒದಗಿಸಬೇಕು ಎಂದೂ ಸರ್ವೋಚ್ಚ ನ್ಯಾಯಾಲಯ ನಿರ್ದೇಶನ ನೀಡಿದೆ.

ಅದು ಈ ಪ್ರಕರಣದ ಬಗ್ಗೆ ನ್ಯಾಯಾಲಯದ ಉಸ್ತುವಾರಿಯ ತನಿಖೆ ನಡೆಸಬೇಕು, ಕುಟುಂಬಕ್ಕೆ ರಕ್ಷಣೆ ನೀಡಬೇಕು ಮತ್ತು ದಿಲ್ಲಿಗೆ ವಿಚಾರಣೆಯ ಸ್ಥಳಾಂತರಿಸಬೇಕು ಎಂದು ಕೇಳಿದ ಹಲವಾರು ಅರ್ಜಿಗಳ ಮೇಲೆ ಈ ಆದೇಶವನ್ನು ನೀಡಿದೆ. ವಿಚಾರಣೆಯನ್ನು ಉತ್ತರಪ್ರದೇಶದಿಂದ ದಿಲ್ಲಿಗೆ ವರ್ಗಾಯಿಸುವುದನ್ನು ತನಿಖೆ ಮುಗಿದ ಮೇಲೆ ಪರಿಶೀಲಿಸಲಾಗುವುದು ಎಂದು ಅದು ಹೇಳಿದೆ.

ಬಿಲಿಯನೇರ್‌ಗಳ ಸಂಪತ್ತು ಕೊರೊನಾ ಕಾಲದಲ್ಲೂ ಏರುತ್ತದೆ!



ಏಪ್ರಿಲ್–ಜುಲೈನ ಕೊವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಭಾರತವೂ ಸೇರಿದಂತೆ ದೇಶ ದೇಶಗಳಲ್ಲಿ ಬಿಕಯಾಧಿಪತಿಗಳ ಸಂಪತ್ತು ಹೆಚ್ಚಿದೆ, ಭಾರತದ ಬಿಲಿಯಾಧಿಪತಿಗಳ ಸಂಪತ್ತು ಶೇ.35ರಷ್ಟು ಏರಿಕೆಯಾಗಿ 423 ಶತಕೋಟಿ ಡಾಲರ್‌ಗೆ ತಲುಪಿದೆ. ಇದೇ ಅವಧಿಯಲ್ಲಿ, ಉತ್ಪಾದನೆ (ಜಿಡಿಪಿ) ಕಾಲು ಭಾಗದಷ್ಟು ಕುಗ್ಗಿದೆ. ಅದೇ ರೀತಿಯಲ್ಲಿ ಉದ್ಯೋಗಗಳೂ ಕುಸಿದಿವೆ. ಪರಸ್ಪರ ವಿರುದ್ಧವಾಗಿರುವ ಈ ಅಂಶಗಳು ಕೆಲವರು ಭಾವಿಸುವಂತೆ ವಿಪರ್ಯಾಸವಲ್ಲ, ಇವು ಬಂಡವಾಳಶಾಹಿಯ ಕಾರ್ಯವೈಖರಿಯ ಹೆಗ್ಗುರುತುಗಳಾಗಿವೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಸಂಪತ್ತಿನ ಹಂಚಿಕೆಯ ದತ್ತಾಂಶಗಳನ್ನು ವ್ಯಾಖ್ಯಾನಿಸುವುದು ಬಲು ಕಷ್ಟದ ಕೆಲಸ. ಏಕೆಂದರೆ, ಷೇರುಗಳ ಬೆಲೆಗಳ ಏರಿಳಿತಗಳು ಸಂಪತ್ತಿನ ಹಂಚಿಕೆಯ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿ, ಷೇರು ಮಾರುಕಟ್ಟೆಯು ಏರಿದಾಗ ಶ್ರೀಮಂತರು ಹೆಚ್ಚು ಶ್ರೀಮಂತರಾಗಿ ಕಾಣುತ್ತಾರೆ ಮತ್ತು ಮಾರುಕಟ್ಟೆಯು ಕುಸಿದಾಗ ಅವರ ಶ್ರೀಮಂತಿಕೆಯೂ ಬೆಳಗಾಗುವುದರಲ್ಲಿ ಸಾಕಷ್ಟು ಕುಸಿದಿರುತ್ತದೆ. ಆದರೆ, ಶ್ರೀಮಂತರು ತಮ್ಮ ಸಂಪತ್ತಿನ ಒಂದು ಭಾಗವನ್ನು ಮಾತ್ರ ಷೇರುಗಳ ರೂಪದಲ್ಲೂ ಮತ್ತು ಉಳಿದ ಭಾಗವನ್ನು ಭೂಮಿ, ಬಂಗಾರ ಮುಂತಾದ ಸ್ಥಿರ ರೂಪದಲ್ಲೂ ಹೊಂದಿರುತ್ತಾರೆ. ಷೇರುಗಳ ರೂಪದ ಸಂಪತ್ತಿಗೆ ಕರಗಿ ಹೋಗುವ ಸಾಧ್ಯತೆ ಇದೆ.

ಸಂಪತ್ತಿನ ಹಂಚಿಕೆಯ ಬಗ್ಗೆ ಖಚಿತ ಅಭಿಪ್ರಾಯಗಳನ್ನು ಹೇಳಬಹುದಾದ ಕೆಲವು ಸಂದರ್ಭಗಳಿರುತ್ತವೆ. ಕೊರೊನಾ ಸಾಂಕ್ರಾಮಿಕದ ಅವಧಿಯು ಅಂತಹ ಒಂದು ಸಂದರ್ಭವಾಗಿದೆ. ಈ ಸಾಂಕ್ರಾಮಿಕದ ಕಾರಣದಿಂದಾಗಿ ಜಗತ್ತಿನಾದ್ಯಂತ ಕೋಟಿ ಕೋಟಿ ಮಂದಿ ದುಡಿಯುವವರು ಉದ್ಯೋಗ ಕಳೆದುಕೊಂಡು ಆದಾಯವಿಲ್ಲದೆ ನರಳುತ್ತಿದ್ದ ಸಮಯದಲ್ಲಿ, ವಿಶ್ವದ ಬಿಲಿಯನೇರ್‌ಗಳು (ನೂರು ಕೋಟಿಗೂ ಅಧಿಕ ಡಾಲರ್, ಅಂದರೆ ಸುಮಾರು 7500 ಕೋಟಿ ರೂ. ಮೌಲ್ಯದ ಸಂಪತ್ತು ಹೊಂದಿರುವವರು) ತಮ್ಮ ಸಂಪತ್ತನ್ನು ಅಪಾರವಾಗಿ ಹೆಚ್ಚಿಸಿಕೊಂಡರು ಎಂಬುದರಲ್ಲಿ ಸಂಶಯವಿಲ್ಲ. ಇದು ಜಗತ್ತಿನಲ್ಲಿ ಸಂಪತ್ತಿನ ಅಸಮಾನತೆಯನ್ನು ಖಂಡಿತವಾಗಿಯೂ ಹೆಚ್ಚಿಸಿದೆ.

ಇಂಗ್ಲೆಂಡಿನ 'ದಿ ಗಾರ್ಡಿಯನ್' ಪತ್ರಿಕೆಯು ಅಕ್ಟೋಬರ್ 7ರಂದು ಪ್ರಕಟಿಸಿರುವ ಯುಬಿಎಸ್ ಎಂಬ ಸ್ವಿಸ್ ಬ್ಯಾಂಕಿನ ಒಂದು ಸಮೀಕ್ಷಾ ವರದಿಯ ಪ್ರಕಾರ, ಈ ವರ್ಷದ ಏಪ್ರಿಲ್–ಜುಲೈ ಅವಧಿಯಲ್ಲಿ, ಕೊರೊನಾ ಸಾಂಕ್ರಾಮಿಕವು ಇಡೀ ವಿಶ್ವವನ್ನೇ ತಲ್ಲಣಗೊಳಿಸಿದ ಸಮಯದಲ್ಲಿ, ವಿಶ್ವದ ಬಿಲಿಯನೇರ್‌ಗಳ ಸಂಪತ್ತು ಶೇ.27.5ರಷ್ಟು ಏರಿಕೆಯಾಗಿದೆ. ಜುಲೈ ತಿಂಗಳ ಅಂತ್ಯದ ವೇಳೆಗೆ ಅವರ ಸಂಪತ್ತು 10.2 ಟ್ರಿಲಿಯನ್ ಡಾಲರ್‌ಗಳ ದಾಖಲೆಯ ಗರಿಷ್ಠ ಮಟ್ಟದಲ್ಲಿತ್ತು. ಈ ಹಿಂದೆ, 2017ರ ಅಂತ್ಯದಲ್ಲಿ. ವಿಶ್ವದ ಬಿಲಿಯನೇರ್‌ಗಳ ಸಂಪತ್ತಿನ ಗರಿಷ್ಠ ಪ್ರಮಾಣವು 8.9 ಟ್ರಿಲಿಯನ್ ಡಾಲರ್ ಮಟ್ಟದಲ್ಲಿತ್ತು. ಆಗ ಇದ್ದ ಬಿಲಿಯನೇರ್‌ಗಳ ಸಂಖ್ಯೆಯಲ್ಲಿ ತುಸುವೇ ಏರಿಕೆ (2158 ರಿಂದ 2189) ಕಂಡು ಬಂದರೂ ಸಹ, ಅವರ ಸಂಪತ್ತಿನಲ್ಲಿ ಅಗಾಧ ಪ್ರಮಾಣದ ಏರಿಕೆಯಾಗಿದೆ. ವಾಸ್ತವವಾಗಿ, 2017ರ ಅಂತ್ಯದಿಂದ 2020ರ ಜುಲೈ ಅಂತ್ಯದ ವರೆಗಿನ ಅವಧಿಯಲ್ಲಿ ಬಿಲಿಯನೇರ್‌ಗಳ ತಲಾ ಸಂಪತ್ತು ಶೇ.13ರಷ್ಟು ಹೆಚ್ಚಾಗಿದೆ. ಆದಾಗ್ಯೂ, ಈ ಏರಿಕೆಯು ಎರಡು ಪರಸ್ಪರ ವಿರುದ್ಧ ಚಲನೆಗಳ ನಿವ್ವಳ ಫಲಿತಾಂಶವಾಗಿದೆ: ಏಪ್ರಿಲ್ 2020ರ ವರೆಗೆ ಕುಸಿತ ಮತ್ತು ನಂತರ ಜುಲೈ ಅಂತ್ಯದ ವರೆಗೆ ಶೇ. 27.5ರ ಮಟ್ಟದ ತೀವ್ರ ಏರಿಕೆ.

ಈ ಏರಿಕೆಯಲ್ಲಿ ಒಂದು ನಿರ್ದಿಷ್ಟ ಮಹತ್ವವಿದೆ. ಒಟ್ಟು ಜನಸಂಖ್ಯೆಯಲ್ಲಿ ಬಹುತೇಕರು ಯಾವುದೇ ಸಂಪತ್ತನ್ನು ಹೊಂದಿಲ್ಲ ಮತ್ತು ಒಂದು ವೇಳೆ ಅವರು ಅಲ್ಪ ಸ್ವಲ್ಪ ಆಸ್ತಿ (ಸಂಪತ್ತು)ಯನ್ನು ಹೊಂದಿದ್ದರೆ ಅದರ ಮೌಲ್ಯವು, ಷೇರು ಮಾರುಕಟ್ಟೆ ಬೆಲೆಗಳಂತಲ್ಲದೆ, ಸ್ಥಿರವಾಗಿರುತ್ತದೆ. ಆದರೆ, ಷೇರು ಬೆಲೆಗಳ ಹೆಚ್ಚಳಗಳು ಹೆಚ್ಚಳದ ಕಾರಣದಿಂದಾಗಿಯೇ ಸಮಾಜದಲ್ಲಿ ಸಂಪತ್ತಿನ ಅಸಮಾನತೆಯನ್ನು ಹೆಚ್ಚಿಸುತ್ತವೆ. ಅದೇ ರೀತಿಯಲ್ಲಿ, ಷೇರು ಬೆಲೆಗಳ ಇಳಿಕೆಯು ಸಂಪತ್ತಿನ ಅಸಮಾನತೆಯನ್ನು ತಗ್ಗಿಸುತ್ತದೆ. ಹಾಗಾಗಿ, ಸಂಪತ್ತಿನ ಅಸಮಾನತೆಗಳ ಬದಲಾವಣೆಯ ಪ್ರಮಾಣವು ಎಷ್ಟೆಂಬುದನ್ನು ನಿಖರವಾಗಿ ಅಳೆಯುವುದು ಕಷ್ಟದ ಕೆಲಸವೇ.

ಸಂಪತ್ತಿನ ಅಸಮಾನತೆಗಳು ಏಪ್ರಿಲ್ ನಂತರದಲ್ಲಿ ಏರಿಕೆಯಾದ ಕತೆಯೇ ಬೇರೆ. ಯುಬಿಎಸ್ ವಕ್ತಾರರ ಪ್ರಕಾರ, 2020ರ ಏಪ್ರಿಲ್‌ಗೆ ಮೊದಲು ಷೇರು ಬೆಲೆಗಳು ಕುಸಿಯುತ್ತಿದ್ದಾಗ, ಬಿಲಿಯನೇರ್‌ಗಳು ಗಾಬರಿಯಲ್ಲಿ ತಮ್ಮ ಷೇರುಗಳನ್ನು ಮಾರಲಿಲ್ಲ ಮಾತ್ರವಲ್ಲ, ಬದಲಾಗಿ, ಗಾಬರಿ–ಮಾರಾಟದಲ್ಲಿ ತೊಡಗಿದ್ದ ಸಣ್ಣ ಸಣ್ಣ ಷೇರು ಹಿಡುವಳಿದಾರರಿಂದ ಷೇರುಗಳನ್ನು ಖರೀದಿಸಿದರು. ಪರಿಣಾಮವಾಗಿ, ಏಪ್ರಿಲ್ ನಂತರ ಷೇರು ಬೆಲೆಗಳು ಏರಿದಾಗ, ಈ ಬಿಲಿಯನೇರ್‌ಗಳು ಅಗಾಧ ಲಾಭಗಳಿಸಿದರು (ಬಂಡವಾಳ ವೃದ್ಧಿ). ಅವರು ಈ ಲಾಭಗಳಿಸಲು ಸಾಧ್ಯವಾದದ್ದು ಏಕೆಂದರೆ, ಸಣ್ಣ ಸಣ್ಣ ಷೇರು ಹಿಡುವಳಿದಾರರಿಗೆ ತಮ್ಮ ಷೇರುಗಳ ಬೆಲೆ ಕುಸಿಯುತ್ತಿದ್ದ ಸಮಯದಲ್ಲಿ ನಷ್ಟವನ್ನು ತಾಳಿಕೊಳ್ಳುವ ಸಾಮರ್ಥ್ಯವಿರಲಿಲ್ಲ. ಹೀಗಾಗಿ, ಈ ಸಾಂಕ್ರಾಮಿಕದ ಕಾಲದಲ್ಲಿ ಸಂಪತ್ತು ಕೆಲವೇ ಮಂದಿಯ ಕೈ ಸೇರಿತು – ಅದು ಕಡು ಬಡವರಿಂದ ಬಂದದ್ದಲ್ಲ, ಏಕೆಂದರೆ ಅವರ ಬಳಿ ಸಂಪತ್ತು ಇರಲೇ ಇಲ್ಲವಲ್ಲ. ಅದು ಬಂದದ್ದು, ಅಲ್ಪ ಸ್ವಲ್ಪ ಸಂಪತ್ತು ಹೊಂದಿದ್ದವರಿಂದ. ಷೇರುಗಳ ಬೆಲೆ ಏರಿಕೆಯಾದ ಕಾರಣದಿಂದ ಅವರ ಸಂಪತ್ತಿನ ಏರಿಕೆಯಾಗಲಿಲ್ಲ. ಅದೊಂದು ನಿರ್ದಿಷ್ಟ ಕ್ರಿಯೆಯ ಮೂಲಕ ಏರಿಕೆಯಾಯಿತು. ಈ ನಿರ್ದಿಷ್ಟ ಕ್ರಿಯೆಯನ್ನು ಮಾರ್ಕ್ಸ್, ಬಂಡವಾಳದ ಕೇಂದ್ರೀಕರಣ ಎಂದು ಕರೆದಿದ್ದರು.

ಸಾಮ್ರಾಜ್ಯಶಾಹಿಯ ಹಂತದಲ್ಲಿ ಬಂಡವಾಳಶಾಹಿಯ ಪ್ರತಿಯೊಂದು ಬಿಕ್ಕಟ್ಟೂ, ಅದು ಆರ್ಥಿಕ ಬಿಕ್ಕಟ್ಟೇ ಇರಲಿ ಅಥವಾ ರಾಜಕೀಯ ಬಿಕ್ಕಟ್ಟೇ ಇರಲಿ, ಬಂಡವಾಳವನ್ನು ಕೇಂದ್ರೀಕರಿಸುವ ಒಂದು ಸಂದರ್ಭವಾಗುತ್ತದೆ ಎಂದು ಲೆನಿನ್ ಹೇಳಿದ್ದರು. ಈಗ ನೋಡಿದರೆ, ಲೆನಿನ್ ಹೇಳಿದ್ದ ಆರ್ಥಿಕ, ರಾಜಕೀಯ ಬಿಕ್ಕಟ್ಟುಗಳ ಜೊತೆಗೆ ಆರೋಗ್ಯದ ಬಿಕ್ಕಟ್ಟನ್ನು, ಅಷ್ಟೇ ಏಕೆ, ಎಲ್ಲಾ ರೀತಿಯ ಬಿಕ್ಕಟ್ಟುಗಳನ್ನೂ ಸೇರಿಸಬೇಕಾಗುತ್ತದೆ.

ಬಂಡವಾಳವು ಕೇಂದ್ರೀಕೃತವಾಗುವ ಒಂದು ಮಾಮೂಲಿ ವಿಧಾನವೆಂದರೆ, ಬಿಕ್ಕಟ್ಟಿನ ಕಾಲದಲ್ಲಿ ಸಣ್ಣ ಸಣ್ಣ ಬಂಡವಾಳಗಾರರ ವಿನಾಶ. ಕಿರು ಉತ್ಪಾದಕರ ವಿನಾಶವೂ ಆಗುತ್ತದೆ. ಆದರೆ, ಅವರ ವಿನಾಶವನ್ನು ಬಂಡವಾಳ ಕೇಂದ್ರೀಕರಣ ಎಂದು ಕರೆಯುವುದರ ಬದಲಾಗಿ ಬಂಡವಾಳದ ಆದಿಮ ಶೇಖರಣೆ ಎಂಬ ಪದವನ್ನು ಬಳಸಲಾಗಿದೆ. ಹಾಗಾಗಿ, ಸಣ್ಣ ಬಂಡವಾಳಗಾರ ವಿನಾಶದಿಂದಾಗಿ ಅವರಿಗೆ ಸಾಲ ಕೊಟ್ಟ ಸಣ್ಣ ಬ್ಯಾಂಕುಗಳು ಅಥವಾ ಸಾಲ ಸಂಸ್ಥೆಗಳು ಒಂದೊ ಮುಳುಗುತ್ತವೆ ಇಲ್ಲವೇ ದೊಡ್ಡ ಕಂಪನಿಗಳು ಅವುಗಳನ್ನು ವಶಪಡಿಸಿಕೊಳ್ಳುತ್ತವೆ ಮಾತ್ರವಲ್ಲ ಅವುಗಳ ಕಾರ್ಯಕ್ಷೇತ್ರವನ್ನೂ ಆಕ್ರಮಿಸುತ್ತವೆ.

ಬಂಡವಾಳವು ಕೇಂದ್ರೀಕೃತವಾಗುವ ಈ ವಿಧಾನದ ಜೊತೆಗೆ, ಬಂಡವಾಳಗಳ ಬೃಹತ್ ಒಗ್ಗೂಡುವಿಕೆಯೂ ನಡೆಯುತ್ತದೆ. ಈ ಪ್ರಕ್ರಿಯೆಯಲ್ಲಿ ಬೃಹತ್ ಸಂಖ್ಯೆಯ ಸಣ್ಣ ಸಣ್ಣ ಬಂಡವಾಳದ ಸಂಸ್ಥೆಗಳು ಒಂದುಗೂಡಲು ಬ್ಯಾಂಕುಗಳು ಅಥವಾ ಷೇರು ಮಾರುಕಟ್ಟೆಗಳು ನೆರವಾಗುತ್ತವೆ. ಇದು ಕೇಂದ್ರೀಕರಣ ಪ್ರಕ್ರಿಯೆಯ ಮತ್ತೊಂದು ಪ್ರಭಾವಶಾಲಿ ಕಾರ್ಯವಿಧಾನ.

ಈ ಸಾಂಕ್ರಾಮಿಕದ ಕಾಲದಲ್ಲಿ ನಾವು ಕಂಡಿದ್ದೇನೆಂದರೆ, ಮೇಲೆ ತಿಳಿಸಿದ ಬಂಡವಾಳದ ಕೇಂದ್ರೀಕರಣ ಮತ್ತು ಬಂಡವಾಳಗಳ ಬೃಹತ್ ಒಗ್ಗೂಡುವಿಕೆ ಈ ಎರಡು ಪ್ರಕ್ರಿಯೆಗಳಿಗಿಂತ ಭಿನ್ನವಾದ ಮತ್ತೊಂದು ವಿಧಾನವೆಂದರೆ, ಷೇರು–ಬೆಲೆ ಕುಸಿತದ ಹೊಡೆತಗಳನ್ನು ಬಿಲಿಯನೇರ್‌ಗಳು ತಡೆದುಕೊಳ್ಳುವ ಸಾಮರ್ಥ್ಯ. ಆದರೆ, ಸಣ್ಣ ಸಣ್ಣ ಸಂಪತ್ತಿನ ಒಡೆಯರು ಅಸಮರ್ಥರಾಗಿರುತ್ತಾರೆ. ಬಿಲಿಯನೇರ್‌ಗಳ ಈ ಸಾಮರ್ಥ್ಯಕ್ಕೂ ಮತ್ತು ಬಂಡವಾಳಶಾಹಿ ಪುರಾಣಗಳು ಅವರು "ಧೈರ್ಯ" ಅಥವಾ "ತಾಕತ್ತು" ಅಥವಾ "ಉದ್ಯಮಶೀಲತೆ"ಗಳನ್ನು ಹೊಂದಿದ್ದಾರೆ ಎಂದು ಹೇಳುವುದಕ್ಕೂ ಸಂಬಂಧವೇ ಇಲ್ಲ. ಸರಳವಾಗಿ ಹೇಳುವುದಾದರೆ, ಬಿಲಿಯನೇರ್‌ಗಳ ಈ "ಸಾಮರ್ಥ್ಯ"ವು ಅವರ ಒಡೆತನದ ಸಂಸ್ಥೆಗಳ ದೊಡ್ಡ ಗಾತ್ರದ ಮೇಲೆ ನಿಂತಿದೆ.

ಬಿಲಿಯನೇರ್‌ಗಳ ಬೃಹತ್ ಗಾತ್ರದ ವಹಿವಾಟಿನ ಕಾರಣದಿಂದಾಗಿ ಅವರು ತಮ್ಮ ಸ್ಟಾಕ್–ಬೆಲೆ ಏರಿಳಿತಗಳನ್ನು ತಡೆದುಕೊಳ್ಳಬಹುದು. ಸಣ್ಣ ಸಣ್ಣ ಸಂಪತ್ತಿನ ಒಡೆಯರು ಅಸಮರ್ಥರಾಗಿರುವ ಕಾರಣದಿಂದಲೇ ಬಿಲಿಯನೇರ್‌ಗಳು ಬೃಹತ್ ಪ್ರಮಾಣದ ಲಾಭವನ್ನೂ ಮಾಡುತ್ತಾರೆ. ಸ್ಟಾಕ್–ಬೆಲೆ ಏರಿಳಿತಗಳನ್ನು ತಡೆದುಕೊಳ್ಳುವ ಅವರ ಸಾಮರ್ಥ್ಯವು ಅವರು ನಿಜಕ್ಕೂ "ರಿಸ್ಕ್–ತೆಗೆದುಕೊಳ್ಳುವವರು" ಆಗಿರದೆ, ನಿಖರವಾಗಿ ರಿಸ್ಕ್ ತೆಗೆದುಕೊಳ್ಳಲು ಹೆದರುವವರಾಗಿರುತ್ತಾರೆ.

ಬಿಲಿಯನೇರ್‌ಗಳು ರಿಸ್ಕ್ ತೆಗೆದುಕೊಳ್ಳದೆ ತಮ್ಮ ಸಂಪತ್ತನ್ನು "ರಕ್ಷಣೆ" ಮಾಡಿಕೊಳ್ಳುತ್ತಾರೆ. ತಮ್ಮ ಸಂಪತ್ತಿಗೆ ಒದಗಬಹುದಾದ ರಿಸ್ಕನ್ನು ಕಡಿಮೆ ಮಾಡಿಕೊಳ್ಳುವ ಉದ್ದೇಶದಿಂದ ಅವರು ತಮ್ಮ ಹಣವನ್ನು ಬೇರೆ ಬೇರೆ ರೂಪದ ಹೂಡಿಕೆಗಳಲ್ಲಿ ತೊಡಗಿಸುತ್ತಾರೆ. ಅಂತಹ ವೈವಿಧ್ಯಮಯ ಹೂಡಿಕೆಗಳಲ್ಲಿ ಷೇರು ಮಾರುಕಟ್ಟೆಯು ಒಂದು ಮಾತ್ರ. ಒಂದು ಅಭೂತಪೂರ್ವ ಬಿಕ್ಕಟ್ಟಿನಿಂದ ಷೇರು ಬೆಲೆಗಳು ಅಸಾಧಾರಣ ಮಟ್ಟಕ್ಕೆ ಕುಸಿದಾಗ, ಅವರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವುದಿಲ್ಲ. ಆದರೆ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ ಸಣ್ಣ ಸಣ್ಣ ಸಂಪತ್ತಿನ ಒಡೆಯರು ಇಂತಹ ಬಿಕ್ಕಟ್ಟಿನಿಂದ ಹಠಾತ್ತಾಗಿ ಹತಾಶೆಗೊಳಗಾಗಿ ತಮ್ಮ ಷೇರುಗಳನ್ನು ಅತ್ಯಂತ ಕಡಿಮೆ ಬೆಲೆಗೆ ಮಾರುತ್ತಾರೆ. ಬಿಲಿಯನೇರ್‌ಗಳು ಈ ಅವಕಾಶವನ್ನು ಬಳಸಿಕೊಂಡು ಅಗಾಧ ಲಾಭ ಗಳಿಸುತ್ತಾರೆ.

ಒಂದು ಉದಾಹರಣೆಯ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು. ಒಬ್ಬ ಸಣ್ಣ ಹೂಡಿಕೆದಾರನ ಬಳಿ 100 ರೂ ಗಳ ಸಂಪತ್ತು ಇದೆ ಎಂದುಕೊಳ್ಳೋಣ. ಅವನು ಅದನ್ನು ಹೆಚ್ಚು ಆದಾಯ ಕೊಡುವ ರೂಪದಲ್ಲಿ ಇಟ್ಟುಕೊಳ್ಳಲು ಬಯಸುತ್ತಾನೆ, ಅಂತಹ ಹೂಡಿಕೆಯಲ್ಲಿ ಅಸಲಿಗೇ ಅಪಾಯವಿದ್ದರೂ ಸಹ. ಇಂತಹ ಹೂಡಿಕೆಯೇ ಅವನ ಆದ್ಯತೆಯಾಗುತ್ತದೆ, ಏಕೆಂದರೆ, ಅವನು ರಿಸ್ಕ್ ತೆಗೆದುಕೊಳ್ಳಲು ಇಷ್ಟಪಡುತ್ತಾನೆ ಎಂದಲ್ಲ, ಅವನಿಗೆ ಆದಾಯದ ಅವಶ್ಯಕತೆ ವಿಪರೀತವಾಗಿರುತ್ತದೆ. ಆದ್ದರಿಂದ ಅವನು ತನ್ನ ಎಲ್ಲ ಸಂಪತ್ತನ್ನೂ (100 ರೂ) ಷೇರುಗಳಲ್ಲಿ ಹೂಡಿಕೆ ಮಾಡುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಒಬ್ಬ ಶ್ರೀಮಂತನ ಬಳಿ ಹತ್ತು ಲಕ್ಷ ರೂ ಗಳ ಸಂಪತ್ತು ಇದೆ ಎಂದುಕೊಳ್ಳೋಣ. ಅವನಿಗೆ ಈಗಾಗಲೇ ಸಾಕಷ್ಟು ಆದಾಯ ಬರುತ್ತಿದೆ. ಆದ್ದರಿಂದ, ಅವನು ತನ್ನ ಸಂಪತ್ತಿನ ಅರ್ಧ ಭಾಗವನ್ನು ಷೇರುಗಳಲ್ಲಿ ಹೂಡಿಕೆ ಮಾಡುತ್ತಾನೆ ಮತ್ತು ಉಳಿದ ಅರ್ಧ ಭಾಗವನ್ನು ಬ್ಯಾಂಕ್‌ನಲ್ಲಿ ಠೇವಣಿಯಾಗಿ ಹೂಡಿಕೆ ಮಾಡುತ್ತಾನೆ, ಬ್ಯಾಂಕ್ ಠೇವಣಿಯಿಂದ ಹೇಳಿಕೊಳ್ಳುವಂತಹ ವರಮಾನ ಬರದಿದ್ದರೂ ಸಹ. ಈಗ, ಷೇರು ಬೆಲೆಗಳು ಶೇ.10ರಷ್ಟು ಕುಸಿತವಾದರೆ, ಸಣ್ಣ ಹೂಡಿಕೆದಾರನಿಗೆ ತನ್ನ ಸಂಪತ್ತಿನಲ್ಲಿ ಶೇ.10ರಷ್ಟು ಖೋತಾ ಆಗುತ್ತದೆ. ಆದರೆ, ಶ್ರೀಮಂತನಿಗೆ ತನ್ನ ಸಂಪತ್ತಿನ ಕೇವಲ ಶೇ.5ರಷ್ಟು (ಅಂದರೆ, ತನ್ನ ಸಂಪತ್ತಿನ ಅರ್ಧ ಭಾಗದ 10% = 50,000) ನಷ್ಟವಾಗುತ್ತದೆ. ಈ ನಷ್ಟವನ್ನು ಶ್ರೀಮಂತನು ನುಂಗಿಕೊಳ್ಳಬಹುದು; ಸಣ್ಣ ಹೂಡಿಕೆದಾರ ನಷ್ಟವನ್ನು ನುಂಗಿಕೊಳ್ಳಲಾರ. ಹತಾಶೆಗೊಳಗಾದ ಸಣ್ಣ ಹೂಡಿಕೆದಾರನು ಇನ್ನು ಮುಂದೆ ಉಂಟಾಗಬಹುದಾದ ನಷ್ಟವನ್ನು ಕಡಿಮೆಮಾಡಿಕೊಳ್ಳುವ ಉದ್ದೇಶದಿಂದ ತನ್ನ ಷೇರುಗಳನ್ನು ಸಿಕ್ಕಷ್ಟು ಬೆಲೆಗೆ ಮಾರುತ್ತಾನೆ. ಅತಿ ಕಡಿಮೆ ಬೆಲೆಗೆ ದೊರಕುವ ಈ ಷೇರುಗಳನ್ನು ಶ್ರೀಮಂತನು ಕೊಳ್ಳುತ್ತಾನೆ ಮತ್ತು ಮಾರುಕಟ್ಟೆ ಹೆಚ್ಚು ಅನುಕೂಲಕರವಾಗುವವರೆಗೆ ಅವುಗಳನ್ನು ಹಿಡಿದಿಟ್ಟುಕೊಳ್ಳುತ್ತಾನೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಷೇರು ಮಾರುಕಟ್ಟೆಯ ಏರಿಳಿತಗಳು ಸಾಮಾನ್ಯವೇ. ಆದರೆ, ಒಂದು ಬಿಕ್ಕಟ್ಟು ಯಾವುದೇ ಕಾರಣದಿಂದ ಉಂಟಾಗಿರಲಿ, ಆ ಬಿಕ್ಕಟ್ಟಿನ ಸಂದರ್ಭದಲ್ಲಿ ಮಾರುಕಟ್ಟೆಯ ಕುಸಿತವು ತೀವ್ರವಾಗಿಯೇ ಇರುತ್ತದೆ.


ಪುಟ 14 ನೋಡಿ

ಕಳೆದ ವಾರ ಯುಬಿಎಸ್ ಮತ್ತು ಪಿಡಬ್ಲ್ಯುಸಿ ಪ್ರಕಟಿಸಿದ 'ಬಿಲಿಯನೇರ್ ಸೈಟ್ಸ್ ರಿಪೋರ್ಟ್ 2020' ರ ಪ್ರಕಾರ ಭಾರತದ ಬಿಲಿಯನೇರ್ (ಡಾಲರ್ ಶತಕೋಟ್ಯಾಧಿಪತಿ)ಗಳ ಸಂಪತ್ತಿನಲ್ಲಿ ಕೊವಿಡ್ ಕಾಲದ ಏಪ್ರಿಲ್ ಮತ್ತು ಜುಲೈ ನಡುವೆ 35ಶೇ. ಏರಿಕೆಯಾಗಿ ಅವರ ಒಟ್ಟು ಸಂಪತ್ತು 42 ಬಿಲಿಯ ಡಾಲರ್‌ಗೇರಿದೆ.

ಇದಕ್ಕೆ ಮೊದಲು, ಈ ತಿಂಗಳ ಆರಂಭದಲ್ಲಿ ಫೋರ್ಬ್ಸ್ ನ ಭಾರತೀಯ ಸೂಪರ್ ಶ್ರೀಮಂತರ 2020ರ ಪಟ್ಟಿ ಪ್ರಕಟವಾಗಿತ್ತು. ಅದರ ಪ್ರಕಾರ ದೇಶದ ಅತ್ಯಂತ ಶ್ರೀಮಂತ ವ್ಯಕ್ತಿ ಮುಕೇಶ ಅಂಬಾನಿಯ ಸಂಪತ್ತಿನ ಪ್ರಮಾಣದಲ್ಲಿ 73ಶೇ. ಏರಿಕೆಯಾಗಿ 89 ಬಿಲಿಯ ಡಾಲರ್(ಅಂದರೆ ಸುಮಾರು 6.5 ಲಕ್ಷ ಕೋಟಿರೂ.) ಆಗಿದೆ.

ಇದರಲ್ಲಿ ಅವರು ಪಿಎಂಕೇರ್ಸ್ ನಿಧಿಗೆ 500 ಕೋಟಿರೂ. ಮತ್ತು ಮಹಾರಾಷ್ಟ್ರ ಹಾಗೂ ಗುಜರಾತ್ ಮುಖ್ಯಮಂತ್ರಿಗಳ ನಿಧಿಗಳಿಗೆ ತಲಾ 5 ಕೋಟಿ ರೂ. 'ಉದಾರ ದಾನ' ನೀಡಿದ್ದಾರೆ.

ಇದಾದ ನಂತರ ಪ್ರಕಟವಾಗಿರುವ ಜಾಗತಿಕ ಹಸಿವಿನ ಸೂಚ್ಯಂಕ 2020 ರ ಪ್ರಕಾರ ಭಾರತದ ಸ್ಥಾನ 107 ದೇಶಗಳಲ್ಲಿ 94ನೇಯದು. ಅಂದರೆ ಅದು 'ತೀವ್ರ' ಹಸಿವಿನ ವಿಧದಲ್ಲೇ ಇದೆ.



ವ್ಯಂಗ್ಯಚಿತ್ರ ಕೃಪೆ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಬಿಲಿಯನೇರ್‌ಗಳ ಸಂಪತ್ತು ....

ಪುಟ 13 ರಿಂದ

ಇಂತಹ ಸಂದರ್ಭಗಳಿಗಾಗಿಯೇ ಹದ್ದಿನಂತೆ ಕಾಯುತ್ತಿರುತ್ತಾರೆ ದೊಡ್ಡ ಹೂಡಿಕೆದಾರರು, ಸಣ್ಣ ಪುಟ್ಟ ಹೂಡಿಕೆದಾರರನ್ನು ನುಂಗಲು. ಬಿಕ್ಕಟ್ಟಿನ ಅವಧಿಯಲ್ಲಿ, ಹಗೆ ತೀರಿಸಿಕೊಳ್ಳುವ ರೀತಿಯಲ್ಲಿ ಬಂಡವಾಳವು ಕೇಂದ್ರೀಕೃತವಾಗುತ್ತದೆ.

ಸಣ್ಣ ಮೀನನ್ನು ದೊಡ್ಡ ಮೀನು ನುಂಗುವ ಹಾಗೆ, ಸಣ್ಣ ಪುಟ್ಟ ಸಂಪತ್ತನ್ನು ಹೊಂದಿರುವವರನ್ನು ನುಂಗುವ ಈ ಇಡೀ ಪ್ರಕ್ರಿಯೆಯು, ಕಿರು ಉತ್ಪಾದಕರನ್ನು ನುಂಗುವ ಬಂಡವಾಳದ ಆದಿಮ ಶೇಖರಣೆಯನ್ನು ನೆನಪಿಸುತ್ತದೆ. ಸಂಪತ್ತು ಹೊಂದಿದ ಬಲಾಢ್ಯರು ಸಣ್ಣ ಪುಟ್ಟ ಹೂಡಿಕೆದಾರರಿಂದ 100 ರೂ. ಬೆಲೆಯ ಷೇರುಗಳನ್ನು ಪ್ರಾಮಾಣಿಕವಾಗಿ 100 ರೂ.ಗಳಿಗೇ ಖರೀದಿಸಿದರೆ, ಅದರಿಂದ ಅವರಿಗೆ ನಿವ್ವಳ ಲಾಭವಿಲ್ಲ. ಇಂತಹ ಖರೀದಿಗೆ ಅವರು ಹಣ ಪಾವತಿಸಲು ತಮ್ಮ ಬಳಿ ಇರುವ ನಗದು ಹಣವನ್ನು ಬಳಸಿಕೊಳ್ಳಬೇಕು ಅಥವಾ ಬ್ಯಾಂಕ್ ಗಳಿಂದ ಸಾಲ ಪಡೆಯಬೇಕಾಗುತ್ತದೆ ಅಥವಾ ಅವರು ಹೊಂದಿರುವ ಒಂದು ಸ್ವತ್ತಿನ ಮಾರಾಟ ಮಾಡಬೇಕಾಗುತ್ತದೆ. ಯಾವುದನ್ನು ಆಯ್ಕೆ ಮಾಡಿಕೊಂಡರೂ, ಅವರು ಹೊಂದಿರುವ ಆಸ್ತಿಗಳ ಮೌಲ್ಯದಲ್ಲಿ ಹೆಚ್ಚಳವಾಗುವುದಿಲ್ಲ. ಆದರೆ, ಷೇರು ಬೆಲೆ ಕುಸಿತದಿಂದಾಗಿ 100 ಮೌಲ್ಯದ ಷೇರುಗಳನ್ನು ಕೇವಲ 50 ರೂ ಗಳಿಗೆ ಖರೀದಿಸಿದರೆ, ಮತ್ತು ಈ 50 ರೂ ಗಳನ್ನು ಒಂದು ಬ್ಯಾಂಕಿನಿಂದ ಸಾಲ ಪಡೆದರೆ, ಷೇರು ಬೆಲೆಗಳು ತಮ್ಮ ನೈಜ ಮೌಲ್ಯಕ್ಕೆ ಚೇತರಿಕೆಯಾದಾಗ, ಶ್ರೀಮಂತರ ನಿವ್ವಳ ಆಸ್ತಿಯ ಮೌಲ್ಯವು (net worth) 50 ರೂ ಗಳಷ್ಟು ವಿಸ್ತರಣೆಯಾಗುತ್ತದೆ. ಹೋಲಿಕೆಯ ದೃಷ್ಟಿಯಲ್ಲಿ ಈ ಕ್ರಮವು ಬಂಡವಾಳದ ಆದಿಮ ಶೇಖರಣೆಗೆ ಸಮನಾಗಿದೆ.

ಸಾಂಕ್ರಾಮಿಕದ ಕಾಲದಲ್ಲಿ ಕೆಲವೇ ಮಂದಿಯ ಬಳಿ ಶೇರಿಕೊಳ್ಳುವ ಸಂಪತ್ತಿನ ದಟ್ಟಣೆಯು (wealth concentration) ಬಂಡವಾಳಶಾಹಿ ವ್ಯವಸ್ಥೆಗೆ ಹೊಂದಿಕೊಳ್ಳದ ಒಂದು ವಿದ್ಯಮಾನ ಎಂದು ಯುಬಿಎಸ್ ವಕ್ತಾರರು ಹೇಳಿದ್ದಾರೆ. ಅವರು ಇದಕ್ಕಿಂತ ಹೆಚ್ಚಿನ ಒಂದು ಅಪಚಾರವನ್ನು ಎಸಗುವುದು ಸಾಧ್ಯವಿಲ್ಲ. ಸಂಪತ್ತಿನ ದಟ್ಟಣೆಯ ಈ ವಿದ್ಯಮಾನವು ಬಂಡವಾಳಶಾಹಿಯ ತರ್ಕಕ್ಕೆ ಸಂಪೂರ್ಣವಾಗಿ ಅನುಗುಣವಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಿಕ್ಕಟ್ಟನ್ನುಂಟುಮಾಡುವ ಪ್ರತಿಯೊಂದು ಮಾನವ ದುರಂತವೂ ಈಗ ತಾನೇ ನಿರೂಪಿಸಿದ ವಿಧಾನದ ಮೂಲಕ ಸಂಪತ್ತಿನ ದಟ್ಟಣೆಯನ್ನು ಹೆಚ್ಚಿಸುವ ಒಂದು ಸಂದರ್ಭವಾಗಿ ಪರಿಣಮಿಸುತ್ತದೆ.

ಈ ಸ್ವಿಸ್ ಬ್ಯಾಂಕ್ ಮೂಲದ ಪ್ರಕಾರ, ಇದೇ ಅವಧಿಯಲ್ಲಿ, ಭಾರತವೂ ಸೇರಿದಂತೆ ದೇಶ ದೇಶಗಳಲ್ಲಿ ಸಂಪತ್ತಿನ ದಟ್ಟಣೆಯ ಪ್ರಕರಣಗಳು ಹೆಚ್ಚುತ್ತಿವೆ ಮತ್ತು ಭಾರತದ ಬಿಲಿಯನೇರ್‌ಗಳ ಸಂಪತ್ತು ಶೇ.35ರಷ್ಟು ಏರಿಕೆಯಾಗಿ 423 ಶತಕೋಟಿ ಡಾಲರ್‌ಗೆ ತಲುಪಿದೆ (ದಿ ವೈರ್, ಅಕ್ಟೋಬರ್ 16). ಈ ಅವಧಿಯಲ್ಲಿ, ಉತ್ಪಾದನೆ (ಜಿಡಿಪಿ) ಕಾಲು ಭಾಗದಷ್ಟು ಕುಗ್ಗಿದೆ. ಅದೇ ರೀತಿಯಲ್ಲಿ ಉದ್ಯೋಗಗಳೂ ಕುಸಿದಿವೆ. ಪರಸ್ಪರ ವಿರುದ್ಧವಾಗಿರುವ ಈ ಅಂಶಗಳು ಬಂಡವಾಳಶಾಹಿಯ ಕಾರ್ಯವೈಖರಿಯ ಹೆಗ್ಗುರುತುಗಳಾಗಿವೆ.

ಪಂಜಾಬಿನಲ್ಲಿ ಈ ಬಾರಿಯ ದಸರಾದ 'ರಾವಣರು'

ಕೃಷಿ ಕಾಯ್ದೆ ತಿದ್ದುಪಡಿಗಳ ವಿರುದ್ಧ ರೈತರ ಮತ್ತು ಜನಗಳ ಆಕ್ರೋಶ ತೀವ್ರವಾಗಿರುವ ಪಂಜಾಬಿನ ಹಲವು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಈ ಬಾರಿ ದಸರಾದಂದು ರಾವಣನ ಪ್ರತಿಕೃತಿಗಳ ದಹನ ಮಾಡುವ ಬದಲು ಪ್ರಧಾನ ಮಂತ್ರಿಗಳು, ಮತ್ತು ಈ ಮಸೂದೆಗಳ ಹಿಂದಿದ್ದ ಅವರ ಸಹಚರರು ಎಂದು ಪರಿಭಾವಿಸಿರುವ ವ್ಯಕ್ತಿಗಳ ಪ್ರತಿಕೃತಿಗಳ ದಹನ ನಡೆದಿದೆ ಎಂದು ವರದಿಯಾಗಿದೆ.



ಭಟಿಂಡಾದ ಬಹುಪಯೋಗಿ ಕ್ರೀಡಾಂಗಣದಲ್ಲಿ ಮೋದಿಯವರ ಜೊತೆಗೆ ಮುಕೇಶ್ ಅಂಬಾನಿ ಮತ್ತು ಗೌತ??? ಅದಾನಿಯ, ಅಲ್ಲದೆ ಅಮೆರಿಕನ್ ಬಂಡವಾಳಿಗ ಇರುವ ಪ್ರತಿಕೃತಿಗಳನ್ನು ದಹನ ಮಾಡಲಾಯಿತು ಎಂದು ಪಂಜಾಬಿನ 'ಟ್ರಿಬ್ಯೂನ್' ಪತ್ರಿಕೆಯಲ್ಲಿ ವರದಿಯಾಗಿದೆ.

ಸಂಗ???, ಮನ್ಸ ನಗರ, ಬು???ಲದಾ, ಸಂಗ್ರೂರ್, ಬರ್ನಾಲ, ಮುಂತಾದ ಇತರ ಹಲವೆಡೆಗಳಲ್ಲಿ ಭಾರತೀಯ ಕಿಸಾ??? ಯೂನಿಯನ್ ನೇತೃತ್ವದಲ್ಲಿ ಇವು ನಡೆದಿವೆ. ಈ ಸಂಘ ಸೇರಿದಂತೆ 29 ಪಂಜಾಬಿನ ರೈತ ಸಂಘಟನೆಗಳನ್ನು ಕೇಂದ್ರ ಸರಕಾರದ ಕೃಷಿ ಇಲಾಖೆಯ ಕಾರ್ಯದರ್ಶಿಗಳು ದಿಲ್ಲಿಯ ಕೃಷಿ ಭವನದಲ್ಲಿ ಮಾತುಕತೆಗೆಂದು ಕರೆದಿದ್ದರು.

ಮಾತುಕತೆಗಳ ವೇಳೆಯಲ್ಲಿ , ಈ ಶಾಸನದಲ್ಲಿ ಸಿ2+ 50% ಕನಿಷ್ಟ ಬೆಂಬಲ ಬೆಲೆಯನ್ನು ಖಾತ್ರಿಪಡಿಸುವ ಯಾವುದೇ ಕಲಮು ಏಕಿಲ್ಲ ಎಂಬ ರೈತರ ನೇರ ಪ್ರಶ್ನೆಗೆ ಉತ್ತರ ನೀಡಲು ಕೃಷಿ ಕಾರ್ಯದರ್ಶಿಗೆ ಸಾಧ್ಯವಾಗಲಿಲ್ಲ.

ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಸರಕಾರ ನಿಜವಾಗಿಯೂ ಬಯಸುವುದಾದರೆ ಪ್ರಧಾ ನ ಮಂತ್ರಿಗಳು ಮತ್ತು ಕೃಷಿ ಮಂತ್ರಿಗಳು ದೇಶದ ಎಲ್ಲ ರೈತ ಸಂಘಟನೆಗಳನ್ನು ಮಾತುಕತೆಗೆ ಕರೆಯಬೇಕು ಎಂದು ಪಂಜಾಬಿನ ರೈತ ಪ್ರತಿನಿಧಿಗಳು ಆಗ್ರಹಿಸಿದರು. ಮೂರೂ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕು ಎಂಬ ಆಗ್ರಹಕ್ಕೆ ಕೃಷಿ ಕಾರ್ಯದರ್ಶಿ ಒಪ್ಪುವ ಸ್ಥಿತಿಯಲ್ಲಿ ಇಲ್ಲದ್ದರಿಂದ ಮಾತುಕತೆಗಳು ವ್ಯರ್ಥವೆಂಥು ಪಂಜಾಬಿನ ರೈತ ಮುಖಂಡರು ಮಾತುಕತೆಯಿಂದ ಹೊರನಡೆದರು.

ಪಂಜಾಬಿನ ರೈತರು ತಮ್ಮ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ ಭಾಗವಾಗಿ ದಸರಾದಂದು ಈ ವಿಶಿಷ್ಟ ಸಾಂಕೇತಿಕ ಪ್ರತಿಭಟನೆ ನಡೆಸಿದ್ದಾರೆ.

'ಬಸ್ ಔರ್ ನಹಿ': ಜೆಡಿಯು-ಬಿಜೆಪಿಯತ್ತ ಈಗ ಬಿಹಾರದ ಮತದಾರರ ನಿಲುವು

ಬಿಹಾರ್ ವಿಧಾನಸಭಾ ಚುನಾವಣೆಗಳ ಮೊದಲ ಹಂತದ ಮತದಾನ ನಡೆಯುವ ವೇಳೆಗೆ ಗಾಳಿ ಈ ರಾಜ್ಯದಲ್ಲಿ ಸರಕಾರದ ಬದಲಾವಣೆಯತ್ತ ಬೀಸುತ್ತಿರುವಂತೆ ಕಾಣುತ್ತಿದೆ ಎನ್ನಲಾಗಿದೆ. ಆರ್‌ಜೆಡಿ ನೇತೃತ್ವದ 'ಮಹಾ ಗಟ್‌ಬಂಧನ್'ನ 10 ಲಕ್ಷ ಉದ್ಯೋಗಗಳು, ಕಾಂಟ್ರಾಕ್ಟ್ ಶಿಕ್ಷಕರ, ಆರೋಗ್ಯ ಕಾರ್ಯಕರ್ತರ ಖಾಯಮಾತಿ, ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರು, ಮಮತಾ, ಆಶಾ ಮತ್ತಿತರ ಸ್ಕಿಂ ಕಾರ್ಮಿಕರಿಗೆ ಗೌರವಧನದಲ್ಲಿ ಹೆಚ್ಚಳ, ರೈತರಿಗೆ ಸಾಲ ಮನ್ನಾ, ಪೆನ್ಶನ್ ಮೊತ್ತ ಮತ್ತು ನಿರುದ್ಯೋಗ ಭತ್ತೆಯಲ್ಲಿ ಏರಿಕೆ, ಸಮಾನ ಕೆಲಸಕ್ಕೆ ಸಮಾನ ವೇತನದ ಆಶ್ವಾಸನೆಗಳು ಚುನಾವಣಾ ಪ್ರಚಾರದ ಆರಂಭದಲ್ಲಿ ಬಿಜೆಪಿ ಕೊರೊನ ಚುಚ್ಚುಮದ್ದನ್ನು ಪುಕ್ಕಟೆಯಾಗಿ ಕೊಡುವ ಆಶ್ವಾಸನೆಯ ಮೂಲಕ ಸೃಷ್ಟಿಸಿದ್ದೇವೆ ಎಂದು ಕೊಂಡಿದ್ದ ಕಥನವನ್ನು ಬದಲಿಸಿದಂತೆ ಕಾಣುತ್ತಿದೆ ಎಂದು ವರದಿಗಳು ತಿಳಿಸುತ್ತಿವೆ. ವಿಶೇಷವಾಗಿ ಕಾರ್ಮಿಕರು, ರೈತರು ಮತ್ತು ಯುವಜನರು ಹೆಚ್ಚಿನ ಉತ್ಸಾಹ ತೋರುತ್ತಿದ್ದಾರೆ. 15 ವರ್ಷಗಳ ಆಳ್ವಿಕೆಯ ನಂತರವೂ ಅದರ ಹಿಂದಿನ 15 ವರ್ಷಗಳ 'ಜಂಗಲ್ ರಾಜ್ಯ'ದ ಚರ್ವಿತಚರ್ವಣದಲ್ಲಿದ್ದ ಬಿಜೆಪಿ-ಜೆಡಿಯು ಕೂಡ ಈಗ 19 ಲಕ್ಷ ಉದ್ಯೋಗ ನಿರ್ಮಾಣದ ಬಗ್ಗೆ ಮಾತನಾಡಬೇಕಾಗಿ ಬಂದಿದೆ.

'ಬಸ್ ಔರ್ ನಹಿ'- ಅಂದರೆ ಸಾಕಪ್ಪಾ ಸಾಕು ಎಂಬುದು ಈಗ ಬಿಜೆಪಿ-ಜೆಡಿಯು ನತ್ತ ಬಿಹಾರದ ಮತದಾರರ ನಿಲುವು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮೊದಲ ಹಂತದ ಮತದಾನದ ಹಿಂದಿನ ದಿನ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತಾಡುತ್ತ ಟಿಪ್ಪಣಿ ಮಾಡಿದರು.


ಮಹಾಮೈತ್ರಿಯತ್ತ ಜನಗಳ ಒಲವನ್ನು ಕಂಡು ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಹೌಹಾರಿರುವಂತೆ ಅವರ ಹೇಳಿಕೆಗಳಿಂದ ವ್ಯಕ್ತವಾಗುತ್ತಿದೆ. ಪ್ರಧಾನ ಮಂತ್ರಿಗಳು ಲಡಾಖ್, ಕಾಶ್ಮೀರ ಮತ್ತು ರಾಮಮಂದಿರದ ಬಗ್ಗೆಯಷ್ಟೇ ಮಾತಾಡಬೇಕಾಗಿ ಬಂದಿದೆ. ನಿತಿಶ್ ಕುಮಾರ್ ಲಾಲು ಪ್ರಸಾದ್ ಯಾದವ್ ಮೇಲೆ ವೈಯಕ್ತಿಕವಾಗಿ ಟೀಕೆ ಮಾಡುತ್ತ ಅವರು 9 ಮಕ್ಕಳನ್ನು ಹುಟ್ಟಿಸಿ ಜನತೆಗೆ ಕೆಟ್ಟ ಮಾದರಿ ಹಾಕಿಕೊಟ್ಟಿದ್ದಾರೆ ಎಂದರು. ಇದಕ್ಕೆ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಅವರಿಂದ ಮುಖ್ಯಮಂತ್ರಿಗಳಿಗೆ ಗೌರವಪೂರ್ಣ ಉತ್ತರ ಜನರಲ್ಲಿ ಅವರ ಬಗ್ಗೆ ಪ್ರೀತಿಯನ್ನು ಹೆಚ್ಚಿಸಿದೆ, ಅಲ್ಲದೆ ಮುಖ್ಯಮಂತ್ರಿಗಳ ಈ ಹೇಳಿಕೆಯನ್ನು ಗ್ರಾಮೀಣ ಮಹಿಳೆಯರು ಒಂದು ವೈಯಕ್ತಿಕ ಅವಮಾನವಾಗಿ ತೆಗೆದುಕೊಂಡಿದ್ದಾರೆ ಎಂದು ಕೆಲವು ಟಿಪ್ಪಣಿಕಾರರು ಹೇಳಿದ್ದಾರೆ.

ಅಕ್ಟೋಬರ್ 28 ರಂದು 16 ಜಿಲ್ಲೆಗಳ 71 ಕ್ಷೇತ್ರಗಳಲ್ಲಿ ನಡೆದ ಮತದಾನದಲ್ಲಿ 54.26ಶೇ. ಮತದಾನವಾಗಿದೆ. ಅಂದರೆ ಕೊರೊನ ಹೊರತಾಗಿಯೂ ಸುಮಾರಾಗಿ ಕಳೆದ ವರ್ಷದಷ್ಟೇ ಮತದಾನವಾಗಿದೆ.

ಅಕ್ಟೋಬರ್ 29ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ ಮತ್ತು ಸಿಪಿಐ(ಎಂಎಲ್) ಪೊಲಿಟ್‌ಬ್ಯುರೊ ಸದಸ್ಯರಾದ ಕವಿತಾ ಕೃಷ್ಣನ್ ಪಾಟ್ನಾದಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿ, ಮೊದಲ ಹಂತದಲ್ಲಿ ಮಹಾಮೈತ್ರಿ ಮತ್ತು ಎಡಪಕ್ಷಗಳ ಮೈತ್ರಿಗೆ ಬೆಂಬಲ ವ್ಯಕ್ತಪಡಿಸಿದಂತೆ ಮುಂದಿನ ಎರಡು ಹಂತಗಳಲ್ಲೂ ಇವುಗಳಿಗೆ ಮತ ನೀಡಬೇಕು, ರಾಜ್ಯದಲ್ಲಿ ಪರ್ಯಾಯ ರಾಜಕಾರಣಕ್ಕೆ ದಾರಿ ಮಾಡಿಕೊಡಬೇಕು ಎಂದು ಮನವಿ ಮಾಡಿಕೊಂಡರು.

ಸಿಪಿಐ(ಎಂ) ಸ್ಪರ್ಧಿಸಿರುವ ನಾಲ್ಕು ಕ್ಷೇತ್ರಗಳಲ್ಲಿ ಪ್ರಚಾರ ಅತ್ಯಂತ ಹುರುಪಿನಿಂದ ಸಾಗಿದೆ. ಯುವ ಮುಖಂಡರಾದ ಆಯಿಷೆ ಘೋಷ್, ದಿಪ್ಸಿತಾ ಧರ್, ಅಭಿಷೇಕ್ ನಂದನ್‌ರವರಿಗೆ ವ್ಯಾಪಕ ಸ್ಪಂದನೆ ದೊರೆಯುತ್ತಿದೆ. ಬೃಂದಾಕಾರಟ್ ಅವರು ಎರಡು ದೊಡ್ಡ ರ್‍ಯಾಲಿಗಳನ್ನು ಉದ್ದೇಶಿಸಿ ಮಾತಾಡಿದರು. ಇವುಗಳಲ್ಲಿ ಒಂದರಲ್ಲಿ ಕನ್ಹಯ್ಯಾ ಕುಮಾರ್ ಕೂಡ ಮಾತಾಡಿದರು.

ನವಂಬರ್ 3ರಂದು 94 ಕ್ಷೇತ್ರಗಳಲ್ಲಿ ಮತ್ತು ನವಂಬರ್ 7ರಂದು ಉಳಿದ 78 ಕ್ಷೇತ್ರಗಳಲ್ಲಿ ಮತದಾನ ನಡೆಲಿದೆ. ನವಂಬರ್ 10 ರಂದು ಮತಗಣನೆ ನಡೆಯಲಿದೆ.



ಕ್ರಾಂತಿಕಾರಿ ಪಕ್ಷದ ರಚನೆಗೆ ನಾಂದಿ

ಪುಟ 11 ರಿಂದ

ಬಯಸುತ್ತೇವೆ. ಅದನ್ನು ತಡೆಯಲು ನಾವು ಕಾತುರರಾಗಿದ್ದೆವು. ಆದಕಾರಣ ಅಂತಹ ದಾರಿಗಳು ಸಾಧ್ಯವಿದ್ದಾಗ ನಾವು ಐಕ್ಯತೆಗಾಗಿ ಪ್ರಯತ್ನ ಮಾಡಿದೆವು. ಆದರೆ, ನಮ್ಮೆಲ್ಲಾ ಪ್ರಯತ್ನಗಳೂ, ಏನೇ ಆದರೂ ತಾವು ಅಧಿಕಾರದಲ್ಲಿ ಇರುತ್ತೇವೆ ಎನ್ನುವವರ ಹಠದ ಪ್ರತಿರೋಧವನ್ನು ಎದುರಿಸಬೇಕಾಯಿತು". ಈ ನಿರ್ಣಯದ ಮೂಲಕ ಪಕ್ಷದ ಮಹಾಧಿವೇಶನದ ಕಾರ್ಯಸೂಚಿಯನ್ನೂ ಅಂಗೀಕರಿಸಲಾಯಿತು.

ಪಕ್ಷದ ಮಹಾಧಿವೇಶನದ ತಯಾರಿಗೆ ಸಹಾಯ ಮಾಡಲು, ರಾಜ್ಯಗಳಲ್ಲಿ ರಾಜ್ಯ ಸಮ್ಮೇಳನಗಳನ್ನು ಸಂಘಟಿಸಲು ಹಾಗು ಕಾರ್ಮಿಕ ಸಂಘ, ರೈತಸಂಘ, ಸಂಸದೀಯ ಹಾಗೂ ಇತರ ಸಾಮೂಹಿಕ ಸಂಘಟನೆಗಳ ಕೆಲಸಗಳಿಗೆ ಮಾರ್ಗದರ್ಶನ ಮಾಡಲು ಸಮಾವೇಶವು 41 ಸದಸ್ಯರ ಕೇಂದ್ರ ಸಂಘಟನಾ ಸಮಿತಿಯನ್ನು, ಕಾರ್ಯಕಾರಿ ಸಮಿತಿ ಮತ್ತು ಕಾರ್ಯಕಾರಿಯನ್ನು ಆಯ್ಕೆ ಮಾಡಿತು. ಕಾರ್ಯಕಾರಿಯ ಸಂಚಾಲಕರಾಗಿ ಕಾಂ.ಎಂ.ಬಸವಪುನ್ನಯ್ಯ ಅವರನ್ನು ಆಯ್ಕೆ ಮಾಡಲಾಯಿತು.

ಬೊಲಿವಿಯಾ: ಸಮಾಜವಾದಿ ಪಕ್ಷಕ್ಕೆ ಐತಿಹಾಸಿಕ ಗೆಲುವು

ಎಲ್ಲಾ ಅನನುಕೂಲ ಅಪಪ್ರಚಾರಗಳು ವಿವಾದಗಳ ನಡುವೆಯೂ, ಬೊಲಿವಿಯಾದಲ್ಲಿ ನಡೆದ ಅಕ್ಟೋಬರ್ 18 ರ ಚುನಾವಣೆಯಲ್ಲಿ ಮೂವ್ಮೆಂಟ್ ಟುವರ್ಡ್ ಸೋಷಿಯಲಿಸಂ (ಎಂಎಎಸ್) ಪಕ್ಷವು 55.1% ಮತಗಳನ್ನು ಗಳಿಸಿ ವಿಜಯ ಸಾಧಿಸಿದೆ. ಶೇ. 53.75% ಬೆಂಬಲದೊಂದಿಗೆ 2005 ರಲ್ಲಿ ಇವೊ ಮೊರೇಲ್ಸ್ ಅವರ ಸಾಧನೆಗಿಂತ ಇದು ಉತ್ತಮವಾಗಿದೆ. ಮಾಸ್ ಅಧ್ಯಕ್ಷ-ಚುನಾಯಿತ ಲುಚೊ ಆರ್ಸ್ಗೆ ಬೊಲಿವಿಯನ್ ಇತಿಹಾಸದ ಅತಿ ದೊಡ್ಡ ಜನಾದೇಶವಾಗಿದೆ. ಇದು ಮಾಸ್ ನೀತಿಗಳ ಪ್ರಮುಖ ಅನುಮೋದನೆ ಮತ್ತು ಅದರ 14 ವರ್ಷಗಳ ಬೊಲಿವಿಯಾ ಜನರ ಆಶೋತ್ತರಗಳನ್ನು ಈಡೇರಿಸಲು ಪ್ರಯತ್ನಕ್ಕೆ ಸಿಕ್ಕಿರುವ ಜಯವೆಂದು ಭಾವಿಸಲಾಗಿದೆ.



ಬೊಲಿವಿಯದ ಚುನಾಯಿತ ಅಧ್ಯಕ್ಷ ಮತ್ತು ಉಪಾಧ್ಯಕ್ಷ

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಬಲ ಪಂಥೀಯ ಜೀನೈನ್ ಎನೆಝ್ ಅವರ ಕಾನೂನು-ಬಾಹಿರ ಕ್ಷಿಪ್ರದಂಗೆ ಮೂಲಕ ಒಂದು ವರ್ಷದ ಹಿಂದೆ ಸ್ಥಾಪಿತಗೊಂಡಿದ್ದ ಸರ್ಕಾರವು ಅಕ್ಟೋಬರ್ 18,ರಂದು ನಡೆದ ಚುನಾವಣೆಯಲ್ಲಿ ಸೋಲನ್ನುಂಡು ತೀವ್ರ ಮುಖಭಂಗ ಅನುಭವಿಸಿದೆ. ದಂಗೆ ಮತ್ತು ಹಿಂಸಾತ್ಮಕ ಪ್ರಕ್ಷುಬ್ಧ ವಾತಾವರಣ ಇಡೀ ವರ್ಷದಾದ್ಯಂತ ಆವರಿಸಿಕೊಂಡಿತ್ತು. ಇದರಲ್ಲಿ ಮೂವ್ಮೆಂಟ್ ಟುವರ್ಡ್ಸ್ ಸೋಷಿಯಲಿಸಂ (ಎಂಎಎಸ್-ಮಾಸ್) ಅಧ್ಯಕ್ಷರಾಗಿದ್ದ ಇವೊ ಮೊರಲೆಸ್ ರನ್ನು ಗಡಿ ಪಾರು ಗೊಂಡಿದ್ದರು. ಅವರು ಕ್ಷಿಪ್ರದಂಗೆಯ ನಂತರ, ಅರ್ಜೆಂಟೀನಾ ದಲ್ಲಿ ಆಶ್ರಯ ಪಡೆದಿದ್ದರು. ಮಾಸ್ ನ ಇನ್ನಿತರ ನಾಯಕರು, ಮತ್ತು ಎಡಪಂಥೀಯ ಕಾರ್ಯಕರ್ತರನ್ನು ಬಂದೂಕಿನಿಂದ ಹಾಗೂ ರಾಜಕೀಯವಾಗಿ ನಾಶ ಮಾಡಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಕಳೆದ ಒಂದು ವರ್ಷದಿಂದ, ಜೀನೈನ್ ಎನರುಝ್ ಆಡಳಿತ ಮಾಡಿತ್ತು. ಆದಾಗ್ಯೂ, ಅಕ್ಟೋಬರ್ 18 ರಂದು ನಡೆದ ಚುನಾವಣೆಯಲ್ಲಿ, ಮಾಸ್ ನ ಚುನಾಯಿತ ಅಧ್ಯಕ್ಷ ಲುಚೊ ಆರ್ಸೆ ಯವರು, ತಮ್ಮ ಹಿಂದಿನ ಮಾಸ್ ಅಧ್ಯಕ್ಷ ಇವೊ ಮೊರೆಲ್ಸ್ ಗಿಂತ ಉತ್ತಮ ಮತ ಪಡೆದು, ಹೊಸ ಇತಿಹಾಸ ಸೃಷ್ಟಿಸಿದ್ದಾರೆ.

ಬೊಲಿವಿಯಾದಲ್ಲಿ ಕಳೆದ ಒಂದು ವರ್ಷದಿಂದೀಚೆಗೆ, ಒಟ್ಟಾರೆಯಾಗಿ, ಬಲಪಂಥೀಯ ಕ್ಷಿಪ್ರದಂಗೆ ಮತ್ತು ಹಿಂಸಾಕಾಂಡದ ಸ್ಥಿತಿಯನ್ನು ಎದುರಿಸಿ ಹಿಮ್ಮೆಟ್ಟಿಸುವಲ್ಲಿ ಮತ್ತು ಮತಪತ್ರಗಳು ಬುಲೆಟ್ ಗಳನ್ನು ಸೋಲಿಸಬಲ್ಲುದು ಎಂದು ಮಾಸ್ ಮೈತ್ರಿ ಕೂಟದ ಗೆಲುವು ತೋರಿಸಿದೆ. ಇದು ಇತ್ತೀಚಿನ ಲ್ಯಾಟಿನ್ ಅಮೆರಿಕ ಮಾತ್ರವಲ್ಲ ಜಾಗತಿಕ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಗಮನಾರ್ಹ ಬೆಳವಣಿಗೆಯಾಗಿದೆ.

ಎಲ್ಲಾ ಅನನುಕೂಲ ಅಪಪ್ರಚಾರಗಳು ವಿವಾದಗಳ ನಡುವೆಯೂ, ಬೊಲಿವಿಯಾದಲ್ಲಿ ನಡೆದ ಅಕ್ಟೋಬರ್ 18 ರ ಚುನಾವಣೆಯಲ್ಲಿ ಮೂವ್ಮೆಂಟ್ ಟುವರ್ಡ್ ಸೋಷಿಯಲಿಸಂ (ಎಂಎಎಸ್) ಪಕ್ಷವು 55.1% ಮತಗಳನ್ನು ಗಳಿಸಿ ವಿಜಯ ಸಾಧಿಸಿದೆ. ಶೇ. 53.75% ಬೆಂಬಲದೊಂದಿಗೆ 2005 ರಲ್ಲಿ ಇವೊ ಮೊರೇಲ್ಸ್ ಅವರ ಸಾಧನೆಗಿಂತ ಇದು ಉತ್ತಮವಾಗಿದೆ. ಮಾಸ್ ನ ಚುನಾಯಿತ ಅಧ್ಯಕ್ಷ ಲುಚೊ ಆರ್ಸ್ಗೆ ಅವರದ್ದು ಬೊಲಿವಿಯನ್ ಇತಿಹಾಸದ ಅತಿ ದೊಡ್ಡ ಜನಾದೇಶವಾಗಿದೆ. ಇದು ಮಾಸ್ ನೀತಿಗಳ ಪ್ರಮುಖ ಅನುಮೋದನೆ ಮತ್ತು ಅದರ 14 ವರ್ಷಗಳ ಬೊಲಿವಿಯಾ ಜನರ ಆಶೋತ್ತರಗಳನ್ನು ಈಡೇರಿಸಲು ಪ್ರಯತ್ನಕ್ಕೆ ಸಿಕ್ಕಿರುವ ಜಯವೆಂದು ಭಾವಿಸಲಾಗಿದೆ.

ಮಾಜಿ ಮಾಸ್(ಎಂ.ಎ.ಎಸ್) ಅಧ್ಯಕ್ಷ ಇವೊ ಮೊರೇಲ್ಸ್ ರವರ ಆಡಳಿತದ ವಿರುದ್ಧ, ಕ್ಷಿಪ್ರದಂಗೆ ಎಬ್ಬಿಸಿ ಬಲಪಂಥೀಯ ಸೆನೆಟರ್ ಜೀನೈನ್ ಎನೆಜ್ ಅವರನ್ನು ಅಧಿಕಾರಕ್ಕೆ ತಂದ ಒಂದು ವರ್ಷದ ನಂತರ ಈ ಚುನಾವಣೆ ನಡೆಯಿತು. ಕಳೆದ ನವೆಂಬರ್‌ನಲ್ಲಿ ಬೊಲಿವಿಯಾದ ಸಕಾಬಾ ಮತ್ತು ಸೆಂಕಾಟಾ ನಗರಗಳಲ್ಲಿ ನಡೆದ ಹತ್ಯಾಕಾಂಡದಲ್ಲಿ ಎನೆಜ್ ಮತ್ತು ಅವರ ಕುಖ್ಯಾತ ಸರ್ಕಾರಿ ಸಚಿವ ಆರ್ಟುರೊ ಮುರಿಲ್ಲೊ ಅವರ ಅಡಿಯಲ್ಲಿ, ಸರ್ಕಾರವು ಭಿನ್ನಮತೀಯರನ್ನು ಮತ್ತು ಕ್ಷಿಪ್ರದಂಗೆ-ವಿರೋಧಿ ಕಾರ್ಯಕರ್ತರನ್ನು ದಮನಿಸಿತು, ಡಜನ್ ಗಟ್ಟಲೆ ಜನರನ್ನು ಕೊಂದು ನೂರಾರು ಜನರನ್ನು ಗಾಯಗೊಳಿಸಿತು. ಇತ್ತೀಚಿನ ಚುನಾವಣೆಗಳಿಗೆ ಕಾರಣವಾದ ಪ್ರಕ್ಷುಬ್ಧ ವರ್ಷದಲ್ಲಿ ಸರಕಾರ ಮಾಸ್, ಅದರ ಮೈತ್ರಿಕೂಟದ ಮತ್ತು ಎಡಪಂಥೀಯ ಕಾರ್ಯಕರ್ತರಿಗೆ ರಾಜಕೀಯ ಕಿರುಕುಳ ನೀಡಿತ್ತು.

ಮಾಸ್ ಗೆಲುವು ದಂಗೆಯಿಂದ ಸ್ಥಾಪಿಸಲ್ಪಟ್ಟ ಜನಾಂಗೀಯ-ನೀತಿಯ ಸರ್ಕಾರವನ್ನು ತಿರಸ್ಕರಿಸಿದೆ. ಕಳೆದ ವರ್ಷವಿಡೀ ಪ್ರಜಾಪ್ರಭುತ್ವವನ್ನು ರಕ್ಷಿಸುವ ಚಳುವಳಿಗಳು ಬೊಲಿವಿಯಾವನ್ನು ಪ್ರಸ್ತುತ ಈ ಐತಿಹಾಸಿಕ ಕಾಲ ಘಟ್ಟಕ್ಕೆ ತಂದವು. ಆಗಸ್ಟ್ ನಲ್ಲಿ ವಾರಗಳವರೆಗೆ, ಮಾಸ್ ಮತ್ತು ಅದರ ಮೈತ್ರಿಕೂಟದ ಕ್ಯಾಂಪೆಸಿನೊ, ಸ್ಥಳೀಯ ಮತ್ತು ಕಾರ್ಮಿಕ ಗುಂಪುಗಳು ಆಯೋಜಿಸಿದ್ದ ಬೃಹತ್ ರಸ್ತೆ ತಡೆ ಪ್ರತಿಭಟನೆಗಳನ್ನು ನಡೆಸಿದ್ದವು. ಹಲವು ತಿಂಗಳ ಸರಕಾರದ ವಿಳಂಬ ತಂತ್ರವನ್ನು ಸೋಲಿಸಿ ಚುನಾವಣೆ ನಡೆಸಲು ಯಶಸ್ವಿಯಾಗಿ ಒತ್ತಡ ಹೇರಿದ್ದವು ಎಂಬ ಅಂಶವನ್ನು ಮರೆಯಬಾರದು.

ಚುನಾವಣೆಯಲ್ಲಿ ಜಯಗಳಿಸಿದ ನಂತರ, ಮುಂದಿನ ತಿಂಗಳು ಮಾಸ್ ಸರ್ಕಾರವನ್ನು ಪ್ರವೇಶಿಸಲಿದ್ದು, ಹಲವು ನಿರ್ಣಾಯಕ ಪ್ರಶ್ನೆಗಳನ್ನು ಎದುರಿಸಬೇಕಾಗಿದೆ. ಈ ಪ್ರಶ್ನೆಗಳಲ್ಲಿ ಪ್ರಮುಖವಾದ ಒಂದು ಪ್ರಶ್ನೆ - ಪಕ್ಷದ ನಾಯಕತ್ವ ಎಷ್ಟು ಬದಲಾಗುತ್ತದೆ ಎಂಬುದಾಗಿದೆ. ಕಳೆದ ವರ್ಷದ ಬಿಕ್ಕಟ್ಟು ಹೊಸ ನಾಯಕತ್ವವು ಮುನ್ನೆಲೆಗೆ ಬರುವುದಕ್ಕೆ ಕಾರಣವಾಗಿದೆ. ಉದಾಹರಣೆಗೆ, ಯುವ ಎಂಎಎಸ್ ಕೋಕಲೆರೊ ನಾಯಕರಾದ ಆಂಡ್ರಿನಿಕೊ ರೊಡ್ರಿಗಸ್ ಮತ್ತು ಲಿಯೊನಾರ್ಡ್ ಲೊಜಾವೆರೆ ಅವರು ಕೊಚಬಾಂಬಾದಲ್ಲಿ ಸೆನೆಟರ್‌ಗಳಾಗಿ ಆಯ್ಕೆಯಾಗಿದ್ದಾರೆ.

ಈ ಚುನಾವಣಾ ಫಲಿತಾಂಶ ಮಾಸ್ ನಲ್ಲಿರುವ ಎಡಪಂಥೀಯ ಗುಂಪನ್ನು ಬಲಪಡಿಸಿದೆ ಎನ್ನಲಾಗಿದೆ. ಉಪಾಧ್ಯಕ್ಷ-ಚುನಾಯಿತ ಡೇವಿಡ್ ಚೊಕ್ವುವಾಂಕಾ ಅವರನ್ನು ಮಾಸ್ ಪಕ್ಷದ ಹೆಚ್ಚು ನಿರ್ಣಾಯಕ ಎಡಪಂಥೀಯ ಪ್ರತಿನಿಧಿಯೆಂದು ಪರಿಗಣಿಸಲಾಗುತ್ತದೆ. ಎಡಪಂಥ ಕಾರ್ಮಿಕ, ರೈತ ಮತ್ತು ಸ್ಥಳೀಯ ಜನರ ಚಳುವಳಿಗಳ ತಳಮಟ್ಟದ ಮೇಲೆ ನೇರವಾಗಿ ಆಧಾರಿತವಾಗಿದೆ. ಇದು ಮಾಸ್ ನೆಲೆಗಳೊಂದಿಗಿನ ಸಂಬಂಧವನ್ನು ಬಲಪಡಿಸಬಹುದು ಹಾಗೂ, ಸಾಮಾಜಿಕ ಚಳುವಳಿಗಳೊಂದಿಗೆ ಪಕ್ಷದ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಬಹುದು.

ಈ ಪರಿಸ್ಥಿಯಲ್ಲಿ ಇವೊ ಮೊರೇಲ್ಸ್ ರ ಪಾತ್ರವೇನು? ಚುನಾವಣಾ ವಿಜಯದ ನಂತರ, ಅಧ್ಯಕ್ಷ-ಚುನಾಯಿತ ಆರ್ಸ್ ಅವರು ಹೊಸ ಸರ್ಕಾರದಲ್ಲಿ ಮೊರೇಲ್ಸ್ ಪಾತ್ರವನ್ನು ಹೊಂದಿಲ್ಲ, ಆದರೆ ಅರ್ಜೆಂಟೀನಾದಿಂದ ಬೊಲಿವಿಯಾಕ್ಕೆ ಮರಳಲು ಅವರಿಗೆ ಸ್ವಾಗತವಿದೆ ಎಂದು ಹೇಳಿದ್ದಾರೆ.

ಸರ್ಕಾರ ಮತ್ತು ಬೀದಿಗಳಲ್ಲಿ ರಾಜಕೀಯ ಸೋಲನ್ನು ಬಲಪಂಥೀಯರು ಹೇಗೆ ಸ್ವೀಕರಿಸುತ್ತಾರೆ ಕಾದುನೋಡಬೇಕು.? ಅಧ್ಯಕ್ಷೀಯ ಅಭ್ಯರ್ಥಿ ಕಾರ್ಲೋಸ್ ಮೆಸಾ, ಮತ್ತು ಆರ್ಗನೈಸೇಶನ್ ಆಫ್ ಅಮೇರಿಕನ್ ಸ್ಟೇಟ್ಸ್ ಎಲ್ಲರೂ ಮಾಸ್ ವಿಜಯವನ್ನು ಒಪ್ಪಿಕೊಂಡ್ಡಿದ್ದಾರೆ. ಆದಾಗ್ಯೂ, ಬಲಪಂಥೀಯ ಕಾಮಿಟೆ ಸೆವಿಕೊ ಪರ ಸಾಂತಾ ಕ್ರೂಜ್, ದಂಗೆ ನಾಯಕ ಫರ್ನಾಂಡೊ ಕ್ಯಾಮಾಚೊ ಮತ್ತು ಇತರ ಮಾಸ್ ವಿರೋಧಿ ಗುಂಪುಗಳು ಮಾಸ್ ವಿಜಯವನ್ನು ತಿರಸ್ಕರಿಸಿವೆ. ಕಳೆದ ವರ್ಷದಲ್ಲಿ ದೇಶದಲ್ಲಿ ಜನಾಂಗೀಯ ಮತ್ತು ಅರೆಸೈನಿಕ ಗುಂಪುಗಳ ಕಾರ್ಯಾಚರಣೆಗಳನ್ನು ಗಮನಿಸಿದರೆ, ಅವರು ಬೊಲಿವಿಯಾದಲ್ಲಿ ಅಶಾಂತಿಯನ್ನು ಹುಟ್ಟುಹಾಕುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಅಧಿಕಾರ ವಹಿಸಿಕೊಂಡ ಮಾಸ್, ಈ ಸವಾಲುಗಳನ್ನು ಹೇಗೆ ನಿರ್ವಹಿಸುತ್ತದೆ ಎಂಬುದರ ಮೇಲೆ ಇದು ಅವಲಂಬಿತವಾಗಿರುತ್ತದೆ.

ಮಾಸ್ ಈ ವರ್ಷದುದ್ದಕ್ಕೂ, ನಂಬಲಾಗದಷ್ಟು ಸವಾಲುಗಳನ್ನು ಎದುರಿಸಿದೆ ಮತ್ತು ಚುನಾವಣೆಯಲ್ಲಿಯೂ ಜಯ ಗಳಿಸಿದೆ. ಪ್ರಸ್ತುತ, ದೇಶದಲ್ಲಿ ವಿನಾಶಕಾರಿ ಕೋರೊನಾ ಸಾಂಕ್ರಾಮಿಕ, ಹೆಚ್ಚುತ್ತಿರುವ ಫ್ಯಾಸಿಸಂ ಮತ್ತು ನಿಧಾನ ಗತಿಯ ಆರ್ಥಿಕತೆಗೆ ಮುಖಾಮುಖಿಯಾಗಬೇಕಾಗುತ್ತದೆ. ಎಲ್ಲಾ ಬೊಲಿವಿಯನ್ನರ ಪರವಾಗಿ ಈ ಕಾರ್ಯವನ್ನು ನಿರ್ವಹಿಸಲು ಅದಕ್ಕೆ ಐತಿಹಾಸಿಕ ಆದೇಶವಂತೂ ಸಿಕ್ಕಿದೆ.

ಕೋವಿಡ್ ಮೂಲ, ಭವಿಷ್ಯದ ಕುರಿತು ವದಂತಿಗಳು......... ಪುಟ 6 ರಿಂದ

ಸರಳ ಪರಿಹಾರಗಳನ್ನು ನಾವು ಯಾವಾಗಲೂ ತಿರಸ್ಕರಿಸುತ್ತೇವೆ. ಕಾಲರಾ ರೋಗಕ್ಕೆ ಎಚ್. ಎನ್. ಚಟರ್ಜಿ ಪರಿಹಾರವಾದ 'ಮೌಖಿಕ ಪುನರ್ಜಲೀಕರಣ' ಅಥವಾ 'ಓರಲ್ ರಿಹೈಡ್ರೇಷನ್' 1957 ಇಸವಿಯಲ್ಲೇ ಗೊತ್ತಿದ್ದರೂ, ವೈದ್ಯರಿಗೂ, ನಿರ್ವಾಹಕರಿಗೂ, ಅದನ್ನು ಗುರುತಿಸಲು ದಶಕಗಳೇ ಬೇಕಾದವು. (ಹಿಂದೂ ದಿನಪತ್ರಿಕೆ, ಜೂನ್ 3, 2020).

ಈ ರೋಗದ ಬಗ್ಗೆ ಬಹಳ ವಿಷಯಗಳು ಈಗ ಗೊತ್ತಿರುವುದರಿಂದ, ನಮ್ಮ ಯೋಜನೆಗಳು ಇನ್ನಷ್ಟು ಪರಿಣಾಮಕಾರಿಯಾಗಲು ಸಾಧ್ಯ. 'ಸಾಮಾಜಿಕ ಲಸಿಕೆ'ಗೆ ಸರಕಾರದ ಮಧ್ಯಸ್ಥಿಕೆ ಅವಶ್ಯ. ಇದನ್ನು ಎಲ್ಲರೂ ಸಾಮೂಹಿಕವಾಗಿ ಒತ್ತಾಯಿಸಿ ಪಡೆಯಬೇಕಾಗಿದೆ. ಸರಕಾರದ ಮೇಲೆ ಈ ಒತ್ತಾಯ ಹೇರದೆ, ವೈರಾಣುವನ್ನು ದೇವರ ಕೊಡುಗೆ ಯೆಂದಾಗಲೀ ಪ್ರಕೃತಿಯ ಪ್ರತೀಕಾರವೆಂದಾಗಲೀ ಭಾವಿಸಿ ಸುಮ್ಮನಿದ್ದರೆ, ಅದು ಬರೀ ಪಲಾಯನದ ದಾರಿಯಾಗುತ್ತದೆ. ಸರಕಾರ ಸಹ 'ಲಸಿಕೆ ಸಿಗುವವರೆಗೂ ನಿಮ್ಮನ್ನು ನೀವು ಕ್ಷೇಮವಾಗಿರಿಸಿರಿ' ಎಂದು ಹೇಳುವಲ್ಲಿ ಜವಾಬ್ದಾರಿಯನ್ನು ಪ್ರಜೆಗಳಿಗೆ ವರ್ಗಾಯಿಸಿದೆ.

ಭಾರತದ ವಿಜ್ಞಾನದಲ್ಲಿ ಮರೆಯಾದ ಎಡಪಂಥೀಯರ ಕತೆ......... ಪುಟ 8 ರಿಂದ

ಮತ್ತು ವಿಶ್ವ ಆರೋಗ್ಯ ಸಂಸ್ಥೆಯ ನೆರವಿನಿಂದ ಭಾರತದ ಸಾರ್ವಜನಿಕ ವಲಯದ ಬಹುಮುಖ್ಯ ಔಷದ ಉದ್ದಿಮೆಗಳಾದ ಎಚ್.ಎ.ಎಲ್ ಮತ್ತು ಐ.ಡಿ.ಪಿ.ಎಲ್ ಗಳ ಸಾಮರ್ಥ್ಯಕ್ಕೆ ಕಾರಣವಾಯಿತು. ಹಾಗೆಯೇ ಹುಸೇನ್ ಜಹೀರ್ ಅವರ ನೇತೃತ್ವದ ಸಿ.ಎಸ್.ಐ.ಆರ್ ನ ಮೂಲಸೌಕರ್ಯಗಳು, ನಿತ್ಯಾನಂದ ಅವರ ನಿರ್ದೇಶನತ್ವದ ಲಕ್ನೌ ನ ಕೇಂದ್ರೀಯ ಔಷಧಿ ಸಂಶೋಧನಾ ಸಂಸ್ಥೆ, ಮತ್ತು ರಾಷ್ಟ್ರೀಯ ರಸಾಯನ ಪ್ರಯೋಗಾಲಯ ಪುಣೆ, ಇವೆಲ್ಲ ಸೇರಿ ಭಾರತೀಯ ಔಷಧಿ ಉದ್ದಿಮೆಯನ್ನು ಬಹುರಾಷ್ಟ್ರೀಯ ಕಂಪನಿಗಳ ಕುಣಿಕೆಯಿಂದ ತಪ್ಪಿಸಲು ಸಾಧ್ಯವಾಯಿತು. ಪಿ.ಎಂ.ಭಾರ್ಗವ ಅವರ ಹೈದರಾಬಾದಿನ ಸಿ.ಸಿ.ಎಂ.ಬಿ (ಸೆಂಟರ್ ಫಾರ್ ಸೆಲ್ ಅಂಡ್ ಮೊಲೆಕ್ಯುಲರ್ ಬಯಾಲಜಿ) ಯ ಅನನ್ಯ ಕೊಡುಗೆಯಿಂದಾಗಿ ಭಾರತೀಯ ಔಷದಿ ಕ್ಷೇತ್ರದಲ್ಲಿ ಜೈವಿಕ ಕ್ರಾಂತಿ ಸಾಧ್ಯವಾಯಿತು. ಇಂದು ಭಾರತ ಜಗತ್ತಿನಲ್ಲೇ ಜೆನೆರಿಕ್ ಔಷಧಿಗಳು ಮತ್ತು ಲಸಿಕೆಗಳನ್ನು ತಯಾರಿಸುವ ಬಹುಮುಖ್ಯ ದೇಶವಾಗಿ ಹೊರಹೊಮ್ಮಿದೆ. ಈ ವಿಜ್ಞಾನಿಗಳು ಹಾಕಿಕೊಟ್ಟ ಭದ್ರ ಅಡಿಪಾಯ ಇದನ್ನು ಸಾಧ್ಯಗೊಳಿಸಿತು. ನಾವಿಂದು ಈ ವಿಜ್ಞಾನಿಗಳ ಕೊಡುಗೆಗಳನ್ನು ನೆನೆಯಬೇಕು.

ನಾವಿಂದು ಜಾತಿ-ಪ್ರಣೀತ ಶ್ರೇಣೀಕೃತ, ಬ್ರಾಹ್ಮಣೀಕೃತ ವ್ಯವಸ್ಥೆಯ ಆಧಿಪತ್ಯ ಎದುರಿಸುತ್ತಿದ್ದೇವೆ. ಈ ವ್ಯವಸ್ಥೆಯಲ್ಲಿ ಧರ್ಮಗ್ರಂಥಗಳ ಬಗ್ಗೆ ಪೂರ್ತಿ ವಿಧೇಯತೆಯಿಂದ ಇರುವುದನ್ನು ಬಯಸಲಾಗುತ್ತದೆ ಹೊರತು ಪ್ರಶ್ನಿಸುವ ಮನೋಭಾವವನ್ನಲ್ಲ. ಇಂತಹ ವ್ಯವಸ್ಥೆಯಲ್ಲಿ ವಸಾಹತುಶಾಹಿ ಧೋರಣೆಯ ಪ್ರಭುಗಳಿಗೆ ಅಥವಾ ಅಧಿಕಾರದಲ್ಲಿರುವ ರಾಜಕೀಯ ಪಕ್ಷಕ್ಕೆ ವಿಮರ್ಶಾತ್ಮಕ ಚಿಂತನೆ ಮತ್ತು ಪ್ರಶ್ನಿಸುವುದು ಎರಡೂ ರಾಜದ್ರೋಹವಾಗುತ್ತದೆ. ಜನ ವಿಜ್ಞಾನ ಚಳುವಳಿಗಳಲ್ಲಿ ವಿಜ್ಞಾನ ಮತ್ತು ವಿಮರ್ಶಾತ್ಮಕ ಚಿಂತನೆಗಳನ್ನು ಜನ ಚಿಂತನೆಯ ಭಾಗವನ್ನಾಗಿ ಮಾಡುವ ಪ್ರಯತ್ನ ಮಾಡಲಾಗುತ್ತಿದೆ. ಅವಿವೇಕ, ದ್ವೇಷ ಮತ್ತು ಸಾಮಾಜಿಕ ವಿಭಜಕ ಶಕ್ತಿಗಳೇ ಮೆರೆಯುತ್ತಿರುವ ಈ ಸಂದರ್ಭದಲ್ಲಿ ವಿಜ್ಞಾನ ಮತ್ತು ವಿವೇಕ ಹೋರಾಟದ ಅಸ್ತ್ರಗಳಾಗಬೇಕಾಗಿದೆ. ಆ ಕಥೆ ಮತ್ತು ಅದರ ಜೊತೆಗಿನ ಹಲವು ಇತರ ಕತೆಗಳನ್ನು ಇನ್ನೊಂದು ದಿನ ನೋಡೋಣ.

ಮುಖ್ಯವಾಹಿನಿಯಲ್ಲ, ಕಾರ್ಪೊರೇಟ್ ಮಾಧ್ಯಮ;......... ಪುಟ 9 ರಿಂದ

ವೆಬಿನಾರಿನ ಅಧ್ಯಕ್ಷತೆ ವಹಿಸಿ ಸಂವಾದದಲ್ಲೂ ಭಾಗವಹಿಸಿದ್ದ ಡಿ ಉಮಾಪತಿ ಅವರು, ವೆಬಿನಾರಿನಲ್ಲಿ ಹೊಮ್ಮಿದ ಯೋಚನೆ, ಚರ್ಚೆಗಳ ಒಟ್ಟು ಸಾರವನ್ನು ಸಮಾರೋಪ ಮಾತುಗಳಲ್ಲಿ ಮುಂದಿಟ್ಟರು. ಸಾವಿರಾರು ಕೈಗಳು ಲಕ್ಷಾಂತರ ಹತಾರಗಳನ್ನುಳ್ಳ ಸರ್ವಶಕ್ತ ಪ್ರಭುತ್ವ ಮತ್ತು ದೈತ್ಯ ಕಾರ್ಪೊರೇಟ್ ಮಾಧ್ಯಮಗಳ ಅಪವಿತ್ರ ಮೈತ್ರಿಯ ವಿರುದ್ಧ ಪರ್ಯಾಯ ಮಾಧ್ಯಮ ಕಟ್ಟುವುದು ಹೂಹಾಸಿದ ಹಾದಿಯಲ್ಲ. ಕಲ್ಲುಮುಳ್ಳುಗಳ ಹೋರಾಟದ ಹಾದಿ. ಇದನ್ನು ಸಾಧಿಸಲು ಒಂದು ಕಡೆ ಜನಸಮೂಹಗಳ ಜತೆ ಸಾವಯವ ಸಂವಹನ ಸಂಪರ್ಕ ಸಾಧಿಸುತ್ತಾ ಪರ್ಯಾಯ ಮಾಧ್ಯಮಗಳ ಜಾಲವನ್ನು ಕಟ್ಟಿಕೊಳ್ಳಬೇಕು ಮತ್ತು ಇನ್ನೊಂದೆಡೆ ಕಾರ್ಪೊರೇಟ್ ಮಾಧ್ಯಮದಲ್ಲೂ ಕಿರು ಆವರಣಗಳನ್ನು ಕಟ್ಟಿಕೊಳ್ಳಬೇಕು ಎಂದರು.

ಮೊದಲಿಗೆ ಜನಶಕ್ತಿ ಮೀಡಿಯಾದ ಪರವಾಗಿ ವಸಂತರಾಜ್, ವೆಬಿನಾರಿನ ಆಶಯದ ಮಾತುಗಳನ್ನಾಡಿ ಪಿ ಸಾಯಿನಾಥ್, ಡಿ ಉಮಾಪತಿ ಹಾಗೂ ಸಂವಾದದಲ್ಲಿ ಭಾಗವಹಿಸಿದವರನ್ನು ಪರಿಚಯ ಮಾಡಿ ಸ್ವಾಗತಿಸಿದರು, ವೆಬಿನಾರಿನ ನಿರ್ವಹಣೆ ಮಾಡಿದರು. ಗುರುರಾಜ ದೇಸಾಯಿ ಅವರು ಕೊನೆಯಲ್ಲಿ ಫೋಟೊ/ವಿಡಿಯೊ ಸ್ಪರ್ಧೆಯ ತೀರ್ಪನ್ನು ಘೋಷಿಸಿ ವಂದನಾರ್ಪಣೆ ಮಾಡಿದರು.

JANASHAKTHI KANNADA VARA PATRIKE November 2-8, 2020 Price: Rs. 10/- Date of Publication: 30 October 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21



ಕಾಮ್ರೇಡ್ ಮಾರುತಿ ಮಾನಪಡೆಯವರಿಗೆ ಲಾಲ್ ಸಲಾಂ

ಎಸ್. ವರಲಕ್ಷ್ಮಿ



ನಾನು ಮತ್ತು ಕಾಮ್ರೇಡ್ ಯು. ಬಸವರಾಜರವರು ಕಾಂ॥ ಮಾನಪಡೆಯವರ ಅಂತ್ಯ ಸಂಸ್ಕಾರಕ್ಕೆ ಗುಲ್ಬರ್ಗಾ ತಲುಪಿದೊಡನೆ ಈಒಖಿಖ ನ ಕಾಮ್ರೇಡ್ ಆನಂದ್ ಮತ್ತು ಶರಣಬಸಪ್ಪ (ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ) ರೊಡನೆ ಕೂಡಿ ಕಮಲಾಪುರ ತಹಶೀಲ್ದಾರ ಕಛೇರಿಗೆ ಹೋದೆವು– ಮಾನಪಡೆಯವರ ದೇಹವನ್ನು ಸೊಲ್ಲಾಪುರದಿಂದ ಗುಲ್ಬರ್ಗಾಕ್ಕೆ ತರಬೇಕಿದ್ದರಿಂದ ಈ ಕುರಿತು ಕಾಂ॥ ಮೀನಾಕ್ಷಿ ಸುಂದರಂರವರ ನಿರ್ದೇಶನ ನೀಡಿದ್ದರು. ಅಲ್ಲಿ ಇಳಿಯುತ್ತಿದ್ದಂತೆ ಸುಮಾರು 60–70 ಜನ ಸಂಗಾತಿಗಳು ನಮ್ಮನ್ನು ಸುತ್ತುವರೆದು ಕಾಮ್ರೇಡ್ ನಮ್ಮ ಶಕ್ತಿ ಕಳೆದುಕೊಂಡೆವು ಎಂದು ರೋಧಿಸಿದರು. ಆ ಗುಂಪಿನಲ್ಲಿ ಕೇವಲ ಪುರುಷರಷ್ಟೇ ಅಲ್ಲ ಮಹಿಳೆಯರು ಮತ್ತು ಮಕ್ಕಳು ಕೂಡಾ ಇದ್ದರು.

ಅಲ್ಲಿ ಕೆಲಸ ಮುಗಿಸಿ ಕಾಂ॥ ಜಯಶ್ರೀ ಮನೆಗೆ ಹೋದೆವು. ಅಲ್ಲಿ ಕುಳಿತು ಮಾರನೇ ದಿನದ ಕಾರ್ಯಕ್ರಮ ಚರ್ಚಿಸಿದೆವು. ಅಶ್ಚರ್ಯ ಏನೆಂದರೆ ಕರೋನಾ ಇದೆ, ಇವರು ಬೆಂಗಳೂರಿನಿಂದ ಬಂದಿದ್ದಾರೆ ಎಂದು ಯಾರೂ ಭಾವಿಸುತ್ತಿರಲಿಲ್ಲ.

ಮಾರನೇ ದಿನ ಹೆಚ್ಚು ಜನ ಸೇರಬಾರದೆಂದೂ ಮತ್ತು 10 ಅಡಿ ಗುಣಿ ತೊಡಬೇಕೆಂದು ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿಯವರು ಹೇಳಿರುವ ವಿಷಯವನ್ನು ಕಾಂ॥ ಯು. ಬಸವರಾಜರವರು ರಾತ್ರಿ 11.30ಕ್ಕೆ ಅಂಬಲಗಾ ಸಂಗಾತಿಗಳಿಗೆ ಮುಟ್ಟಿಸಿದ್ದರು. ಅಂತಿಮ ವಿದಾಯ ಹೇಳಲು ನಾವು ಮತ್ತು ಮಾನಪಡೆಯವರ ಕುಟುಂಬದವರು ಮಾತ್ರ ಇದ್ದೆವು.

ನಾನು ಬಾವುಟ ಹಾಕಲು ಹೋದಾಗ ಮುಖದ ಬಟ್ಟೆಯನ್ನು ಸರಿಸಿದರು. ಮುಗಿನಿಂದ ರಕ್ತ ಹೊರಬರುತ್ತಲೇ ಇತ್ತು. ದೇಹ ಸಣ್ಣಗಾಗಿತ್ತು. ಮಾನಪಡೆಯವರು ಎಲ್ಲವನ್ನು ತ್ಯಜಿಸಿ ನಿಸ್ತೇಜರಾಗಿದ್ದರು.

ಇತ್ತ ಜನತೆ ಅಳು, ದುಃಖದೊಂದಿಗೆ, ಘೋಷಣೆಗಳೊಂದಿಗೆ ನೆರೆದಿದ್ದರು. ನನಗೆ ಸಂಗೋಳ್ಳಿ ರಾಯಣ್ಣನ ಸಿನಿಮಾದಲಿನ ದೃಶ್ಯ ನೆನಪಾಯಿತು. ಸಂಗೊಳ್ಳಿ ರಾಯಣ್ಣರನ್ನು ಬ್ರಿಟಿಷರು ನೇಣು ಗಂಬಕ್ಕೆ ಏರಿಸಿದಾಗ ಜನತೆ ಹೇಗೆ ಗುಂಪಾಗಿ ಬಂದು ದುಃಖಿಸುತ್ತಿದ್ದ ದೃಶ್ಯ ನನ್ನ ಕಣ್ಣ ಮುಂದೆ ಹಾದು ಹೋಯಿತು. (ಅಂದಿನ ಜನಶಕ್ತಿ ಮೀಡಿಯಾ ನೋಡಿ)

ಕರೋನಾ ಇದ್ದರೂ, ಮಹಿಳೆಯರು, ಮಕ್ಕಳು, ಮುದುಕರು, ಪುರುಷರು, ಯುವಕರು, ಕಾಂಗ್ರೆಸ್, ಜೆಡಿಎಸ್, ಬಿಜೆಪಿ, ಸಿಪಿಐ ಪಕ್ಷದ ಮುಖಂಡರು, ದಲಿತ ಸಂಘಟನೆಗಳು, ಅಧಿಕಾರಿಗಳು, ಹಲವು ಗ್ರಾಮಗಳ ಮುಖಂಡರು, ಕೆಪಿಆರ್‌ಎಸ್, ಸಿಐಟಿಯು, ಕೃಷಿಕೂಲಿಕಾರರ ಸಂಘ, ವಾಟರ್‌ಬೋರ್ಡ್ ಸಂಘ, ಪಂಚಾಯ್ತಿ, ಅಂಗನವಾಡಿ, ಎಫ್‌ಎಂಆರ್‌ಐ, ಕಾಮ್ರೇಡ್ ಕಾರ್ಮಿಕ ಸಂಘ, ಬಿಸಿಯೂಟ, ಪತ್ರಕರ್ತರ ಸಂಘ ಇನ್ನು ಮುಂತಾದ ಸಂಘಗಳು ನಾಯಕರು, ಕಾರ್ಯಕರ್ತರು ಬಂದಿದ್ದರು.

ಬೀದರ್, ಯಾದಗಿರಿ, ಬೆಳಗಾವಿ, ಬಿಜಾಪುರ, ಬಳ್ಳಾರಿ, ಮಂಡ್ಯ, ಚಿಂಚೊಳಿ, ಗದಗ್‌ನ ಕೆಲವು ಸಂಗಾತಿಗಳು ನಂತರ ಅಂಬಲಗಾದಲ್ಲಿಯೇ ಶ್ರದ್ಧಾಂಜಲಿ ಸಭೆಯನ್ನು ನಡೆಸಿದೆವು. ನನಗೆ ಅಶ್ಚರ್ಯ ಕರೋನಾದಿಂದ ಮೃತರಾದವರನ್ನು ಕುಟುಂಬದ ಇಬ್ಬರು ಮಾತ್ರ ನೋಡಲು ಅವಕಾಶ, ನಂತರ ಅವರ ಅಂತ್ಯಕ್ರಿಯೆ ನಡೆಸುವುದು ಜಿಲ್ಲಾಡಳಿತ ಎಂಬುದು ನಮಗೆಲ್ಲಾ ಗೊತ್ತಿರುವ ಸಂಗತಿ.

ಆದರೆ ಕಾಂ॥ ಮಾನಪಡೆಯವರ ದೇಹವನ್ನು ಸೊಲ್ಲಾಪುರದಿಂದ ಗುಲ್ಬರ್ಗಾಕ್ಕೆ ತರಲು ಅಂತರ ಕೇವಲ 130 ಕಿಲೋ ಮೀಟರ್ ಆದರೂ ಕೂಡ ಮಹಾರಾಷ್ಟ್ರ ಮತ್ತು ಕರ್ನಾಟಕದ ಸಿಪಿಐ(ಎಂ)ನ ರಾಜ್ಯ ಸಮಿತಿಗಳ ಪ್ರಯತ್ನದಿಂದ ಅಂಬಲಗಾಗೆ ತಂದಿದ್ದು ಒಂದು ಸವಾಲಾಯಿತು.



ಕರೋನಾ ಸಾಂಕ್ರಾಮಿಕ ರೋಗಕ್ಕೆ ಸವಾಲೆಸೆದು ಜನ ಏಕೆ ಬಂದರು.?

ಕಾಂ॥ ಮಾರುತಿ ಮಾನಪಡೆಯವರು ಆರೋಗ್ಯ ಇಲಾಖೆಯಲ್ಲಿ ಆರೋಗ್ಯ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದರು. ತಂದೆ ತುಕಾರಾಂ ತಾಯಿ ರತ್ನಮ್ಮ ರವರ ಮೊದಲ ಮಗ ಮಾರುತಿ ಮಾನಪಡೆ ಇವರ ನಾಲ್ಕು ತಮ್ಮಂದಿರು ರಾಮಚಂದ್ರ, ಬಾಬುರಾವ, ಪ್ರಭುಲಿಂಗ ಮತ್ತು ಅಂಬಾರಾವ್.

ಆರೋಗ್ಯ ಇಲಾಖೆಯಲ್ಲಿ 1977ರಲ್ಲಿ (ಅಂದಾಜು) ನಡೆದ ಧೀರೋದ್ಧಾತ ಹೋರಾಟದಲ್ಲಿ ಮಾನ್ಪಡೆಯವರು ಪ್ರಮುಖ ನಾಯಕತ್ವ ವಹಿಸಿದ್ದರು. ಆಗಿನ ಪಕ್ಷದ ಕಾರ್ಯದರ್ಶಿ ಕಾಮ್ರೇಡ್ ಹಸನ್‌ಖಾನ್ ಸಾಬ್‌ರವರು ಇವರನ್ನು ಗುರ್ತಿಸಿದ್ದರು. 1978–79 ರಲ್ಲಿ ಕಾಮ್ರೇಡ್ ವಿಜಯ ಶರ್ಮಾ ಎಂಬುವರು ಹೊಲಿಗೆ ಯಂತ್ರ ವ್ಯಾಪಾರಿ ಮತ್ತು ಜಿಲ್ಲಾ ಪಂಚಾಯ್ತಿ ಸದಸ್ಯರು ಆಗಿದ್ದರು. ನಂತರ ಅಂಬಲಗಾ, ಮುಗುಳಿ ಗ್ರಾಮಗಳಲ್ಲಿ ಬಂದು ಯುವಕರ ತಂಡವನ್ನು ಕಟ್ಟಿದ್ದರು. ಆ ತಂಡದ ನಾಯಕ ಮಾರುತಿ ಮಾನಪಡೆಯವರು, ಮೇಘರಾಜ ಕಠಾರೇಯವರು ಕೂಡಾ ಅದೇ ಗುಂಪಿನಲ್ಲಿದ್ದವರು.

ನಂತರ ಅದೇ ಯುವಕ 1987 ರಲ್ಲಿ 7877 ಮತಗಳ ಅಂತರದಿಂದ ಅಂದಿನ ಕಾಂಗ್ರೇಸ್ ಮತ್ತು ಜನತಾ ಪರಿವಾರದ ಅಭ್ಯರ್ಥಿಗಳನ್ನು ಸೋಲಿಸಿ ಜಿಲ್ಲಾ ಪರಿಷತ್ ಸದಸ್ಯರಾಗಿ ಗೆದ್ದಿದ್ದರು. ಆ ದಿನಗಳಲ್ಲಿ ಇವರ ಪ್ರಮುಖ ಹೋರಾಟ ಎಲ್ಲಾ ಮಕ್ಕಳಿಗೆ ಶಿಕ್ಷಣ ಸಿಗಬೇಕು ಎಂಬುದು. ಅಲ್ಲಿಯ ಸರ್ಕಾರಿ ಶಾಲೆಯಲ್ಲಿ ಶಿಕ್ಷಕರೇ ಇಲ್ಲ. ಆದ್ದರಿಂದ ಶಿಕ್ಷಕರು ಬೇಕು ಎಂಬುದು ಮೊದಲ ಬೇಡಿಕೆ. ಇಂದಿಗೂ ಅಲ್ಲಿ ಚರಂಡಿ ವ್ಯವಸ್ಥೆ, ನೀರಿನ ವ್ಯವಸ್ಥೆ, ಇಲ್ಲದಿರುವುದರಿಂದ ಅಲ್ಲಿಯ ಜನರು ದಿನನಿತ್ಯ ಶೌಚಾಲಯಕ್ಕೆ ಹೋಗುವುದೇ ಪ್ರಮುಖ ಸಮಸ್ಯೆ. ಈ ಬಗ್ಗೆ ಹೊಸ ಕಣ್ಣೋಟವನ್ನು ಕೊಟ್ಟು ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಸಾಮೂಹಿಕ ಶೌಚಾಲಯಗಳನ್ನು ಕಟ್ಟಬೇಕೆಂದು ಹೋರಾಟಗಳನ್ನು ನಡೆಸಿ ಯಶಸ್ಸನ್ನು ಪಡೆದರು.



ಅಲ್ಲಿಯ ಕೃಷಿ, ರೈತ, ಕುಟುಂಬಗಳ ವಿಮೋಚನೆಗಾಗಿ ಬಹಳ ಪ್ರಮುಖವಾದದ್ದು ಶಿಕ್ಷಣ, ಶೌಚಾಲಯದೊಟ್ಟಿಗೆ ಸ್ವತಂತ್ರ ಆದಾಯ ಅದಕ್ಕಾಗಿ ನಡೆದ ಚಳುವಳಿಗಳು, ಪಾದಯಾತ್ರೆಗಳಿಗೆ ಲೆಕ್ಕವಿಲ್ಲ. ಇದರ ಪರಿಣಾಮ ಇಂದು ಮಹಗಾಂವ ಕ್ರಾಸ್‌ನಲ್ಲಿರುವ ಬೆಳೆ ಕೋಟೆ ಡ್ಯಾಮ್ (ಗಂಡೂರಿ ನಾಲಾ ಡ್ಯಾಂ) ಮತ್ತು ಹೇರೂರ ಕ್ರಾಸನಲ್ಲಿರುವ ಬೆಣ್ಣೆತೊರಾ ಡ್ಯಾಂಗಳ ನಿರ್ಮಾಣ.

ನಂತರ ಬಾಲಾವಾಡಿ ಕೇಂದ್ರಗಳಲ್ಲಿ ಸಹಾಯಕರ ಸಂಘ, ಅಂಗನವಾಡಿ, ಕಾರ್ಯಕರ್ತೆಯರ ಸಂಘ, ಪಂಚಾಯ್ತಿ ನೌಕರರ ಸಂಘಟನೆಗಳನ್ನು ಜಿಲ್ಲೆಗಳಲ್ಲಿ ಸ್ಥಾಪನೆ ಮಾಡಿದ ಕೀರ್ತಿಯೂ ಇವರಿಗೆ ಇದೆ.

ಮಾನಪಡೆಯವರು ನನಗೆ ಮೊದಲ ಪರಿಚಯ 1995ರಲ್ಲಿ ಪಕ್ಷದ ರಾಜ್ಯ ಸಮ್ಮೇಳನ ಗುಲ್ಬರ್ಗಾದಲ್ಲಿ ನಡೆದಾಗ ಆಯಿತು. ಈ ಸಮ್ಮೇಳನದ ವೇಳೆಗೆ ನನ್ನ ತಾಯಿ ತೀರಿಕೊಂಡು 11 ದಿನದ ತಿಥಿಕ್ರಮ ಮಾಡಬೇಕಿತ್ತು. ನಾನು ಅದರಲ್ಲಿ ಸಂಪೂರ್ಣ ಇರಲು ಆಗುವುದಿಲ್ಲವೆಂದೂ ಹೋರಾಟ ನಡೆಸಿ ಪಕ್ಷದ ರಾಜ್ಯ ಸಮ್ಮೇಳನಕ್ಕೆ ಮೊದಲ ಬಾರಿ ಪ್ರತಿನಿಧಿಯಾಗಿ ಭಾಗವಹಿಸಿದ್ದೆ. ನಾನು ಪ್ರಯಾಣಿಸುತ್ತಿದ್ದ ರೈಲಿನಲ್ಲಿ ಕಾಂ॥ ಜಿ.ವಿ. ಶ್ರೀರಾಮರೆಡ್ಡಿಯವರು (ಶಾಸಕರಾಗಿದ್ದರು) ಇದ್ದರು. ಆಗ ಕಾಂ॥ ಮಾರುತಿ ಮಾನಪಡೆಯವರು ಪರಿಚಯರಾದರು. ಅವರು ರಾಜ್ಯದಲ್ಲಿ ಶಾಸಕರ, ಮಂತ್ರಿಗಳು ಅಧಿಕಾರಿಗಳ ಬಳಿ ಹೋಗಿ ಚರ್ಚಿಸಲು ಧೈರ್ಯ ತುಂಬುತ್ತಿದ್ದರು. ತುಂಬಾ ಅಧಿಕಾರಿಗಳ ಖಾಸಗಿ ನಂಬರ್‌ಗಳನ್ನು ಅವರೇ ಕೊಡುತ್ತಿದ್ದರು. 'ಹೆದರಬೇಡ, ನಿಮ್ಮ ಸಂಘಟನೆಯ ಬಲದ ಸಾಮಾರ್ಥ್ಯ ನಿಮೊಟ್ಟಿಗಿದೆ. ನೀವು ಹೋಗಿ ಪರಿಚಯ ಮಾಡಿಕೊಂಡರೆ ಸಾಕು' ಎಂದು ಹೇಳುತ್ತಿದ್ದರು.



ಹೀಗೆ' ಮಾನಪಡೆಯವರು ತಳಹಂತದಿಂದ ಮೇಲಿನ ಹಂತದವರೆಗೂ ಮಾಡಿದ ಕೆಲಸದ ಪರಿಣಾಮ ಅವರ ಅಂತ್ಯ ಸಂಸ್ಕಾರದ ದಿನ ಅಷ್ಟು ಜನ ಸೇರಲು ಕಾರಣವಾಯಿತು.

ರಾಜ್ಯದಲ್ಲಿ ರೈತ, ಕಾರ್ಮಿಕ, ಕೃಷಿ, ಕೂಲಿಕಾರರು, ದೇವದಾಸಿ, ದಲಿತ, ವಿದ್ಯಾರ್ಥಿ, ಯುವಜನ, ಮಹಿಳೆಯರನ್ನು ಸಂಘಟಿಸಿ ಅವರ ಬೇಡಿಕೆಗಳನ್ನು ಈಡೇರಿಸುವ ಪ್ರಮುಖ ಪಾತ್ರ ವಹಿಸುತ್ತಿದ್ದರು. ಅವರ ಸೇವಾ ಮತ್ತು ಹೋರಾಟದ ಮನೋಭಾವದಿಮದಾಗಿ ಹಲವಾರು ಮಂತ್ರಿಗಳು ಅಧಿಕಾರಿಗಳು ತುಂಬಾ ಆತ್ಮೀಯರಾಗಿದ್ದರು.

ಆದರೆ ಈ ಆತ್ಮೀಯತೆಯನ್ನು ತನ್ನ ಕುಟುಂಬಕ್ಕೆ ಎಂದೂ ಬಳಸಿಕೊಳ್ಳಲಿಲ್ಲ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**